

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 8, 2010 ರೂ. 12/-

ಗೀತಾ ನಾಗಭೂಷಣ್
ಅಳಿಯ ಮನೆ ತೊಳಿಯ






ಸ್ಕೂಪ್

ಮಕ್ಕಳ ಟ್ರಸ್ಟಿಗೆ ೦ ಕೋಟಿ ಗಣಿ ದುಡ್ಡು

ಲಿಕಾಂ ಕರಣ

ನೀರಾ ಮಾಡಿದ ರಾಡಿ






ಯಡ್ಡಿ ಪರ ನಿಂತ ಮಠಾಧೀಶರ ಲೀಲೆಗಳು

ಆದರ್ಶ ಗ್ರೂಪ್ ಯಡ್ಡಿಯ ಬೇನಾಮಿ ಕೂಟ





ನಂಬಿಕೆಗಳು, ಕುರುಡು ನಂಬಿಕೆಗಳು ಮತ್ತು ಅಶೀಶ್ ನಂದಿಗಳು!

ನಂದಿಯವರು ಕೇವಲ ಉಗ್ರ ಸೆಕ್ಯುಲರಿಸಂ ಅನ್ನು ಮಾತ್ರ ಆಧುನಿಕತೆಯ ಏಕೈಕ ಮಾದರಿಯೆಂದು ಭಾವಿಸುವುದರಿಂದಲೇ ಇಂಥ ಕ್ರೌರ್ಯರಹಿತ, ನೈಜ ಪ್ರಜಾತಾಂತ್ರಿಕ ಆಧುನಿಕತೆಯ ಸಾಧ್ಯತೆಗಳ ಕಡೆಗೆ ಕುರುಡಾಗಿದ್ದಾರೆ. ಅಂಬೇಡ್ಕರ್, ಫುಲೆ ಇವರೆಲ್ಲರೂ ಪ್ರಯತ್ನಿಸಿದ್ದು ಇಂಥಾ ಆಧುನಿಕತೆಗೇ! ಅಂಥಾ ಸೈದ್ಧಾಂತಿಕ ಪ್ರಸ್ಥಾನ ಸಾಧ್ಯವಾಗಬೇಕೆಂದರೆ ಆಧುನಿಕತೆಯ ಆಚಾರ್ಯರೂ ಮತ್ತು ಆಶಿಶ್ ನಂದಿಯವರು ಇಬ್ಬರೂ ದ್ವೈಮಾನಿಕತೆಗಳ ಸ್ವಯಂಕೃತ ದ್ವಂದ್ವಗಳಿಂದ ಹೊರಬರಬೇಕು.



ಚಾರ್ವಾಕ

» ಶಿವಸುಂದರ್

ಬಾಬ್ರಿ ಮಸೀದಿ ವಿವಾದದ ಬಗ್ಗೆ ಅಲಹಾಬಾದಿನ ತ್ರಿಸದಸ್ಯ ಪೀಠ ಕೊಟ್ಟ ತೀರ್ಪಿನ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ತೀರ್ಪು ಪ್ರಕಟವಾದ ಕ್ಷಣದಲ್ಲಿ ಎಲ್ಲರಿಗೂ ಸಮಾಧಾನಕರವಾಗಿ ಕಂಡಿದ್ದು ಈ ವಿವಾದದಲ್ಲಿ ಪಾರ್ಟಿಗಳಾಗಿದ್ದ (ಸಾಕ್ಷಾತ್ ಬಾಲರಾಮನೂ ಇದರಲ್ಲಿ ಒಂದು ಪಾರ್ಟಿ!) ಮೂವರೂ ದಾವೆದಾರರಿಗೂ ಬಾಬ್ರಿಮಸೀದಿ ಜಾಗವನ್ನು ಸಮಾನವಾಗಿ ಹಂಚಿಕೆಯಾದದ್ದು. ಈ ವಿವಾದವು ಸೃಷ್ಟಿಸಿದ್ದ ರಕ್ತಪಾತದ ಹಸಿವಾಸನೆ ಇನ್ನೂ ಮಾಸಿಲ್ಲವಾದ್ದರಿಂದ ಹೇಗೋ ಇನ್ನಾದರೂ ಶಾಂತಿ ನೆಲಸಲಿ ಎಂಬ ಸದಾಶಯವೇ ಇದರ ಹಿಂದಿದ್ದ ಪ್ರಾರ್ಥನೆ! ಆದರೆ ತೀರ್ಪಿನ ಸಂಪೂರ್ಣ ವಿವರ ಹೊರಬರತೊಡಗಿದ ನಂತರ ನ್ಯಾಯಾಂಗ ಹೇಗೆ ಸಂಪೂರ್ಣವಾಗಿ ಹಿಂದೂತ್ವವಾದಿಗಳ ವಾದಕ್ಕೆ ಮಾನ್ಯತೆಯನ್ನು ಒದಗಿಸಿದೆ ಎಂಬುದು ಅನಾವರಣವಾಗತೊಡಗಿತು.

ಅದರಲ್ಲಿ ಅತ್ಯಂತ ಅಪಾಯಕಾರಿಯಾಗಿದ್ದು ದೇಶದ ಸಂವಿಧಾನ ರೂಪಿಸಿಕೊಟ್ಟ ನ್ಯಾಯಸಂಹಿತೆಗಿಂತ, ಸಾಕ್ಷಿ-ಪುರಾವೆಯಾಧಾರಿತ ನ್ಯಾಯದಾನಕ್ಕಿಂತ "ಬಹುಸಂಖ್ಯಾತರ" ನಂಬಿಕೆಯನ್ನೇ ನ್ಯಾಯದಾನಕ್ಕೆ ಪ್ರಧಾನ ಮಾನದಂಡವಾಗಿ ಪರಿಗಣಿಸಿದ್ದು. ಪುರಾಣದ ವ್ಯಕ್ತಿ ರಾಮ ಬಾಬ್ರಿ ಮಸೀದಿ ಇದ್ದ ಜಾಗದಲ್ಲೇ ಸಾಮಾನ್ಯ ಮನುಷ್ಯನಂತೆ ಹುಟ್ಟಿದ್ದ ಎಂಬುದು ಬಹುಸಂಖ್ಯಾತರ ನಂಬಿಕೆಯಾದ್ದರಿಂದ ಅದಕ್ಕಿಂತ ವಿಶೇಷವಾದ ಸಾಕ್ಷಿ ಪುರಾವೆಗಳ ಅಗತ್ಯವಿಲ್ಲವೆಂದು ತ್ರಿಸದಸ್ಯ ಪೀಠದ ಒಬ್ಬ ನ್ಯಾಯಮೂರ್ತಿ ಶರ್ಮ ಅಭಿಪ್ರಾಯಪಟ್ಟಿದ್ದಾರೆ. "ಸಂವಿಧಾನಕ್ಕಿಂತ ಈ ದೇಶದ ಜನರ ನಂಬಿಕೆಗಳು ಪುರಾತನವಾದದ್ದು. ಆದ್ದರಿಂದ ಅದೇ ಮುಖ್ಯ" ಎಂಬುದು ಅವರ ವಾದ. ನ್ಯಾಯಮೂರ್ತಿ ಅಗರ್‌ವಾಲ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ರಾಮದೇವರು ಮತ್ತು ಅಯೋಧ್ಯೆಯಲ್ಲಿ ಹುಟ್ಟಿದ್ದ ಎಂಬುದು ಹಿಂದೂಗಳ ಧಾರ್ಮಿಕ ನಂಬಿಕೆಯ ಭಾಗವೇ ಆಗುತ್ತದೆ ಎಂದು ತೀರ್ಪು ಕೊಟ್ಟಿದ್ದಾರೆ. ಹೀಗೆ ಮೇಲ್ನೋಟಕ್ಕೆ ನೋಡಿದರೆ ಯಾವುದನ್ನು ಹಿಂದೂತ್ವವಾದಿಗಳು ಈವರೆಗೆ ಭಂಡತನದಿಂದ ಮಂಡಿಸುತ್ತಿದ್ದರೋ ಅದಕ್ಕೆ ನ್ಯಾಯಾಲಯ ಗೌರವಾನ್ವಿತವಾದ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ ಹಾಗೂ ಈ ದೇಶದಲ್ಲಿ ಹಿಂದೂಗಳು ಬಹುಸಂಖ್ಯಾತರಾದ್ದರಿಂದ ಇಲ್ಲಿ ನ್ಯಾಯ, ಸಮಾನತೆ, ಕಾನೂನಿಗಿಂತ ಹಿಂದೂಗಳ ನಂಬಿಕೆಯೇ ಪ್ರಧಾನವಾಗಬೇಕು ಮತ್ತು ಇತರರು ಅದನ್ನು ಸೊಲ್ಲೆತ್ತದೆ ಪಾಲಿಸಬೇಕು ಎಂಬ ಹಿಂದೂತ್ವವಾದಿಗಳ ಆಕ್ರಮಣಕ್ಕೆ ಈ ತೀರ್ಪು ನ್ಯಾಯಾಂಗ ಮಾನ್ಯತೆಯನ್ನು ನೀಡಿದೆ.

ಈ ತೀರ್ಪೇ ಮಾದರಿಯಾಗುವುದಾದರೆ ಅದು ಬಹುಧರ್ಮೀಯವುಳ್ಳ ಈ ದೇಶದಲ್ಲಿ ಎಂಥಾ ದೊಡ್ಡ ಅರಾಜಕತೆಯನ್ನು ಉಂಟುಮಾಡಬಹುದು ಎಂಬುದನ್ನು ನಿಧಾನವಾಗಿ ಅರ್ಥಮಾಡಿಕೊಂಡ ಬಹಳಷ್ಟು ಜನ ನಂತರದಲ್ಲಿ ಈ ತೀರ್ಪನ್ನು ವಿರೋಧಿಸಲಾರಂಭಿಸಿದರು.

ಈ ತೀರ್ಪಿನಂತೆ ಮುಸ್ಲಿಮರೊಂದಿಗೆ 1/3 ಭಾಗದಷ್ಟು ಜಾಗವನ್ನು ಹಂಚಿಕೊಳ್ಳುವ ಬಗ್ಗೆ ಹಿಂದೂತ್ವವಾದಿಗಳಿಗೆ ಅಸಮಾಧಾನವಿದ್ದರೂ ತೀರ್ಪಿನ ಹಿಂದಿನ ತಾತ್ವಿಕತೆಯ ಬಗ್ಗೆ ಅವರಿಗೆ ಸಂಪೂರ್ಣ ಸಮಾಧಾನವಿದೆ. ಆದರೆ ಈ ತೀರ್ಪಿನ ದೂರಗಾಮಿ ಪರಿಣಾಮವನ್ನು ಅರ್ಥಮಾಡಿಕೊಂಡ ಬಹುಪಾಲು ಪ್ರಗತಿಪರರು ಮತ್ತು ಶಾಂತಿಪ್ರಿಯರು ಅದನ್ನು ವಿರೋಧಿಸುತ್ತಿದ್ದಾರೆ.

ಆದರೆ ಇದರ ನಡುವೆ ಇನ್ನೊಂದು ಬಗೆಯ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಈ ವಾದದ ರಾಜಕೀಯ ಏನು ಎಂಬುದನ್ನು ನಂತರ ಚರ್ಚಿಸೋಣ. ಈಗ ಆ ವಾದದ ಸಾರಾಂಶ ಏನೆಂದರೆ ಅಲಹಾಬಾದ್ ತೀರ್ಪು ಸ್ವಾಗತಾರ್ಹ, ಆದರೆ ಅದು ಹಿಂದೂತ್ವವಾದಿಗಳ ತಾತ್ವಿಕತೆಯನ್ನು ಎತ್ತಿಹಿಡಿಯುತ್ತಿದೆ ಎಂಬ ಕಾರಣಕ್ಕಲ್ಲ, ಬದಲಿಗೆ ಅದು ಪಾಶ್ಚಿಮಾತ್ಯ ಆಧುನಿಕತೆಯ ತಾತ್ವಿಕತೆಯಿಂದ ಪ್ರೇರಿತಗೊಂಡು ರಚಿತವಾದ ನ್ಯಾಯಸಂಹಿತೆಯ ಎಲ್ಲೆಗಳನ್ನು ದಾಟಿ ಈ ದೇಶದ ಜನರ ನಂಬುಗೆಗಳನ್ನು ಆಧರಿಸಿ ನ್ಯಾಯ ತೀರ್ಮಾನ ಮಾಡಲು ಪ್ರಯತ್ನಿಸಿ ಇತಿಹಾಸ ಸೃಷ್ಟಿಸಿದೆ ಎಂಬ ಕಾರಣಕ್ಕೆ.

ಈ ಬಗೆಯ ದೇಸೀ ಚಿಂತಕರಲ್ಲಿ ಅತ್ಯಂತ ಪ್ರಮುಖರು ಆಶೀಶ್ ನಂದಿಯವರು. ಇವರು ಮೂರು ವಾರದ ಕೆಳಗೆ ಮೇಲೆ ಹೇಳಿದ ದೇಸೀ ನೆಲೆಯಿಂದ ತೀರ್ಪನ್ನು ಸ್ವಾಗತಿಸುತ್ತಾ 'ತೆಹೆಲ್ಕಾ'ದಲ್ಲಿ ಬರೆದ ಲೇಖನವು ಈಗ ಅಕ್ಷರಸಂಭ್ರಮದಿಂದ ಅನುವಾದಗೊಂಡು ಹೋದ ವಾರ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಧಾನ ಲೇಖನವಾಗಿ ಪ್ರಕಟವಾಗಿದೆ. ಆಶೀಶರ ಚಿಂತನೆಗಳು 'ಮಾಸ್' ಮಟ್ಟದಲ್ಲಿ ಕನ್ನಡಕ್ಕೆ ಪರಿಚಯವಾಗುತ್ತಿರುವುದು ಈಗಲೇ! ಹೀಗಾಗಿ ಈ ತೀರ್ಪಿನ ಬಗೆಗಿನ ಅವರ ಅಭಿಪ್ರಾಯಗಳು, ಅದರ ಅಪಾಯಗಳು, ಹಾಗೆಯೇ ಅವರ ಎಡಪಂಥೀಯ ಚಿಂತನಾಕ್ರಮಗಳಿಗೆ ನೀಡುವ ಎಚ್ಚರವನ್ನೂ ಮತ್ತು ಅದೇ ಸಮಯದಲ್ಲಿ ಅದರ ಅಂತರ್ಗತ ಮಿತಿಗಳ ಬಗ್ಗೆ ಪರಿಚಯ ಮಾಡಿಕೊಳ್ಳುವ ಅಗತ್ಯವಿದೆ.

ಈ ದೇಸೀ ಚಿಂತನೆಗಳ ಪರಿಭಾಷೆ ಮತ್ತು ಹಲವಾರು ಸಾರಿ ಅವರು ತೆಗೆದುಕೊಳ್ಳುವ ನಿಲುವುಗಳು ಬಹಳಷ್ಟು ಸಾರಿ ಬಲಪಂಥೀಯ ಹಿಂದೂತ್ವವಾದಿ ನಿಲುವುಗಳಿಗೆ ಹತ್ತಿರವಿರುತ್ತದೆ. ಅದರರ್ಥ ಇವರು ಕೋಮುವಾದಿಗಳೆಂದಲ್ಲ, ಉದ್ದೇಶ ಸಾಮೀಪ್ಯವಿಲ್ಲದಿದ್ದರೂ ಭಾವ ಸಾಮೀಪ್ಯವಿರುವ ಈ ನಿಲುವುಗಳಿಂದಾಗಿ ಅವರನ್ನು ಎಡಪಂಥೀಯರು ಕೋಮುವಾದಿಗಳ ಪಟ್ಟಿಗೆ ಸೇರಿಸುವ ಪ್ರಮಾದ ಮಾಡಿರುವುದುಂಟು. ಅದು ಸರಿಯಲ್ಲ, ಆದರೆ ಆಶೀಶ್ ನಂದಿಯಂತವರು ಸಹ ಉದ್ದಕ್ಕೂ ತಮ್ಮ ದಾಳಿಗೆ ಪ್ರಧಾನ ಗುರಿಯನ್ನಾಗಿರಿಸಿಕೊಂಡಿದ್ದು 'ಆಧುನಿಕತೆಯ ವಕ್ತಾರರನ್ನೆ' ವಿನಾ ಹಿಂದೂತ್ವವಾದಿ ಫ್ಯಾಸಿಸ್ಟರನ್ನಲ್ಲ. ಇಂತಾ ದೇಸೀವಾದಿಗಳ ಕಟು ವಿಮರ್ಶಕರಾದ ಡಾ. ರಾಧಿಕಾ ದೇಸಾಯಿಯಂತವರು ಇವರನ್ನು ಕೋಮುವಾದಿಗಳ ಪಟ್ಟಿಗೆ ಸೇರಿಸುವುದನ್ನು ವಿರೋಧಿಸುತ್ತಲೇ ಬಹಳಷ್ಟು ಬಾರಿ ಅವರ ಸಿದ್ಧಾಂತಕ್ಕಿಂತ ಅವರ ಬೇಜವಾಬ್ದಾರಿ ಬೌದ್ಧಿಕತೆಯೆ ಹೆಚ್ಚು ಅಪಾಯವನ್ನುಂಟು ಮಾಡುತ್ತದೆ ಎಂದು ಹೇಳುತ್ತಾರೆ. ಈ ತೀರ್ಪಿನ ವಿಷಯದಲ್ಲೂ ಎದ್ದು ಕಾಣುತ್ತಿರುವುದು ಅವರ ಬೌದ್ಧಿಕ ಬೇಜವಾಬ್ದಾರಿ ಮತ್ತು ನಂದಿ ಮಾದರಿ ಸಂಸ್ಕೃತಿ ಚಿಂತನೆಯ ಮಿತಿಗಳೇ!

ಆಧುನಿಕತೆ ಪ್ರಣೀತ ಸಿದ್ಧಾಂತಗಳು ಆತ್ಮವಿಮರ್ಶೆ ಇಲ್ಲದೆ ಅಹಂಕಾರದ ಅಶ್ವತ್ಥಮರಕ್ಕೆ ಜೋತುಬಿದ್ದದ್ದರಿಂದ ಆಗಿರುವ-ಆಗುತ್ತಿರುವ ಅನಾಹುತಗಳ ಬಗ್ಗೆ ಆಶೀಶ್ ನಂದಿಯಂಥ ಸಂಸ್ಕೃತಿ ಚಿಂತಕರು ಎಚ್ಚರಿಸುತ್ತಲೇ ಬಂದಿದ್ದಾರೆ. ಆಧುನಿಕತೆಯ ಎರವಲು ಕಣ್ಣಿಂದ ನಮ್ಮ ಗತವನ್ನು ನೋಡಿದ್ದರಿಂದಲೇ ಅದು ನಮಗೆ ವಿಕೃತವಾಗಿ ಕಂಡಿದೆಯೆಂಬ ಅವರ ವಾದದಲ್ಲಿ ಸ್ವಲ್ಪ ಸತ್ಯವಿದೆ. ಆದರೆ ಅದಕ್ಕೆ ಅವರು ಸೂಚಿಸುವ ಪರ್ಯಾಯದ್ದೇ ಸಮಸ್ಯೆ.

ಅವರ ಪ್ರಕಾರ ಜನರ 'ನಂಬುಗೆ'ಗೆ ಈ ವಿಕೃತಿಗಳನ್ನೆಲ್ಲಾ ಸರಿಪಡಿಸುವ ಸಾಮರ್ಥ್ಯವಿದೆ. ಒಂದೆಡೆ ಆಧುನಿಕತೆಯೆಂದರೇನೇ ಏಕಶಿಲಾಕೃತಿಯುಳ್ಳ ಒಂದೇ ಸಾಧ್ಯತೆಯುಳ್ಳ ಏಕರೂಪಿ ವಿದ್ಯಮಾನ ಎಂದು ಭಾವಿಸುತ್ತಾ ತಮ್ಮೆಲ್ಲಾ ವಿಮರ್ಶಾತ್ಮಕ ಅಸ್ತ್ರಗಳನ್ನೂ ಝಳಪಿಸುವ ನಂದಿಯವರು, ಸಂಪ್ರದಾಯ ಮತ್ತು ಜನರ ನಂಬುಗೆಯ ಲೋಕದ ಬಗ್ಗೆ ಮಾತ್ರ ಸದಾ ರಕ್ಷಕರ ಪಾತ್ರ ವಹಿಸುತ್ತಾ ತಾವೂ ಮತ್ತೊಂದು ಅಶ್ವತ್ಥಮರವನ್ನೇರಿ ಕುಳಿತುಬಿಟ್ಟಿದ್ದಾರೆ. ಆದ್ದರಿಂದಲೇ ಬಾಬ್ರಿ ಮಸೀದಿ ವಿವಾದದ ಬಗೆಗಿನ ಅಲಹಾಬಾದ್ ಹೈಕೋರ್ಟಿನ ತೀರ್ಪಿನ ಬಗ್ಗೆ ಕಳೆದ ಸಾಪ್ತಾಹಿಕ ಪುರವಣಿಯಲ್ಲಿ ಅವರು ಬರೆದ ಲೇಖನವೂ ಇದೇ ಬಗೆಯ ಪೂರ್ವನಿರ್ಧಾರಿತ ಮತ್ತು ಸರಳರೇಖಾತ್ಮಕ ತೀರ್ಮಾನಗಳನ್ನೇ ಮತ್ತೊಮ್ಮೆ ಪ್ರತಿಪಾದಿಸುತ್ತದೆ.

"ಸೀಮಿತ ನ್ಯಾಯದ ಚೌಕಟ್ಟನ್ನು ಮೀರಿ" ಈ "ವಿಚಾರವನ್ನು ನ್ಯಾಯಾಧೀಶರು ಕರುಣೆ ಮತ್ತು ಮಾನವೀಯತೆಯ ದೃಷ್ಟಿಯಿಂದ" ನೋಡುವುದಕ್ಕೆ ಎಡೆ ಮಾಡಿಕೊಟ್ಟಿರುವುದು ಈ ತೀರ್ಪಿನ ಬಗ್ಗೆ ಅವರ ಸಂತೋಷಕ್ಕೆ ಪ್ರಧಾನ ಕಾರಣ. ಆದರೆ ತೀರ್ಪನ್ನು ಆಳವಾಗಿ ಅಧ್ಯಯನ ಮಾಡಿದರೆ ಮತ್ತು



ಅದರ ಕಾನೂನಾತ್ಮಕ ಪರಿಣಾಮವನ್ನು ಅರ್ಥಮಾಡಿಕೊಂಡರೆ ನಂದಿಯವರ ಸಂತೋಷಕ್ಕೆ ಕಾರಣವೇ ಇಲ್ಲವೆಂಬುದು ಅರ್ಥವಾಗುತ್ತದೆ. (ತೀರ್ಪಿನ ಬಗ್ಗೆ ಒಂದು ವಿವರವಾದ ವಿಶ್ಲೇಷಣೆ ಇದೇ ಅಂಕಣದಲ್ಲಿ ತಿಂಗಳ ಕೆಳಗೆ ಪ್ರಕಟವಾಗಿದ್ದನ್ನು ಓದುಗರು ಗಮನಿಸಿರಬಹುದು.) ನ್ಯಾಯಮೂರ್ತಿ ಖಾನ್ ಹೇಳುವಂತೆ "ಈ ವಿವಾದದ ಸುತ್ತ ಹೆಜ್ಜೆ ಇಟ್ಟ ಕಡೆಗಳಲ್ಲೆಲ್ಲಾ ನೆಲಬಾಂಬುಗಳಿದ್ದವು." ಬೆಳಕೇ ಇಲ್ಲದ ಸುರಂಗವನ್ನು ಹೊಕ್ಕ ನ್ಯಾಯಮೂರ್ತಿಗಳಿಗೆ ಬೆಳಕು ಕಂಡಿದ್ದು, ನಂದಿಯವರೇ ಗುರುತಿಸುವಂತೆ "ನ್ಯಾಯವನ್ನು ಪಕ್ಕಕ್ಕೆ ಸರಿಸಿದ" ನಂತರವೇ.

ಈ ತೀರ್ಪಿನಲ್ಲಿ ನಂದಿಯವರು ಕರುಣೆ ಮತ್ತು ಮಾನವೀಯತೆಯನ್ನು ಕಾಣುತ್ತಾರೆ. ಕರುಣೆಯೆಂಬ ಪರಿಕಲ್ಪನೆಯಲ್ಲಿ ದುರ್ಬಲರಿಗೆ ಆದ್ಯತೆ ದೊರೆಯುತ್ತದೆ. ಮಾನವೀಯತೆಯ ಪರಿಕಲ್ಪನೆಯಲ್ಲಿ ಅಮಾನವೀಯವಾದದ್ದನ್ನು ನಿರಾಕರಿಸುವ ದರ್ಶನವಿದೆ. ಈ ತೀರ್ಪಿನಲ್ಲಿ ನ್ಯಾಯಾಧೀಶರು ಕರುಣೆ ತೋರಿರುವುದು ದುರ್ಬಲ ನಿರ್ಮೋಹಿ ಅಖಾಡಕ್ಕೂ ಅಲ್ಲ, ಸುನ್ನಿ ವಕ್ಫ್ ಬೋರ್ಡಿಗೂ ಅಲ್ಲ. ಬದಲಿಗೆ ತಮ್ಮ ಫ್ಯಾಸಿಸ್ಟ್ ಬಲದಿಂದ ನ್ಯಾಯ ಮಾರ್ಗದ ತುಂಬೆಲ್ಲಾ "ನೆಲಬಾಂಬ್"ಗಳನ್ನು ಹೂತಿಟ್ಟು ಇಡೀ ದೇಶವನ್ನೇ ಒತ್ತೆ ಇರಿಸಿಕೊಂಡಿದ್ದ ವಿಶ್ವಹಿಂದೂ ಪರಿಷತ್ತಿಗೆ. ಅಂತಿಮವಾಗಿ ನ್ಯಾಯವನ್ನು ಅಡ್ಡಡ್ಡ ಸೀಳಿ ಮೂರು ಪಾಲು ಮಾಡಿದಾಗಲೂ ಸಿಂಹಪಾಲು ಸಿಕ್ಕಿದ್ದು ಪ್ರಬಲರಾದ ರಾಮವಾದಿಗಳಿಗೆ. ಇನ್ನು "ನ್ಯಾಯ"ವನ್ನೇ ಪಾಲಿಸಿದ್ದರೆ ರಕ್ತಪಾತವಾಗುತ್ತಿತ್ತು ಎಂಬ ಕಾರಣದಿಂದ "ನ್ಯಾಯವನ್ನು ಪಕ್ಕಕ್ಕೆ ಸರಿಸಿದ್ದು" ಕರುಣೆ ಮತ್ತು ಮಾನವೀಯತೆ ಎನ್ನುವುದಾದರೆ ಇಂಥಾ ನ್ಯಾಯವು ಒಂದು ಜನಾಂಗವನ್ನೇ

» 15

ನೋ ಕಾಮೆಂಟ್ಸ್

"ಭಾರತದಲ್ಲಿರುವ ಒಟ್ಟು ಬಡವರ ಸಂಖ್ಯೆ ಆಫ್ರಿಕಾ ದೇಶಗಳಲ್ಲಿರುವ ಬಡವರೆಲ್ಲರ ಒಟ್ಟು ಸಂಖ್ಯೆ ಹೆಚ್ಚು ಮೊದಲು ನಮ್ಮ ಪ್ರಗತಿಪರ ಚಳವಳಿಗಳು ಭೂ ಲೀಕರಿಂದ ಭೂಮಿ ಕಸಿದುಕೊಳ್ಳುವುದರ ಸುತ್ತ ಕೇಂ ಕರಿಸಿತ್ತು, ಈಗ ಕಾರ್ಪೊರೇಟ್ ಭೂದಾಹಿಗಳು ವ ಕಾರ್ಪೊರೇಟ್ ಪರ ಸರ್ಕಾರಗಳು ನಮ್ಮ ಒಂದಿಂ ಭೂಮಿಯನ್ನು ಕಸಿದುಕೊಳ್ಳದಂತೆ ನೋಡಿಕೊಳ್ಳುವ ಇಂದಿನ ಹೋರಾಟವಾಗಬೇಕು."

- ಅರುಂಧತಿ ರಾಂ

"ಒಬ್ಬ ಪ್ರಧಾನಮಂತ್ರಿ ತನ್ನ ಸರ್ಕಾರದ ಎಲ್ಲಾ ಗಳಿಗೂ ನೇರವಾಗಿ ಜವಾಬ್ದಾರರಾಗಿರುತ್ತಾರೆ. ಖಂ ವಾಗಿಯೂ ಈ 2ಜಿ ಸ್ಪೆಕ್ಟ್ರಮ್ ಹಗರಣದಿಂದ ಪ್ರ ಮಂತ್ರಿಯವರ ಇಮೇಜಿಗೆ ಪೆಟ್ಟು ಬಿದ್ದಿದೆ."

- ಪ್ರತಾಪ್ ಭಾನು ಮೆ

"ಭಾರತದ ಆರ್ಥಿಕತೆಯನ್ನು ಇಂಥಾ ಹಗರ ಮೂಲಕ ಹಿಂಡಿ ಹಿಪ್ಪೆಮಾಡುತ್ತಿರುವುದು ಕೇ ರಾಜಕಾರಣಿಗಳು ಮಾತ್ರವಲ್ಲ, ಈ ಹಗರಣಗಳ ಪ್ರಮು ಫಲಾನುಭವಿಗಳು ಕೈಗಾರಿಕೋದ್ಯಮಿಗಳು. ಮಾಧ್ಯಮ ಅದರ ಬಗ್ಗೆ ವರದಿಯನ್ನು ಮಾಡುವುದೇ ಇಲ್ಲ."

- ಮುಶಿರುಲ್ ಹಸನ್, ಇತಿಹಾಸ

"ಕೇವಲ ಕೆಲವು ಪ್ರಾಕೃತಿಕ ಸಂಪನ್ಮೂಲ ಮ ವ್ಯೂಹಾತ್ಮಕ ಸಂಬಂಧಗಳಿಗಾಗಿ ಭಾರತವು ಬರ್ಮಾದೊ ತನ್ನ ನಾಗರಿಕತೆಯ ಮೌಲ್ಯಗಳನ್ನೇ ವಿನಿಮಯ ಮಾಡಿಕೊ ರುವುದು ನನಗೆ ಆಕ್ರೋಶವನ್ನು ತರಿಸಿದೆ."

ಮುವಾಂಗ್ ಝುರ್ನಿ, ಅರ್ಥಶಾಸ್ತ್ರ

"ಮಹಿಳೆಯು ಪ್ರತಿಭೆ, ಪರಿಶ್ರಮ ಹಾಗೂ ಹೋರಾ ಮೂಲಕ ರಂಗಭೂಮಿಯಲ್ಲಿ ಸ್ಥಾನ ಪಡೆದಿದ್ದಾಳೆ. ಇ ಪುರುಷ ಸಮಾಜದಿಂದ ಸಿಕ್ಕ ಬಳುವಳಿಯಲ್ಲ. ರಂಗಭೂ ಮಹಿಳೆಯರನ್ನು ಅಲಂಕಾರಿಕ ವಸ್ತುವಾಗಿ ಬಳಸಿಕೆ ಬಾರದು. ಕಂಪನಿಗಳ ಕಾಲದಲ್ಲಿ ನಡೆದ ಊಳಿಗಮ ಪದ್ಧತಿ ನಿಲ್ಲಬೇಕು."

- ಡಾ. ವಿಜಯ

"ಮಠಾಧೀಶರು ಮತ್ತು ಸ್ವಾಮಿಗಳಾದವರು ಗಾ ಬೆಳಕು-ನೀರಿನಂತೆ ಎಲ್ಲ ಸಮುದಾಯಗಳಿಗೆ ಬೇಕಾಗಿರಬೇ ಎಲ್ಲಾ ಪಕ್ಷಗಳಲ್ಲಿ ಇಂದು ಯಾರೂ ಶುದ್ಧರಿಲ್ಲ ಎ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭಗ ಸ್ವಾಮಿಗಳಾದವರು ಯಾವಾಗಲೂ ತತ್ವಗಳನ್ನು ಬೆಂಬ ಬೇಕೇ ವಿನಾ ವ್ಯಕ್ತಿಗಳನ್ನಲ್ಲ, ಮುಖ್ಯಮಂತ್ರಿ ಇಡೀ ರಾಜ ಮುಖ್ಯಮಂತ್ರಿಯಾಗಬೇಕೇ ವಿನಾ ಒಂದು ಸಮುದಾಯಕ ಬಾರದು."

- ಗದುಗಿನ ತೋಂಟದಾರ್ಯ, ಸ್ವಾಮಿ

"ಸಾರ್ವಜನಿಕ ಹಿತಾಸಕ್ತಿಯ ಹೆಸರಿನಲ್ಲಿ ಕೈಗಾರಿಕೋದ್ಯಮಿಗಳನ್ನು ಓಲೈಸಲು ಸಾರ್ವಜನಿಕ ಕೊಂಡರೆ ನೀಡುತ್ತಿರುವ ಕರ್ನಾಟಕ ಕೈಗಾರಿಕಾ ಪ್ರದ ಅಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಇದ್ದೂ ಪ್ರಯೋ ವಿಲ್ಲ. ಗಣ್ಯರ ಲಾಭಕ್ಕಾಗಿ ಖಾಸಗಿ ವ್ಯಕ್ತಿಗಳ ಜಮೀನು ಪಡಿಸಿಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ. ಇಂತಹ ಕುಕೃ ಕೈಹಾಕಿರುವ ಮಂಡಳಿ ಮುಂದುವರೆಸಲು ಅರ್ಹವೇ ಅ

- ನ್ಯಾ. ಶೈಲೇಂದ್ರಕುಮಾ

"ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರ ನಿಘಂಟು ತಜ್ಞ ವೆಂಕಟಸುಬ್ಬಯ್ಯನವರು ಆಯ್ಕೆಯಾಗಿದ ಆದರೆ ಕಿಟೆಲ್ ಮತ್ತು ಡಾ. ಶಿವಪ್ಪನವರು ಮಾತ್ರ ಕನ್ನ ಮನಸ್ಸಿನಿಂದ ನಿಘಂಟು ರಚಿಸಿದ್ದರು. ವೆಂಕಟಸುಬ್ಬಯ್ಯನ ಪ್ರಾಜ್ಞರು, ತಜ್ಞರು, ಪಂಡಿತರು. ಆದರೆ ನಿಘಂಟು ರಚನೆಯ ಅವರು ಪೂರ್ಣ ಕನ್ನಡ ಮನಸ್ಸನ್ನು ಉಪಯೋಗಿ ಎಂಬುದು ನನ್ನ ಅಭಿಪ್ರಾಯವಾಗಿದೆ."

- ಪೇರೂರು ಜಾ

ನಂಬಿದ್ರೆನಂಬಿ ಬಿಟ್ರೆಬಿಡಿ

"ಮುಖ್ಯಮಂತ್ರಿ ಯಡಿಯೂರಪ್ಪನವರ ನೇತೃತ್ವದಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯ ಚುನಾವಣೆಗಳನ್ನು ಎದುರಿಸುತ್ತೇವೆ. ಅವರ ನಾಯಕತ್ವವ ಬದಲಾವಣೆ ಮಾಡದೆ ಮುಂದುವರೆಸುವಂತೆ ಕೇಂ ನಾಯಕತ್ವಕ್ಕೆ ಮನವಿ ಮಾಡಲಾಗಿದೆ."

- ಕೆ.ಎಸ್. ಈಶ್ವ

ಸೋತಿದ್ದರೂ ಇದೇ ಮಾತು ಹೇಳ್ತಿದ್ರಾ

"ಕೆಎಸ್‌ಸಿಎಯ ಮತದಾರರ ಬುದ್ಧಿವಂತಿಕೆಯ ಬ ನಮಗೆ ವಿಶ್ವಾಸವಿದ್ದೇ ಇತ್ತು ಮತ್ತು ಅವರು ನನ್ನ ನಂಬಿಕೆಯ ಹುಸಿಗೊಳಿಸಲಿಲ್ಲ."

- ಜಾವಗಲ್ ಶ್ರೀನಾ

ಇದೇ ಬುದ್ಧಿ ಭೈರಪ್ಪನವರಿಗೂ ಬಂದ್ರೆ ಎಷ್ಟು ಚೆ

"ನನಗೆ ಸಾಕಷ್ಟು ವಯಸ್ಸಾಗಿದೆ. ಇನ್ನು ನಾ ಬರೆಯಲಾರೆ. ಅಬ್ಬಬ್ಬಾ ಎಂದರೆ ಇನ್ನೊಂದು ಪು ಬರೆಯಬಹುದಷ್ಟೆ."

- ವಿ.ಎಸ್. ನೈಪಾ
ಬಲಪಂಥೀಯ ಇಂಗ್ಲಿಷ್ ಲೇ

ಬಿಹಾರವಾಗುತ್ತಿರುವ ಕರ್ನಾಟಕ




ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಿನ್ನೆ (24) ಬುಧವಾರ ಹಲವಾರು ಟಿವಿ ಚಾನೆಲ್‌ಗಳು ಎರಡು ಬೇರೆ ಬೇರೆ ದೃಶ್ಯಗಳನ್ನು ಪದೇಪದೇ ಬಿತ್ತರಿಸುತ್ತಿದ್ದವು. ಮೊದಲನೆಯದು ಬಿಹಾರದ ಚುನಾವಣೆಗಳಲ್ಲಿ ಜಯಭೇರಿ ಬಾರಿಸುವ ಮೂಲಕ ನಿಜವಾಗಲೂ ಜನರ ಮನ್ನಣೆ ಪಡೆದ ಅಲ್ಲಿನ ಮುಖ್ಯಮಂತ್ರಿ ನಿತೀಶ್ ಕುಮಾರ್ ವಿನಯದಿಂದ ಜನಾದೇಶವನ್ನು ಸ್ವೀಕರಿಸುತ್ತಿದ್ದ ದೃಶ್ಯ. ಎರಡನೆಯದು ತನ್ನ ಪಕ್ಷದ ಹಿರಿಯರನ್ನೇ ಬ್ಲ್ಯಾಕ್‌ಮೇಲ್ ಮಾಡಿ ತನ್ನ ಕುರ್ಚಿಯನ್ನು ಉಳಿಸಿಕೊಂಡ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ತಾನೊಂದು ದೊಡ್ಡ ಸಾಹಸವನ್ನೇ ಮಾಡಿದೆ ಎಂಬಂತೆ ಸಿಹಿ ಹಂಚುತ್ತಾ 'ವಿಕ್ಟರಿ' ಎಂದು ತಮ್ಮ ಕೈಬೆರಳನ್ನು ತೋರಿಸುತ್ತಿದ್ದದ್ದು.

ಅವೆರಡೂ ದೃಶ್ಯಗಳನ್ನು ನೋಡುತ್ತಿದ್ದಾಗ 'ಕರ್ನಾಟಕ ಬಿಹಾರದಂತಾಗುತ್ತಿದೆ, ಬಿಹಾರ ಕರ್ನಾಟಕದಂತಾಗುತ್ತಿದೆ' ಎನಿಸಿತು.

ಕೆಲವರ್ಷಗಳ ಹಿಂದಿನ ತನಕ 'ಬಿಹಾರ' ಅಂದರೇನೇ ಅಭಿವೃದ್ಧಿ ಕಂಡಿರದಿದ್ದ, ಬಡತನದ ಪ್ರತೀಕದಂತಿದ್ದ, ಜಾತಿಯೇ ಮುಖ್ಯವಾಗಿದ್ದ, ದುರಾಡಳಿತ ಮತ್ತು ಗೂಂಡಾ ಗ್ಯಾಂಗ್‌ಗಳಿಗೆ ಸಂಕೇತವಾಗಿತ್ತು. ನೈಸರ್ಗಿಕ ಸಂಪತ್ತನ್ನು ಹೇರಳವಾಗಿ ಹೊಂದಿದ್ದರೂ ಬಿಹಾರ ಭಾರತದ ಅತಿ ಹಿಂದುಳಿದ ರಾಜ್ಯವಾಗಿತ್ತು. ಅದಕ್ಕೆ ಮುಖ್ಯ ಕಾರಣ ಅಲ್ಲಿನ ರಾಜಕಾರಣಿಗಳ ದುಷ್ಟತನ. ಬಿಹಾರದ ರಾಜಕಾರಣದಲ್ಲಿ ಗೂಂಡಾಗಿರಿ, ಮತ ಪೆಟ್ಟಿಗೆಗಳ ಲೂಟಿ, ಕ್ರಿಮಿನಲ್‌ಗಳ ಭಾಗವಹಿಸುವಿಕೆ ಸಾಮಾನ್ಯವಾಗಿತ್ತು. ಅಲ್ಲಿನ ನಾಯಕರ ಹಗರಣಗಳಿಗೂ ಲೆಕ್ಕವಿಲ್ಲದಂತಾಗಿತ್ತು. ಈ ಎಲ್ಲ




ರಾಜಕಾರಣಿಗಳಿಂದಾಗಿ 'ಬಿಹಾರ' ಅಂತ ಅಂದರೆ ಅದು ಅಸ್ತವ್ಯಸ್ತತೆಗೆ ಸಮಾನವಾಗಿತ್ತು.

ಅದೇ ಸಂದರ್ಭದಲ್ಲಿ ಕರ್ನಾಟಕ ಅಂದರೆ ಪ್ರಗತಿ, ಸಹಿಷ್ಣುತೆ, ಸಂಯಮ, ಸಜ್ಜನಿಕೆಗೆ ಹೆಸರುವಾಸಿಯಾಗಿತ್ತು. ನಮ್ಮ ರಾಜಕಾರಣಿಗಳಲ್ಲಿ ಬಹಳಷ್ಟು ನಾಯಕರು ಸಮಾಜವಾದಿ ಹಿನ್ನೆಲೆಯಿಂದ ಬಂದಿದ್ದರಿಂದ ಅವರ ಬಗ್ಗೆ ಇತರೆಡೆ ಗೌರವವಿತ್ತು. ತಂತ್ರಜ್ಞಾನಕ್ಕೆ, ಬೃಹತ್ ಫ್ಯಾಕ್ಟರಿಗಳಿಗೆ, ಐಟಿ ಕ್ಷೇತ್ರಕ್ಕೆ, ಬಂಡವಾಳ ಹೂಡಿಕೆಗೆ ರಾಜ್ಯ ಖ್ಯಾತಿ ಪಡೆದಿತ್ತು. ಕನ್ನಡಿಗರೆಂದರೆ ಮಲೆಯಾಳಿಗಳಂತೆ ...ಚಾರದವರಲ್ಲ, ತಮಿಳರಂತೆ ಅತಿರೇಕದವರಲ್ಲ, ಬದಲಾಗಿ ತುಂಬಾ ಸುಸಂಸ್ಕೃತರು ಎಂಬ ಭಾವನೆ ಇತ್ತು.

ಆದರೀಗ ಬಿಹಾರ ಮತ್ತು ಕರ್ನಾಟಕದಲ್ಲಿ ಏನಾಗುತ್ತಿದೆ ನೋಡಿ.

ಅಲ್ಲಿ ಜಯಪ್ರಕಾಶ್ ನಾರಾಯಣ್ ಅವರ ಮಾರ್ಗದರ್ಶನದಲ್ಲಿ ರಾಜಕೀಯವನ್ನು ಪ್ರವೇಶಿಸಿದ, ಸಭ್ಯ ಮತ್ತು ಸಜ್ಜನ ಎಂದೇ ಹೆಸರು ಗಳಿಸಿರುವ, ಜಾತಿ-ಧರ್ಮಾತೀತ ಸಮಾನತೆಯೇ ಮುಖ್ಯ ಎಂಬ ಸಿದ್ಧಾಂತವನ್ನು ನಂಬಿರುವ, ರಾಜ್ಯದ ಅಭಿವೃದ್ಧಿಯನ್ನೇ ತನ್ನ ಪರಮ ಉದ್ದೇಶವಾಗಿಸಿಕೊಂಡು ಕಳೆದ ಐದು ವರ್ಷಗಳಿಂದ ದುಡಿದಿರುವ, ಒಂದೇ ಒಂದು ಹಗರಣವನ್ನೂ ಮಾಡಿಕೊಂಡಿರದ, ಬಿಹಾರದಲ್ಲಿನ ಕ್ರಿಮಿನಲ್‌ಗಳ ಅಟ್ಟಹಾಸವನ್ನು ನಿಯಂತ್ರಿಸಿರುವ ನಿತೀಶ್ ಕುಮಾರ್ ಜನರ ಮನ್ನಣೆ ಪಡೆದು ಮತ್ತೆ



ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ್ದಾರೆ.

ಆದರೆ ಕರ್ನಾಟಕದಲ್ಲಿ ಏನಾಗಿದೆ?

ಕೋಮುವಾದಿ ಸಿದ್ಧಾಂತವನ್ನೇ ಆಧರಿಸಿ, ಜಾತಿ ಪ್ರಾಬಲ್ಯವನ್ನೇ ಮೆರೆದು, ಗಣಿ ಲೂಟಿಕೋರರ ನೆರವು ಪಡೆದು ಮುಖ್ಯಮಂತ್ರಿ ಆದವರು ಯಡಿಯೂರಪ್ಪ. ಅಧಿಕಾರ ಸಿಕ್ಕ ನಂತರ ಅವರ ಆಡಳಿತದಡಿ ರೈತರ ಹತ್ಯೆ, ಚರ್ಚ್‌ಗಳ ಮೇಲೆ ದಾಳಿ, ದಲಿತರು ತಮ್ಮ ಮೈ ಮೇಲೆ ಮಲ ಸುರಿದುಕೊಂಡು ಪ್ರತಿಭಟಿಸುವಂತಹ ಅಸಹಾಯಕ ಪರಿಸ್ಥಿತಿಯ ಸೃಷ್ಟಿ..... ಇಂತಹ ನೂರಾರು ಘಟನೆಗಳು ನಡೆದಿವೆ. ಹೆಣ್ಣುಮಕ್ಕಳಿಗೆ ಸೈಕಲ್ ಹಂಚುವುದರಲ್ಲೂ ಡೀಲ್ ಕುದುರಿಸಿಕೊಂಡ ಯಡಿಯೂರಪ್ಪ ಆನಂತರ ಮಾಡಿಕೊಂಡ ಸಾವಿರಾರು ಕೋಟಿ ರೂಪಾಯಿಗಳ ಹಗರಣಗಳೆಲ್ಲ ಈಗ ದೇಶದ ಮಾಧ್ಯಮಗಳಲ್ಲೂ ವರದಿಯಾಗಿದೆ. ಯಡಿಯೂರಪ್ಪನಿಂದಾಗಿ ಪ್ರಮುಖ ಇಂಗ್ಲಿಷ್ ಪತ್ರಿಕೆ 'ಔಟ್‌ಲುಕ್' 'ಕರ್ನಾಟಕ ದೇಶದ ಅತಿ ಭ್ರಷ್ಟ ರಾಜ್ಯ' ಎಂಬ ಮುಖಪುಟ ವರದಿಯನ್ನೇ ಮಾಡಿದರೆ, 'ದ ಸಂಡೇ ಇಂಡಿಯನ್' ಎಂಬ ಮತ್ತೊಂದು ಪತ್ರಿಕೆ ಕೂಡ ಇತ್ತೀಚೆಗೆ 'ಮುಂದಿನ ಬಿಹಾರ ಯಾವುದು? ಕರ್ನಾಟಕವೋ ಅಥವಾ ಮಹಾರಾಷ್ಟ್ರವೋ?' ಎಂಬ ಮುಖಪುಟ ವರದಿಯನ್ನು ಪ್ರಕಟಿಸಿದೆ.

ಕರ್ನಾಟಕಕ್ಕೆ ಇದಕ್ಕಿಂತ ದೊಡ್ಡ ಅವಮಾನ ಬೇಕೆ?

ನಿಜವಾಗಲೂ ಬಿಹಾರವನ್ನು ಅಭಿವೃದ್ಧಿ ಮಾಡಿದ ಸಭ್ಯ ರಾಜಕಾರಣಿ ನಿತೀಶ್ ಕುಮಾರ್ ಎಲ್ಲಿ? ಕರ್ನಾಟಕವನ್ನು ಲೂಟಿ ಮಾಡಿದ ಯಡಿಯೂರಪ್ಪ ಎಲ್ಲಿ?

ವಿಪರ್ಯಾಸದ ಸಂಗತಿ ಯಾವುದೆಂದರೆ ಪ್ರತಿ ಬಾರಿ ಯಡ್ಡಿ ವಿರುದ್ಧ ಭಿನ್ನಮತೀಯರಾಗಲಿ, ರೆಡ್ಡಿಗಳ ಕಳ್ಳ ಗ್ಯಾಂಗ್ ಆಗಲಿ, ವಿರೋಧ ಪಕ್ಷದವರಾಗಲಿ ಪ್ರತಿಭಟಿಸಿದಾಗ ಯಡ್ಡಿ "ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಸಹಿಸದವರು ಈ ಪಿತೂರಿ ನಡೆಸುತ್ತಿದ್ದಾರೆ" ಎಂದು ಕಣ್ಣೀರಿಟ್ಟಿದ್ದಾರೆ, ರೇಗಿದ್ದಾರೆ, ಹಾಸ್ಯಾಸ್ಪದವಾಗಿ ವರ್ತಿಸಿದ್ದಾರೆ, ಇತ್ತೀಚೆಗಂತೂ ಬೆಂಗಳೂರಿನ ಬಿಟಿಎಸ್ ಬಸ್‌ಗಳ ಮೇಲೆಲ್ಲಾ ಯಡ್ಡಿಯ 'ಸಾಧನೆ'ಗಳನ್ನು ಹಾಡಿ ಹೊಗಳುವ ಪೋಸ್ಟರ್‌ಗಳನ್ನು ಮೆತ್ತಲಾಗಿದೆ. ಆದರೆ ಅವೆಲ್ಲ ಬರೀ ಫೋಟೋಗಳಷ್ಟೆ. ಏಕೆಂದರೆ ಯಡಿಯೂರಪ್ಪನ ಆಡಳಿತದ ಅವಧಿಯಲ್ಲಿ ಕರ್ನಾಟಕದ ಪ್ರಗತಿಯೇ ಕುಸಿದು ಬಿದ್ದಿದೆ.

ಇದಕ್ಕೆ ಸಾಕ್ಷಿ 'ಇಂಡಿಯಾ ಟುಡೆ' ಎಂಬ ಮತ್ತೊಂದು ಪತ್ರಿಕೆ ನಡೆಸಿರುವ ಸಮೀಕ್ಷೆ. ಭಾರತದ ಅತಿ ಉತ್ತಮ ಮತ್ತು ಕೆಟ್ಟ ರಾಜ್ಯಗಳು ಯಾವುವು ಎಂಬ ಈ ಸಮೀಕ್ಷೆಯಲ್ಲಿ ಕರ್ನಾಟಕ ಮತ್ತು ಬಿಹಾರದ ಇಂದಿನ ನಿಜವಾದ ಸ್ಥಿತಿಯನ್ನೂ ತೆರೆದಿಡಲಾಗಿದೆ.

ಕೃಷಿ, ಆರೋಗ್ಯ, ಶಿಕ್ಷಣ, ಕಾನೂನು ಮತ್ತು ಸುವ್ಯವಸ್ಥೆ, ಬಂಡವಾಳ ಹೂಡಿಕೆ, ಮೂಲಭೂತ ವ್ಯವಸ್ಥೆ ಇತ್ಯಾದಿಗಳನ್ನು ಮಾನದಂಡವಾಗಿ ಇಟ್ಟುಕೊಂಡು ಎಲ್ಲಾ ರಾಜ್ಯಗಳ ಸಮೀಕ್ಷೆ ಮಾಡಲಾಗಿದೆ. ಅದರ ಪ್ರಕಾರ ನಿತೀಶ್ ಕುಮಾರ್ ಅವರ ಆಡಳಿತದಡಿ ಬಿಹಾರ ಅತಿ ವೇಗದಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯವಾಗಿದೆ. ಅದಕ್ಕೆ ಪ್ರಮುಖ ಕಾರಣ ಆರೋಗ್ಯ ಮತ್ತು ಶಿಕ್ಷಣ ವಲಯದ ಮೇಲೆ ನಿತೀಶ್ ಕುಮಾರ್ ಹೆಚ್ಚು ಗಮನವನ್ನು ಮತ್ತು ಹಣವನ್ನು ಹೂಡಿರುವುದು. ಆದರೆ ಇದೇ ಅವಧಿಯಲ್ಲಿ ಕರ್ನಾಟಕ ಹಿಂದೆ ಇದ್ದ ಜಾಗದಲ್ಲೇ ನಿಂತಿದೆ.

ನೆನಪಿದೆಯೇ, ಕೆಲ ತಿಂಗಳ ಹಿಂದೆ ಗ್ಲೋಬಲ್ ಇನ್‌ವೆಸ್ಟರರ್ಸ್ ಮೀಟ್ ಎಂಬ ಬೃಹತ್ ಸಂತೆಯನ್ನು ಏರ್ಪಡಿಸಿದ್ದ ಯಡಿಯೂರಪ್ಪ ಆದರಿಂದಾಗಿ ಕೋಟಿಕೋಟಿ ರೂಪಾಯಿಗಳೇ ರಾಜ್ಯಕ್ಕೆ ಹರಿದುಬರುತ್ತದೆ ಎಂದು ಬೊಂಬಡಾ ಬಜಾಯಿಸಿದ್ದರು. ಆದರೆ ಈ ಸಮೀಕ್ಷೆಯ ಪ್ರಕಾರ ಬಂಡವಾಳವನ್ನು ಆಕರ್ಷಿಸುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಕುಸಿದಿದೆ! ಆದರೆ ಬಿಹಾರ-ಕೇಂದ್ರ ಸರ್ಕಾರದ ಒಡ್ಡಿದ ಅಡೆತಡೆಗಳ ನಡುವೆಯೂ- ಹಿಂದೆ ಪಡೆದಿದ್ದ ರ್‍ಯಾಂಕಿಂಗ್ ಅನ್ನೇ ಉಳಿಸಿಕೊಂಡಿದೆ.

ಹಾಗೆಯೇ ಯಡಿಯೂರಪ್ಪ ತಾನು ಅಭಿವೃದ್ಧಿ ಸಾಧಿಸಿದ್ದೇನೆ, ಆದ್ದರಿಂದ ಇತರರಿಗೆ ಹೊಟ್ಟೆಕಿಚ್ಚು ಎಂದೆಲ್ಲ ಎಷ್ಟೇ ಮೊಸಳೆ ಕಣ್ಣೀರಿಟ್ಟರೂ, ನಿಜವಾಗಲೂ ಕಣ್ಣೀರು ಹರಿಸುತ್ತಿರುವವರು ಈ ರಾಜ್ಯದ ಜನ. ಏಕೆಂದರೆ ಒಂದು ರಾಜ್ಯದ ಅಭಿವೃದ್ಧಿಯನ್ನು ಸೂಚಿಸುವ ಗ್ರಾಸ್ ಡೊಮೆಸ್ಟಿಕ್ ಪ್ರೊಡಕ್ಟ್ (ಜಿಡಿಪಿ) ಕೂಡ ನಮ್ಮ ರಾಜ್ಯದಲ್ಲಿ ಹಿಂದಿದ್ದಕ್ಕಿಂತ ಕುಸಿದಿದೆ. ಇದು ಯಡ್ಡಿಯ ಅಭಿವೃದ್ಧಿ ಪರಿ!

ರೈತರ ಹೆಸರಿನಲ್ಲಿ ಯಡಿಯೂರಪ್ಪನವರು ಪ್ರಮಾಣವಚನವನ್ನೇನೋ ಸ್ವೀಕರಿಸಿದರು. ಆದರೆ ಅವರ ಆಡಳಿತದಲ್ಲಿ ರಾಜ್ಯದ ಕೃಷಿ ವಲಯವೂ ಕುಸಿದಿದೆ.

ಬಿಹಾರದಲ್ಲಿ ನಿತೀಶ್ ಕುಮಾರ್ ಮಹಿಳೆಯರಿಗೆ ಪಂಚಾಯತಿಗಳಲ್ಲಿ ಶೇ. 50 ಮೀಸಲಾತಿ ನೀಡಿ ಅಲ್ಲಿನ ಮಹಿಳೆಯರನ್ನು ಪ್ರೋತ್ಸಾಹಿಸುತ್ತಿದ್ದರೆ, ಇಲ್ಲಿ ಯಡಿಯೂರಪ್ಪ ಮಹಿಳೆಯರಿಗೆ ಜುಜುಬಿ ಸೀರೆಗಳನ್ನು ಹಂಚಿ "ನನ್ನ ಕೈ ಬಿಡಬೇಡಿ ತಾಯಂದಿರೇ" ಎಂದು ಅಂಗಲಾಚುತ್ತಿದ್ದಾರೆ.

ಅಲ್ಲಿ ಯಾದವ್-ಮುಸ್ಲಿಂ ಎಂಬ ಮತಬ್ಯಾಂಕುಗಳನ್ನು ಆಧರಿಸದೇ, ಗುಜರಾತಿನ ನರಹಂತಕ ಮೋದಿ ತನ್ನ ರಾಜ್ಯದಲ್ಲಿ ಪ್ರಚಾರ ಮಾಡದಂತೆ ತಡೆಹಿಡಿದು, ಎಲ್ಲರ ವಿಶ್ವಾಸ ಗಳಿಸಿ ನಿತೀಶ್ ಮುಖ್ಯಮಂತ್ರಿಯಾದರೆ ಇಲ್ಲಿ ಯಡಿಯೂರಪ್ಪ ತನ್ನ ಲಿಂಗಾಯತ ಜಾತಿಯ ಮಠಾಧೀಶರನ್ನು ಮತ್ತು ರಾಜಕಾರಣಿಗಳನ್ನು ಕಟ್ಟಿಕೊಂಡು ಕೆಟ್ಟ ಜಾತಿ ರಾಜಕೀಯ ಮಾಡಿ ತಮ್ಮ ಕುರ್ಚಿ ಉಳಿಸಿಕೊಳ್ಳುತ್ತಾರೆ. ಅಲ್ಲಿ ನಿತೀಶ್ ಕುಮಾರ್ ಸರಳ ಜೀವನ ನಡೆಸುತ್ತಾ ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದರೆ, ಇಲ್ಲಿ ಯಡಿಯೂರಪ್ಪನ ದಂಡಪಿಂಡಗಳು ಕೋಟ್ಯಾಂತರ ರೂಪಾಯಿಗಳನ್ನು ಲಂಚವಾಗಿ ಪಡೆದು ಸಿಕ್ಕಿ ಬೀಳುತ್ತಿದ್ದಾರೆ.

ಇವತ್ತು ದೇಶದ ಬಹಳಷ್ಟು ಜನ ನಿತೀಶ್ ಕುಮಾರ್ ಮತ್ತು ಬಿಹಾರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದರೆ, ಅದೇ ಜನ ಯಡಿಯೂರಪ್ಪ ಮತ್ತು ಕರ್ನಾಟಕದ ಬಗ್ಗೆ ಲೇವಡಿ ಮಾಡಿ ಕನ್ನಡಿಗರೆಲ್ಲರೂ ಅವಮಾನದಿಂದ ತಲೆ ತಗ್ಗಿಸುವಂತೆ ಆಗಿದೆ.

ಅದಕ್ಕೆ ಮೊದಲೇ ಹೇಳಿದ್ದು: ಇವತ್ತು ಬಿಹಾರ ಕರ್ನಾಟಕವಾಗುತ್ತಿದ್ದರೆ, ಕರ್ನಾಟಕ ಬಿಹಾರ ಆಗುತ್ತಿದೆ. ಎಲ್ಲಿಯತನಕ ಯಡಿಯೂರಪ್ಪನಂತಹ ಭ್ರಷ್ಟ, ಕಳ್ಳ, ಸುಳ್ಳ, ಜಾತಿವಾದಿ ಮುಖ್ಯಮಂತ್ರಿ ಸ್ಥಾನಕ್ಕೆ ಜಿಗಣೆಯಂತೆ ಅಂಟಿಕೊಂಡಿರುತ್ತಾರೋ ಅಲ್ಲಿತನಕ ಈ ನಮ್ಮ ಕರುನಾಡು ಉದ್ಧಾರವಾಗುವುದಿಲ್ಲ. ●



'ಯಡ್ಡಿ ಪರ ನಿಂತ ಮಠಾಧೀಶರ ಲೀಲೆಗಳು

ಕರ್ನಾಟಕದ ರಾಜಕಾರಣ ಬಹಳ ಅಪಾಯಕಾರಿ ತಿರುವನ್ನು ಪಡೆದುಕೊಂಡಿದೆ.

ಲಿಂಗಾಯತ ಮಠಾಧೀಶರು ಖದೀಮ ಮುಖ್ಯಮಂತ್ರಿ ಯಡ್ಡಿಗೆ ಬಹಿರಂಗ ಬೆಂಬಲ ತೋರಿಸುವ ಮೂಲಕ ಜಾತಿಕಲಹ ಬಡಿದೆಬ್ಬಿಸುವ ಹೀನಕಾರ್ಯಕ್ಕೆ ಕೈ ಹಾಕಿದ್ದಾರೆ.

ಒಂದು ಕಡೆ ಯಡ್ಡಿ ಮತ್ತವರ ಮಕ್ಕಳ ಹಗರಣಗಳು ಪುಂಖಾನುಪುಂಖವಾಗಿ ಹೊರಬೀಳುತ್ತಿರುವಾಗ ಈ ಪುಢಾರಿ ಮಠಾಧೀಶರು ಯಡ್ಡಿಯ ರಕ್ಷಣೆಗೆ ನಿಂತಿದ್ದು ಆಕಸ್ಮಿಕ ಘಟನೆಯೇನಲ್ಲ, ಬದಲಾಗಿ ಕಳೆದ ಎರಡೂವರೆ ವರ್ಷದಿಂದ ಆಡಳಿತಾರೂಢ ಬಿಜೆಪಿ ಹಾಗೂ ಲಿಂಗಾಯತ ಮಠಗಳ ನಡುವೆ ಕುದುರಿದ್ದ ಅನೈತಿಕ ಸಂಬಂಧದ ಫಲಶ್ರುತಿ ಇದಾಗಿದೆ.

ಮೊನ್ನೆ ಬೀದಿಗೆ ಬಂದು ನಿಂತ ಕೋಳದ ಮಠ, ಬೆಳ್ಳಾವೆ ಮಠ, ಬಸವಧರ್ಮ ಪೀಠ, ಬೇಬಿ ಮಠ, ಕುಕ್ಕೂರು ಗದ್ದಿಗೆ ಮಠ ಮುಂತಾದ ಮಠಗಳ ಮಠಾಧೀಶರೆಲ್ಲಾ ಲಿಂಗಾಯತ ಜನಾಂಗದ ದೊಡ್ಡ ಮಠಾಧೀಶರೇನಲ್ಲ, ಇವರ ಮಠಗಳ ವ್ಯಾಪ್ತಿ, ಭಕ್ತರ ಸಂಖ್ಯೆ, ಪ್ರಭಾವಗಳೆಲ್ಲಾ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತವು. ಇವರಲ್ಲಿ ಕೆಲವರು ಲೀಲಾ ವಿನೋದಗಳಿಗೂ ಕುಖ್ಯಾತರು. ಬಸವಣ್ಣನ ಆದರ್ಶ, ಶರಣರ ಆಶಯಗಳ ತಲೆ ಬುಡ ಅರಿಯದ ಈ ಮಠಾಧೀಶರು ಒಬ್ಬ ಭ್ರಷ್ಟ ಲಿಂಗಾಯತ ರಾಜಕಾರಣಿಯ ಬೆಂಬಲಕ್ಕೆ ಬಂದು ನಿಂತಿರುವುದು ಅವರ ಅಯೋಗ್ಯತೆಗೆ ತಕ್ಕುದಾಗಿಯೇ ಇತ್ತು. ಆದರೆ ಈ ಪುಢಾರಿ ಮಠಾಧೀಶರನ್ನು ಮುಂದೆ ನಿಲ್ಲಿಸಿ ಅವರ ಬೆನ್ನ ಹಿಂದೆ ಯಡ್ಡಿ ಪರವಾಗಿ ದನಿಯೆತ್ತಿದ ಸಿದ್ದಗಂಗಾ ಸ್ವಾಮಿ, ದುರ್ಗದ ಮುರುಘಾ ಶರಣರು, ರಂಭಾಪುರಿ ಮಠಾಧೀಶರ ವರ್ತನೆ ಅನೇಕರಲ್ಲಿ ಜಿಗುಪ್ಸೆ ತರಿಸಿದೆ.

ಈ ಹಿಂದೆ ಜಾತಿ ಕಾರಣದಿಂದ ಒಬ್ಬ ರಾಜಕಾರಣಿಗೆ ಅಧಿಕಾರ ಸಿಗುವಂತೆ ಮಠಾಧೀಶರು ಲಾಬಿ ಮಾಡುತ್ತಿದ್ದುದು ಉಂಟು. ಎಲೆಕ್ಷನ್‌ಗೆ ಟಿಕೆಟು ಕೊಡಿಸುವುದು, ಓಟು ಹಾಕಿಸುವುದು ಹಣ ಕೊಡುವುದು ನಂತರ ಕೊಟ್ಟಿದ್ದಕ್ಕೆ ಎರಡು ಪಟ್ಟು ಪಡೆದುಕೊಳ್ಳುವ ವ್ಯವಹಾರಗಳೆಲ್ಲಾ ನಡೆದಿವೆ. ಈಗಲೂ ನಡೆಯುತ್ತಿವೆ.

ಆದರೆ ಇವತ್ತಿನವರೆಗೂ ಯಾವುದೇ ಮಠಾಧೀಶರೂ ಮಾನಗೇಡಿಗಳಂತೆ ಬೀದಿಗೆ ಬಂದು ಕಳ್ಳ ಎಂದು ಜಗಜ್ಜಾಹೀರುಗೊಂಡಿರುವ ಮುಖ್ಯಮಂತ್ರಿಯ ಪರ ನಿಂತಿರಲಿಲ್ಲ,

ಆದರೆ ಲಿಂಗಾಯತ ಮಠಾಧೀಶರು ಈಗ ಕಳ್ಳ ಖದೀಮರ ಪರ ನಿಂತು ತಾವೂ ಮರ್ಯಾದೆಗೆಟ್ಟವರೆಂಬುದನ್ನು ತೋರಿಸಿಕೊಂಡಿದ್ದಾರೆ. ಇಷ್ಟಕ್ಕೂ ಯಡ್ಡಿ ಗ್ಯಾಂಗ್ ಪರ ನಿಂತ ಈ ಮಠಾಧೀಶರ ಜಾತಕ ಏನೆಂದು ನೋಡಿದರೆ ಸಾಕು. ಅದೊಂಥರಾ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಅನ್ನಿಸುವಂತಿದೆ.

ಸ್ವಾಮಿಗಳ ಲೀಲಾ ವಿನೋದ

ಮೊದಲನೆಯದಾಗಿ ಈ ದಯಾನಂದ ಸ್ವಾಮಿ ಎಂಬುವನ ಪುರಾಣ ನೋಡೋಣ. ಬಳ್ಳಾರಿ ಮೂಲದ ಈ ಖಾವಿಧಾರಿ ಅಸಲಿಗೆ ಲಿಂಗಾಯತನೇ ಅಲ್ಲ ಎನ್ನುವವರಿದ್ದಾರೆ. ಈಗ ಬಸವ ಧರ್ಮ ಪೀಠ ಎಂಬ ಅಂಗಡಿ ತೆರೆದು ಕುಳಿತಿರುವ ದಯಾನಂದ ಸ್ವಾಮಿ ಮೂಲತಃ ಆರೆಸ್ಸೆಸ್ ಚೆಡ್ಡಿ ಕ್ಯಾಂಪ್‌ನಲ್ಲಿ ಟ್ರೈನಿಂಗ್ ಪಡೆದು ಬಂದಿರುವಾತ. ಕೆಲ ವರ್ಷಗಳ ಹಿಂದೆ ಮಾತೆ ಮಹಾದೇವಿಯ ಜೊತೆಯಲ್ಲೂ ಇದ್ದಾತ. ಬಳ್ಳಾರಿಯ ಜನ ಈತನ ಹಿನ್ನೆಲೆಯ ಬಗ್ಗೆ ಅನೇಕ ಘಟನೆಗಳನ್ನು ಪ್ರಸ್ತಾಪಿಸುತ್ತಾರೆ. ಅವೆಲ್ಲಾ ಈತನ ವ್ಯಕ್ತಿತ್ವದ ಬಗ್ಗೆಯೇ ಅನುಮಾನ ಹುಟ್ಟಿಸುವಂತಿವೆ.

ಸದ್ಯಕ್ಕೆ ಗೋರಕ್ಷಣೆ, ಗೋಹತ್ಯೆ ನಿಷೇಧ ಮಸೂದೆ ಎಂದೆಲ್ಲಾ ಓಡಾಡುತ್ತಿರುವ ದಯಾನಂದ ಸ್ವಾಮಿ ಆರೆಸ್ಸೆಸ್‌ನ ಹಿಂದೂ ಕೋಮುವಾದಿ ಅಜೆಂಡಾಗಾಗಿ ಕೆಲಸ ಮಾಡುತ್ತಿರುವಾತ. ಈತ ದಿಢೀರನೆ ಲಿಂಗಾಯತನಂತೆ ಪೋಜು ನೀಡಿರುವುದು ಲಿಂಗಾಯತರಲ್ಲೇ ಆಶ್ಚರ್ಯ ಮೂಡಿಸಿದೆ. ದಯಾನಂದ ಎನ್ನುವ ಈ ಆಸಾಮಿಯ ಹೆಸರೇ ಈತ ವೀರಶೈವ ಪರಂಪರೆಯ ಯಾವ ಪಂಥಕ್ಕಾಗಲಿ, ಮಠಕ್ಕಾಗಲಿ ಸೇರಿದವನಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಇನ್ನು ಬೆಳ್ಳಾವೆ ಮಠದ ಮಹಾಂತ ಶಿವಾಚಾರ್ಯರ ಪುರಾಣ ಹೇಳಬೇಕೆಂದರೆ ಕೋಲಾರ ಕಡೆಯ ಬೆಳ್ಳಾವೆಯಲ್ಲಿರುವ ಈ ಸಣ್ಣ ಮಠದ ಪ್ರಭಾವ ಕಡಿಮೆ. ಆದರೆ ಮಠಾಧೀಶ ಮಹಾಂತ ಶಿವಾಚಾರ್ಯರು ಮಾತ್ರ ಕುಖ್ಯಾತರೇ. ನಾನಾ ರೀತಿಯ ಡೀಲುಗಳು, ಬ್ರೋಕರಿಕೆ, ಮಠದೊಳಗೆ ಪ್ರತಿರಾತ್ರಿ ಗಾಂಜಾ ಲೀಲೆಗಳೇ ಅಲ್ಲಿನ ನಿತ್ಯ ದಾಸೋಹಗಳು.



ತುಮಕೂರಿನ ಚಿಕ್ಕನಾಯಕನಹಳ್ಳಿಯಲ್ಲಿರುವ ಕುಕ್ಕೂರು ಗದ್ದಿಗೆ ಮಠದ ಕತೆಯೂ ಇದಕ್ಕಿಂತ ಭಿನ್ನವಾಗೇನೂ ಇಲ್ಲ, ರಾಮೇಶ್ವರ ಶಿವಾಚಾರ್ಯ ಸ್ವಾಮಿಯ ಲೀಲಾ ವಿನೋದಗಳ ಬಗ್ಗೆ ತರಹೇವಾರಿ ಕತೆಗಳೇ ಇವೆ. ರಂಭಾಪುರಿ ಮಠಾಧೀಶರ ಕಂಟ್ರೋಲಿನಲ್ಲಿರುವ ಶಿವಾಚಾರ್ಯ ಸ್ವಾಮಿ ಮಕ್ಕಳಾಗಿರದ ಮಹಿಳೆಯರಿಗೆ "ನನ್ನ ಕೈಲಿ ನೀರು ಪಡೆದು ಕುಡಿದರೆ ಮಕ್ಕಳಾಗುತ್ತೆ" ಎಂದು ನಂಬಿಸಿದ್ದಾನೆ. ಈತನ ಸಂತಾನಭಿವೃದ್ಧಿ ಚಟುವಟಿಕೆಗಳ ಬಗ್ಗೆ ಹಿಂದೆ ಪೊಲೀಸ್ ನ್ಯೂಸ್‌ನಲ್ಲೇ ತನಿಖಾ ವರದಿ ಪ್ರಕಟವಾಗಿತ್ತು.

ಇದೇ ಮಠದಲ್ಲಿ ಹಿಂದೆ ಶ್ರೀ ಮರುಳ ಸಿದ್ದೇಶ್ವರ ಸ್ವಾಮಿಗಳಿದ್ದರು. ಅವರೆಲ್ಲಾ ಘನತೆಯಿಂದ ಬದುಕಿ ಹೋದವರು. ಮಠದ ಹಿರಿಯ ಶ್ರೀಗಳಿಂದ ಒಂದೇ ಒಂದು ಮೌಲ್ಯವನ್ನು ಕಲಿತಿರದ ಶಿವಾಚಾರ್ಯ ಸ್ವಾಮಿ 'ಮಕ್ಕಳ ಫಲ ಕೊಡಿಸುತ್ತೇನೆ ಬನ್ನಿ' ಎನ್ನುತ್ತಾ ಕಾಲ ಹಾಕುತ್ತಿದ್ದ ಈಗ ಪುಢಾರಿ ರಾಜಕಾರಣಿಯಾಗಿ ಬೀದಿಗೆ ಬಂದಿದ್ದಾನೆ.

ಹೀಗೆ ಬೀದಿಗೆ ಬಂದು ನಿಂತಿರುವ ಪುಂಡ ಮಠಾಧೀಶರ ಪೈಕಿ ಅತ್ಯಂತ ರಂಜನೀಯ ವ್ಯಕ್ತಿಯೆಂದರೆ ಅದು ಬೇಬಿಮಠದ ತ್ರಿನೇತ್ರ ಶಿವಯೋಗಿ.

ಈತನಿಗಿರುವುದು ಎರಡೇ ಕಣ್ಣಾದರೂ ತ್ರಿನೇತ್ರನೆಂಬ ಹೆಸರಿರುವುದು ಆಶ್ಚರ್ಯಕರವಾಗಿದೆ. ಬೇಬಿ ಮಠವೆಂಬ ಹೆಸರೂ ಅಷ್ಟೇ ವಿಚಿತ್ರವಾಗಿದೆ.

ಶ್ರೀರಂಗಪಟ್ಟಣದ ಬಳಿಯಿರುವ ಈ ಬೇಬಿ ಮಠವೂ ಸ...
ಆದರೆ ಯಡ್ಡಿಗೆ ಸ್ವಾಮಿ ಹತ್ತಿರವಾಗಿದ್ದಾನೆ. ಈ ಹಿಂದೆ ಅನೇಕ ...
ಯಡ್ಡಿ ಫ್ಯಾಮಿಲಿಗಾಗಿ ಹೋಮ-ಹವನ ಮಾಡಿಸಿದ್ದಾನೆ ಈ ಸ್ವಾ...
ಮಂಡ್ಯದ ಬಳಿ ಮೈಸೂರಿನ ಒಡೆಯರ್ ಕುಟುಂಬಕ್ಕೆ ಸೇರಿ...
ಚಂದ್ರವನ ಎಂಬ ಜಾಗವಿದೆ. ಅಂದಾಜು ಒಂದೂವರೆ ಎಕರೆ ವಿಸ್ತೀರ್ಣ...
ಈ ಜಾಗ ಕಬಳಿಸಲು ತ್ರಿನೇತ್ರ ಸ್ವಾಮಿ ತನ್ನೆರಡು ಕಣ್ಣು ಹಾಕಿದ...

ಯಡ್ಡಿ ಪರ ನಿಂತ ಮಠಾಧೀಶರ ಪುರಾಣವಿದು.

ಯಡ್ಡಿಯ ಜಾತಿ ರಾಜಕಾರಣ

ತನ್ನ ಕುರ್ಚಿಗೆ ಆಪತ್ತು ಬಂದಾಗ ಲಿಂಗಾಯತ ಜಾತಿ ಪ್ರ...
ಬಳಸಿ ಪಾರಾಗಿರುವ ಯಡ್ಡಿಯ ಈ ತಂತ್ರಕ್ಕೂ ಒಂದು ಹಿನ್ನೆಲೆಯಿ...
ಕಳೆದೆರಡು ವರ್ಷಗಳಿಂದ ಡಜನ್‌ಗಟ್ಟಲೆ ಲಿಂಗಾಯತ ಮಠಗ...
ಯಡ್ಡಿ ಹತ್ತಾರು ಕೋಟಿ ರೂಪಾಯಿಗಳನ್ನು ಕೊಡುತ್ತಾ ಬಂದಿದ...
ಸಿದ್ದಗಂಗಾ ಮಠಕ್ಕೆ 10 ಕೋಟಿ, ಮುರುಘಾ ಮಠಕ್ಕೆ 5 ಕೊ...
ಶಿವಮೊಗ್ಗದ ಬೆಕ್ಕಿನಕಲ್‌ಮಠಕ್ಕೆ ಅನಾಮತ್ತು 20 ಕೊ...
ರೂಪಾಯಿ ಕೊಡಿಸಿದ್ದಾರೆ ಯಡ್ಡಿ. ಇದಲ್ಲದೆ ಕನಕಪು...
ದೇಗುಲಮಠ, ಮರಳೇಗವಿ ಮಠಗಳಿಗೆ ತಲಾ 5 ಲಕ್ಷ, ಮೈಸೂ...
ಸುತ್ತೂರ ಮಠದವರಿಗೆ ಕೋಟ್ಯಾಂತರ ರೂಪಾಯಿ ಮೌ...
ರಿಯಲ್ ಎಸ್ಟೇಟ್ ಲಾಭಗಳಾಗುವಂತೆ ಯಡ್ಡಿ ನೋಡಿಕೊಳ...
ಬಂದಿದ್ದರು. ಹೀಗೆ ಹಣದ ಆಮಿಷವೊಡ್ಡಿ ಮಠಗಳ ಬೆಂ...
ಗಿಟ್ಟಿಸಿಕೊಂಡ ಯಡ್ಡಿ ಆ ಮೂಲಕ ಲಿಂಗಾಯತ ಸಮುದಾಯ...
ತಾನೊಬ್ಬ ರಾಜ್ಯಮಟ್ಟದ ರಾಜಕೀಯ ನಾಯಕನಾಗಿ ಬೆಳೆಯ...
ವಾತಾವರಣ ಸೃಷ್ಟಿಸಿಕೊಂಡರು. ಆಡಳಿತ ಯಂತ್ರಾಂಗದಲ್ಲಿ ಉ...
ಸ್ಥಾನಗಳಿಗೆ ಲಿಂಗಾಯತ ಅಧಿಕಾರಿಗಳನ್ನು ತಂದು ಕೂರಿಸಿದ...

ಲಿಂಗಾಯತ ಬ್ಯುಸಿನೆಸ್‌ಮೆನ್‌ಗಳಿಗೆ ವಿಶೇಷ ಪ್ರೀತಿ ತೋ...
ದಂಧೆ ನಡೆಸಲು ಅವಕಾಶ ಮಾಡಿಕೊಟ್ಟರು. ಈ ಪ್ರಕ್ರಿಯೆ...
ಬಿಜೆಪಿಗಂತೂ ಒಂದಷ್ಟು ಜನ ಬೆಂಬಲ ಗಿಟ್ಟಿಸಿದ ಲಾಭವಾಗಿ...
ಆದರೆ ಆರೆಸ್ಸೆಸ್‌ಗೆ ಯಡ್ಡಿ ಮೇಲಿನ ಕಂಟ್ರೋಲ್ ತಪ್ಪಿಹೋಯಿ...
ರೆಡ್ಡಿಗಳ ಕಿರುಕುಳ, ಭಿನ್ನಮತೀಯರ ಕಾಟ ಬಂದಾಗಲೆಲ್ಲಾ ತನ್ನ ಲಿಂಗಾ...
ಕಾರ್ಡ್ ಅನ್ನು ಬಳಸಿಯೇ ಯಡ್ಡಿ ರಕ್ಷಣೆ ಪಡೆಯುತ್ತಿದ್ದರು. ...
ಅದರ ಮುಂದುವರೆದ ಭಾಗವಾಗಿ ತನ್ನ ಭ್ರಷ್ಟಾಚಾರದ ರಕ್ಷಣೆ...
ಲಿಂಗಾಯತ ಜಾತಿಯನ್ನು ಬಳಸಿದ್ದಾರೆ. ಮಠಾಧೀಶರನ್ನೂ ತನ್ನ ಪರವ...
ಬೀದಿಗಿಳಿಸುವ ಮೂಲಕ ರಾಜ್ಯ ರಾಜಕಾರಣದಲ್ಲಿ ಜಾತಿ ಕದನಕ್ಕೆ ದ...
ಮಾಡಿಕೊಟ್ಟಿದ್ದಾರೆ.

ಕರ್ನಾಟಕದ ರಾಜಕೀಯದ ಇತಿಹಾಸದಲ್ಲೇ ಭ್ರಷ್ಟ ರಾಜಕಾರಣಿಯೊ...
ತನ್ನ ತಲೆ ಉಳಿಸಿಕೊಳ್ಳಲು ಜಾತಿಯನ್ನು ಇಷ್ಟು ಹೀನ ರೀತಿಯ...
ಬಳಸಿಕೊಂಡ ಉದಾಹರಣೆ ಇರಲಿಲ್ಲ,

ಯಡ್ಡಿ ಈಗ ಆ ದಾರಿ ಹಿಡಿದಿದ್ದಾರೆ.


ಈತ ಬರೀ ಭ್ರಷ್ಟನಲ್ಲ, ಅಪಾಯಕಾರಿ, ಅನಾಹುತಕಾರಿಯ...
ಹೌದೆಂಬುದು ಇದರಿಂದ ಸಾಬೀತಾಗುತ್ತಿದೆ.

ಇದರ ಮುಂದಿನ ಪರಿಣಾಮಗಳನ್ನು ಯೋಚಿಸದೆ ಯಡ್ಡಿ ಪರವ...
ಬೀದಿಗೆ ಬಂದು ನಿಂತ ಮಠಾಧೀಶರದ್ದು ಆಚಾರವಿಲ್ಲದ ನಾ...
ಅಲ್ಲವೇ?

• ಪಾರ್ವತಿ...

ಸಂದರ್ಶನ

ಭ್ರಷ್ಟಾಚಾರ ಬೆಂಬಲಿಸುವುದು ತರವಲ್ಲ




ಜಾತಿ ಆಧಾರದಲ್ಲಿ ಭ್ರಷ್ಟಾಚಾರ ಮುಚ್ಚಿಹಾಕುವಂತಹ ಘಟನೆಗಳನ್ನು ಖಂಡಿಸಬೇಕಾಗುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿರುವವರು ಕರ್ತವ್ಯ ಮರೆತು ಈ ರೀತಿ ಭ್ರೂಹಗರಣ ನಡೆಸುವುದೂ ಕೂಡ ತಪ್ಪು. ತಪ್ಪಿಗನುಸಾರವಾಗಿ ಕ್ರಮ-ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತದೆ.

ಇದು ಬಿಟ್ಟು ತಮ್ಮ ಜಾತಿಯವರು ಏನೇ ಮಾಡಿದರೂ ಸರಿ. ಆತನಿಗೆ ಶಿಕ್ಷೆಯಾಗಕೂಡದು ಅನ್ನುವ ಮನಸ್ಥಿತಿ ಸರಿಯಲ್ಲ, ಇದೀಗ ಮುಖ್ಯಮಂತ್ರಿಗಳ ಪರವಾಗಿ ಬೀದಿಗಿಳಿದಿರುವ ಸ್ವಾಮೀಜಿಗಳನೇಕರಲ್ಲಿ ಮೇಲ್ಕಂಡ ಮನಸ್ಥಿತಿಯೇ ಎದ್ದು ಕಾಣಿಸುತ್ತಿದೆ.

ಸಮಾಜದ ತಪ್ಪು ತಿದ್ದಲು ಎಲ್ಲಾ ಜಾತಿಗಳ ಸ್ವಾಮೀಜಿಗಳಿಗೂ ಅವಕಾಶವಿದೆ. ಹೀಗೆ ಸ್ವಾಮೀಜಿಗಳೆಲ್ಲ ಸೇರಿ ಸರ್ಕಾರಕ್ಕೆ ಮಾರ್ಗದರ್ಶನ ನೀಡಲಿ. ಅದು ಬಿಟ್ಟು ಭ್ರಷ್ಟಾಚಾರಕ್ಕೆ ಬೆಂಬಲಿಸುವಂತಾದರೆ ಅದಕ್ಕೆ ನಮ್ಮ ಸಹಮತವಿಲ್ಲ,

-ಮಾದಾರ ಚನ್ನಯ್ಯ ಸ್ವಾಮೀಜಿ,
ಮಾದಾರ ಪೀಠ, ಚಿತ್ರದುರ್ಗ

ಕಾವಿಯೆಂಬುದು ದಂಧೆ ಯೂನಿಫಾರಂ ಆಗಿದೆ!




ಪ್ರಸ್ತುತ ಭ್ರಷ್ಟಾಚಾರವೇ ಒಂದು ಜಾತಿ. ಇನ್ನು ಸಾಂಪ್ರದಾಯಿಕ ಜಾತಿ ಆಧಾರದ ಮೇಲೆ ಭ್ರಷ್ಟರನ್ನು ಸಮರ್ಥಿಸಿಕೊಳ್ಳುವುದು ಮೂರ್ಖತನದ ಪರಮಾವಧಿ. ಇವತ್ತಿನ ಸಂದರ್ಭದಲ್ಲಿ ಹೇಳಬೇಕೆಂದರೆ ಒಳ್ಳೆಯವರದ್ದೊಂದು ಜಾತಿ, ಲಂಚಕೋರ ಕಳ್ಳರದ್ದೊಂದು ಜಾತಿ ಅಂತ ಪರಿಗಣಿಸಿ ಸಾಂಪ್ರದಾಯಿಕ ಜಾತಿ ಭೇದಕ್ಕೆ ತಿಲಾಂಜಲಿ ಹಾಡ್ಬೇಕು.

ಯಡಿಯೂರಪ್ಪನವರ ಬೆಂಬಲಕ್ಕೆ ಬೀದಿಗಿಳಿದ ಮಠಾಧೀಶರ ಬಗ್ಗೆ ಹೇಳೋದಾದರೆ, ಅವರೂ ಕೂಡಾ ಮನುಷ್ಯರೇ. ಅವರಿಗೆ ಸಣ್ಣಬುದ್ಧಿ, ಔದಾರ್ಯಗಳೆಲ್ಲ ಇರುತ್ತವೆ. ಬರೀ ಸಣ್ಣಬುದ್ಧಿಯವರು ಮಾತ್ರ ಯಾರದ್ದೋ ಪರ, ವಿರೋಧ ಅಂತ ಬೀದಿಗಿಳಿಯುತ್ತಾರೆ. ಇವರಿಗೆ ಧರ್ಮ-ನೈತಿಕತೆ ಯಾವುದೂ ಇಲ್ಲ, ಸ್ವಂತ ಲಾಭವಷ್ಟೇ ಗುರಿ.

ಅಷ್ಟಕ್ಕೂ, ಇಂಥವರನ್ನೆಲ್ಲ ಧಾರ್ಮಿಕ ಗುರುಗಳೆಂದು ಗೌರವಿಸುವುದಾಗಲಿ, ಅವರ ಮಾತುಗಳಿಗೆ ಮಹತ್ವ ಕೊಡುವುದಾಗಲೀ ಬೇಕಿಲ್ಲ, ಯಾಕೆಂದರೆ ಇಂದು ಕಾವಿಯೆಂಬುದು ಯೂನಿಫಾರಂ ಆಗಿದೆ. ಅದನ್ನು ಧರಿಸಿ ಎಂಥ ದಂಧೆಗಳನ್ನೂ ನಡೆಸಬಹುದು!

-ಮರುಳಸಿದ್ದಪ್ಪ, ಸಾಹಿತಿ

ಸ್ವಾಮೀಜಿಗಳು ರಾಜಕೀಯದಲ್ಲಿ ಮೂಗು ತೂರಿಸಬಾರದು



ಲಿಂಗಾಯತವೆಂಬುದು ಒಂದು ಜಾತಿ ಅಲ್ಲ, ಅದೊಂದು ಧರ್ಮ. ಇದರಲ್ಲಿ ಅನ್ಯಾಯ, ವಂಚನೆ ಮುಂತಾದವುಗಳನ್ನು ವಿರೋಧಿಸುವುದು ಗಣಾಚಾರ. ಈ ವಿಚಾರದಲ್ಲಿ ಜಾತಿ, ಕುಟುಂಬ ಅಂತೆಲ್ಲಾ ನೋಡದೆ ಅನ್ಯಾಯದ ವಿರುದ್ಧ ದನಿಯೆತ್ತಬೇಕಾಗುತ್ತದೆ.

ಅದೇ ಹಿನ್ನೆಲೆಯಲ್ಲಿ ಕರ್ನಾಟಕವನ್ನು ನೋಡ ಹೊರಟರೆ ಇವತ್ತು ಯಾವ ಜಾತಿಗೂ ಒಬ್ಬ ಮುಖಂಡ ಇಲ್ಲ, ಲಿಂಗಾಯತ, ಒಕ್ಕಲಿಗ ಮುಖಂಡತ್ವ ಅನ್ನುವುದೆಲ್ಲಾ ಅಜ್ಞಾನದ ಪರಮಾವಧಿ. ಪ್ರಸ್ತುತ ಯಡಿಯೂರಪ್ಪನವರು ಬಿಂಬಿಸಲ್ಪಡುತ್ತಿರುವ ರೀತಿಯೂ ಇದರಲ್ಲಿ ಸೇರುತ್ತದೆ. ಇಂದು ಅವರ ಸುತ್ತಲಿನ ಘಟನೆಗಳನ್ನು ಗಮನಿಸಿದರೆ ಅವರು ಅಪರಾಧಿ ಅಂತ ಸಾಬೀತಾಗಿಲ್ಲ ಎಂಬುದು ಹಲವರ ವಾದ. ಆದರೆ ಆತ್ಮಸಾಕ್ಷಿ ಅಂತೊಂದಿದೆಯಲ್ಲಾ? ಎಲ್ಲರೂ ಅದಕ್ಕೆ ತಕ್ಕುದಾಗಿ ನಡೆದುಕೊಳ್ಳಬೇಕಾಗುತ್ತೆ.


ಇನ್ನು ಯಾರೇ ಸ್ವಾಮೀಜಿಗಳು ಸರ್ಕಾರದ ಪರವಾಗಿ ಅಥವಾ ಯಡಿಯೂರಪ್ಪನವರ ಪರವಾಗಿ ಬೀದಿಗಿಳಿಯುವ ಅವಶ್ಯಕತೆಯಿಲ್ಲ, ಯಾಕೆಂದರೆ ಯಾವ ಸ್ವಾಮೀಜಿಯೂ ಒಂದು ಕೋಮಿಗೆ ಒಳಪಡುವುದಿಲ್ಲ,

ಇನ್ನೊಂದು ವಿಚಾರವೆಂದರೆ, ಸ್ವಾಮೀಜಿಗಳಾದವರು ರಾಜಕೀಯದಲ್ಲಿ ಮೂಗುತೂರಿಸಬಾರದು. ಆದರೆ ಮಾರ್ಗದರ್ಶನ ನೀಡಬೇಕು. ಆದರೀಗ ಮೂಗು ತೂರಿಸುವವರೇ ಜಾಸ್ತಿಯಾಗಿ ಮಾರ್ಗದರ್ಶನ ಮಾಯವಾಗಿದೆ.

- ಪಂಡಿತಾರಾಧ್ಯ ದೇಶಿಕೇಂದ್ರ ಸ್ವಾಮಿ, ಸಾಣೇಹಳ್ಳಿ ಮಠ

ಕಿರುಕುಳ ಕೊಟ್ಟಿದ್ದು ಕುಮಾರ ಸ್ವಾಮಿನಾ ಅಥವಾ ಕಟ್ಟಾ, ಕೃಷ್ಣಯ್ಯ, ಕರಂದ್ಲಾಜೆ, ರೆಡ್ಡಿನಾ?


ಈ ಕಾಂಜಿಪಿಂಜಿ ಲಿಂಗಾಯತ ಮಠಾಧೀಶರೆಲ್ಲ ಯಡ್ಡಿ ಪರವಾಗಿ ಪತ್ರಿಕಾಗೋಷ್ಠಿ ನಡೆಸಿದಾಗ ಮುಖ್ಯವಾಗಿ ಆರೋಪ ಮಾಡಿದ್ದು ದೇವೇಗೌಡ ಹಾಗೂ ಕುಮಾರ ಸ್ವಾಮಿ ವಿರುದ್ಧ.



ಯಡ್ಡಿ ಅಧಿಕಾರಕ್ಕೆ ಬಂದಾಗಿನಿಂದ ಗೌಡರ ಫ್ಯಾಮಿಲಿ ಪ್ರತಿದಿನ ಕಿರುಕುಳ ನೀಡುತ್ತಿದ್ದಾರೆಂತಲೂ ನೆಮ್ಮದಿಯಾಗಿ ಆಡಳಿತ ನಡೆಸಲು ಬಿಡುತ್ತಿಲ್ಲವೆಂತಲೂ ಈ ಸ್ವಾಮಿಗಳು ಚೀರಿಕೊಂಡರು.

ನಿಜಕ್ಕೂ ಇದರಲ್ಲಿ ಸತ್ಯಾಂಶವೆಷ್ಟಿದೆ?

ವಿರೋಧ ಪಕ್ಷದ ನಾಯಕರಾಗಿರುವ ಕುಮಾರಸ್ವಾಮಿ ಆಡಳಿತ ಪಕ್ಷದ ಭ್ರಷ್ಟಾಚಾರ, ದುರಾಡಳಿತಗಳನ್ನು ಪ್ರಶ್ನಿಸಲೇ ಬೇಕಾಗುತ್ತದೆ. ಅದು ಅವರ ಕರ್ತವ್ಯ ಮತ್ತು ಜವಾಬ್ದಾರಿ.



ಇದರಲ್ಲಿ ಕಿರುಕುಳದ ಮಾತೆಲ್ಲಿಂದ ಬರುತ್ತದೆ?

ಈ ಹಿಂದೆ ಯಡ್ಡಿ ವಿರೋಧ ಪಕ್ಷದ ನಾಯಕನಾಗಿದ್ದಾಗ ಮಾಡುತ್ತಿದ್ದುದು ಇದೇ ಕೆಲಸವನ್ನಲ್ಲವೆ? ಆವಾಗ ಯಾವ ಮುಠ್ಠಾಳನೂ ಇದನ್ನೆಲ್ಲ ಜಾತಿ ನೆಲೆಯಲ್ಲಿ ನೋಡಿರಲಿಲ್ಲ, ಹೀಗಿದ್ದಾಗ ಈಗೇಕೆ ಜಾತಿಯ ವಿಚಾರ ಮುಂದೆ ತರಲಾಗುತ್ತಿದೆ?

ಹಾಗೆ ನೋಡಿದರೆ ಕಳೆದ ಎರಡು ವರ್ಷದಿಂದ ಯಡಿಯೂರಪ್ಪನಿಗೆ ನಿರಂತರ ಕಿರುಕುಳ ಕೊಟ್ಟವರು ಬಳ್ಳಾರಿ ರೆಡ್ಡಿಗಳು. ಶಾಸಕರನ್ನು ಹೈಜಾಕ್ ಮಾಡಿ ಯಡ್ಡಿ ಕಣ್ಣಲ್ಲಿ ನೀರು ತರಿಸಿದ ರೆಡ್ಡಿಗಳ ವಿರುದ್ಧ ಈ ಮಠಾಧೀಶರೇಕೆ ಪ್ರತಿಭಟಿಸಲಿಲ್ಲ.

ಕೃಷ್ಣಯ್ಯ ಶೆಟ್ಟಿ, ಕಟ್ಟಾ ಸಾಯ್ಸು ಕರಂದ್ಲಾಜೆ ಮುಂತಾದವರ ಹಗಲು ದರೋಡೆಗಳು, ಭ್ರಷ್ಟಾಚಾರಗಳು ಕೂಡ ಯಡ್ಡಿಯ ಪಾಲಿನ ಉರುಳಾಗಿದ್ದವು. ಇವೂ ಒಂದು ರೀತಿಯ ಕಿರುಕುಳವೇ ಆಗಿತ್ತಲ್ಲವೆ?



ಈ ಭ್ರಷ್ಟರಿಂದ ಯಡ್ಡಿಯ ಮರ್ಯಾದೆಯೂ ಮೂರು ಕಾಸಿಗೆ ಹರಾಜಾಗಿದೆ.

ರಾಜ್ಯದ ಜನತೆ ಇವೆಲ್ಲವನ್ನೂ ನೋಡಿದ್ದಾರೆ. ಈ ಮಠಾಧೀಶರಿಗೆ ಅದೇನು ಕುರುಡೋ, ಮಂದ ಬುದ್ಧಿಯೋ ರಾಜ್ಯದ ಈಗಿನ ರಾಜಕೀಯ ಬಿಕ್ಕಟ್ಟಿಗೆ ದೇವೇಗೌಡರನ್ನು ಹೊಣೆ ಮಾಡುತ್ತಾ ಲಿಂಗಾಯತ-ಒಕ್ಕಲಿಗ ಜಾತಿ ಕಲಹವೆಬ್ಬಿಸಲು ಯತ್ನಿಸಿದ್ದಾರೆ.


ಆರೆಸ್ಸೆಸ್ ನಾಯಕ ಜಯದೇವ್ ಜಾತಿವಾದಿಯಾದ

ನಮಸ್ತೆ ಸದಾ ವತ್ಸಲೆ, ಹಿಂದೂ ನಾವೆಲ್ಲಾ ಒಂದು ಎಂದು ಕಳೆದ ನಲವತ್ತು ವರ್ಷಗಳಿಂದ ಒದರಿಕೊಂಡೇ ಬಂದಿರುವ ಕರ್ನಾಟಕದ ಆರೆಸ್ಸೆಸ್ ನಾಯಕ ಮೈ.ಚ.ಜಯದೇವ ಈಗ ಲಿಂಗಾಯತ ಗಣವೇಷಧಾರಿ!

ಯಡ್ಡಿಯ ರಾಜಕೀಯ ಬದುಕು ಮುಗಿದೇಹೋಗುವ ಹಂತ ತಲುಪಿ ದಾಗ ಯಡ್ಡಿ ತಲೆ ಉಳಿಸುವ ಕೆಲಸವನ್ನು ತೆರೆಮರೆಯಲ್ಲಿ ಮಾಡಿದ್ದು ಇದೇ ಜಯದೇವ. ಈ ಜಯದೇವ ಸಹ ಲಿಂಗಾಯತ!

ಯಡ್ಡಿ ಸರ್ಕಾರದ ಮೂಲಕ ಆರೆಸ್ಸೆಸ್ ಸಂಘ ಪರಿವಾರದ ವ್ಯಕ್ತಿ ಹಾಗೂ ಸಂಘಟನೆಗಳಿಗೆ ಹಣ, ಭೂಮಿ... ಹೀಗೆ ನೂರಾರು ಕೋಟಿ ರೂ.ಗಳ ಲಾಭ ಆಗುತ್ತಿದೆ. ಬೆಂಗಳೂರು, ಉತ್ತರಕನ್ನಡ, ಮಂಗಳೂರು ಮತ್ತಿತರ ಕಡೆ ಆರೆಸ್ಸೆಸ್‌ನವರಿಗೆ ನೂರಾರು ಎಕರೆ ಸರ್ಕಾರಿ ಭೂಮಿ ಕೊಡುತ್ತಿದ್ದಾರೆ ಯಡ್ಡಿ. ಜೊತೆಗೆ ಚೆಡ್ಡಿ ಅಜೆಂಡಾಗಳನ್ನೂ ಶಿಕ್ಷಣ ಇಲಾಖೆ ಮುಂತಾದೆಡೆ ಯಡ್ಡಿ ಜಾರಿ ಮಾಡಿಸುತ್ತಿದ್ದಾರೆ.

ಹೀಗಿರುವಾಗ ಆರೆಸ್ಸೆಸ್‌ಗಳೇಕೆ ಯಡ್ಡಿ ವಿರುದ್ಧ ನಿಲ್ಲುತ್ತಾರೆ?



ಬಹಳ ಮುಖ್ಯವಾಗಿ ಲಿಂಗಾಯತ ಮಠಗಳು, ಅಧಿಕಾರಿ, ರಾಜಕಾರಣಿ ಹಾಗೂ ಲಿಂಗಾಯತ ಬ್ಯುಸಿನೆಸ್‌ಮೆನ್‌ಗಳೆಲ್ಲಾ ಅನೇಕ ಲಾಭ ಪಡೆಯುತ್ತಾ ಸಂಘ ಪರಿವಾರದೊಂದಿಗೆ ಬೆರೆತು ಹೋಗುತ್ತಿದ್ದಾರೆ.

ಈ ಮೈ.ಚ.ಜಯದೇವ ಇದೆಲ್ಲದರ ಒಂದು ಸಂಕೇತ ಅಷ್ಟೆ.

ಯಡ್ಡಿಯನ್ನು ಕುರ್ಚಿಯಲ್ಲಿ ಉಳಿಸಬೇಕೋ ಅಥವಾ ಓಡಿಸಬೇಕೊ ಎಂಬ ಪ್ರಶ್ನೆ ಬಂದಾಗ ಆರೆಸ್ಸೆಸ್ ವರಿಷ್ಠ ಮೋಹನ್ ಭಾಗವತ್ ಹಾಗೂ ಬಿಜೆಪಿ ಅಧ್ಯಕ್ಷ ನಿತಿನ್ ಗಡ್ಕರಿ ಇದೇ ಜಯ ದೇವ ಜೊತೆ ಮೊನ್ನೆ ಒಂದು ರಹಸ್ಯ ಸಮಾಲೋಚನೆ ನಡೆಸಿದರು.

ಆ ಸಭೆ ನಡೆದದ್ದು ಡೆಹಾರಡೂನ್‌ನಲ್ಲಿ!

ಆ ಸಭೆಯಲ್ಲಿ ಜಯದೇವ ಭ್ರಷ್ಟ ಯಡ್ಡಿ ಪರವಾಗಿ ಪ್ರಬಲವಾಗಿ ವಾದಿಸಿದ್ದಾರೆ. ಜಾತಿ ಸಮೀಕರಣ, ಹಣ ಇತ್ಯಾದಿಗಳ ಅನುಕೂಲಗಳ ಬಗ್ಗೆಯೂ ವಿವರಿಸಿ ಹೇಳಿದ್ದಾರೆ. ಯಡ್ಡಿ ಕುರಿತಂತೆ ಬಿಜೆಪಿ ಹೈಕಮಾಂಡ್ ಮತ್ತೆ ಒಲವು ತೋರಿಸಲು ಲಿಂಗಾಯತ ಜಾತಿವಾದಿ ಜಯದೇವ್ ಬೆಂಬಲವೂ ಒಂದು ಪ್ರಮುಖ ಕಾರಣವಾಯಿತು.

ಇಂಥೋರೆಲ್ಲ ಮಠಾಧೀಶರಲ್ಲ

ಯಡಿಯೂರಪ್ಪನವರ ಪರ ಬೀದಿಗಿಳಿದ ಸ್ವಾಮೀಜಿಗಳ ನಡವಳಿಕೆ ಭ್ರಷ್ಟಾಚಾರವನ್ನು ಬಹಿರಂಗವಾಗಿ ಪ್ರೋತ್ಸಾಹಿಸುವಂತಿದೆ. ಇವರೆಲ್ಲ ತಮ್ಮ ಧಾರ್ಮಿಕ ವಲಯದ ಕರ್ತವ್ಯಗಳನ್ನು ಕಡೆಗಣಿಸಿ ಇಂಥಾ ಕಳಂಕಕಾರಿ ಕೆಲಸಗಳನ್ನೇ ದಂಧೆಯಾಗಿಸಿಕೊಂಡಿದ್ದಾರೆ.

ಈ ಘಟನಾವಳಿಗಳೆಲ್ಲ ಮಠಾಧೀಶರೆಂದರೇನೇ ಅಸಹ್ಯ ಹುಟ್ಟಿಸುವಂತಿವೆ. ಯಡಿಯೂರಪ್ಪ ಎಂದೂ ಕಂಡರಿಯದ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಇಂಥವರಿಗೆ ಇದುವರೆಗೆ ಗೌರವಿಸಲ್ಪಡುತ್ತಿದ್ದ ಕೆಲ ಮಠಾಧೀಶರುಗಳೂ ಬೆಂಬಲ ಸೂಚಿಸಿರುವುದು ಕಾವಿ ಪ್ರಪಂಚದ ಜಾತಿ ಪ್ರಜ್ಞೆಯನ್ನು ಅನಾವರಣಗೊಳಿಸಿದೆ. ಯಡಿಯೂರಪ್ಪನವರು ಒಂದೇ ಸಮುದಾಯದವರ ಮತದಿಂದ ಆರಿಸಿ ಬಂದಿಲ್ಲ, ಮಠಾಧೀಶರ ಬೆಂಬಲದ ಕಾರಣದಿಂದಲೇ ಅವರೆಂದಿಗೂ ಗೆಲ್ಲಲಾಗುವುದೂ ಇಲ್ಲ.

ಈ ರೀತಿ ಭ್ರಷ್ಟಾಚಾರ ಬಹಿರಂಗವಾದರೂ, ಅದಕ್ಕೆ ಬೇಕಾದ ದಾಖಲೆಗಳಿದ್ದರೂ ಅದಕ್ಕೆ ಕಾರಣರಾದ ಯಡಿಯೂರಪ್ಪನವರ ಪರ ನಿಲ್ಲುವವರನ್ನು ಮಠಾಧೀಶರೆಂದು ಹೇಗೆ ಕರೆಯಲಾದೀತು? ಬಾಯಿ ತೆರೆದರೆ ಬಸವಣ್ಣನ ವಚನಗಳನ್ನ ಹೊರಡಿಸುವ ಇಂಥವರೆಲ್ಲಾ ಆಗಾಗ ತಮ್ಮನ್ನು ತಾವು ಬಸವಣ್ಣನ ಅಪರಾವತಾರದಂತೆ ಬಿಂಬಿಸಿಕೊಳ್ಳುತ್ತಿರುತ್ತಾರೆ. ಆದರೆ ಇವರುಗಳಲ್ಲನೇಕರು ಬಸವಣ್ಣನ ಆಶಯಗಳನ್ನು ಕಗ್ಗೊಲೆ ಮಾಡಿದವರೆಂದು ಹೇಳಲೇಬೇಕಿದೆ.

ಇಂಥಾ ಸಂದರ್ಭಗಳಲ್ಲಿ ಈ ನೆಲದ ಪ್ರಜ್ಞಾವಂತರು, ಬುದ್ಧಿಜೀವಿಗಳು ಸಮರ್ಥವಾಗಿ ದನಿಯೆತ್ತಬೇಕು. ಅದಿಲ್ಲದೆ ಹೋದರೆ ಯಾರ್ಯಾರೋ ಮಠಾಧೀಶರೆಂಬಂತೆ ಬಿಂಬಿಸಿಕೊಳ್ಳುತ್ತಾರೆ. ಭ್ರಷ್ಟರಿಗೆ ಬೆಂಬಲ ಸೂಚಿಸುತ್ತಾರೆ.

ಒಟ್ಟಾರೆಯಾಗಿ ಮಠಾಧೀಶರ ರಾಜಕೀಯ ಅಸಹ್ಯ ಹುಟ್ಟಿಸುವಂತಿದೆ. ಇದು ಕರ್ನಾಟಕ ಪಾಲಿನ ಕಳಂಕ.

-ಬಸವರಾಜ ದೇವರು, ಮನ್ಸೂರು ಮಠ, ಧಾರವಾಡ

ಎಡೂರಪ್ಪ ಕೊಟ್ಟ ದುಡ್ಡ ಏನು ಮಾಡಿದ್ರಿ ಸ್ವಾಮಿ

ನಮ್ ನಾಡಿನ ಮಠದೊಳಗಿದ್ದ ಕೆಲವು ಕಾವಿಧಾರಿ ಹೆಗ್ಗಣಗಳು ಎಡೂರಪ್ಪನ ಬೆಂಬಲಕ್ಕೆಂದು ಬೀದಿಗೆ ಬಂದು ಕೂಗಾಡಿದ್ದನ್ನು ನೋಡಿದ ನೆಲಮುಂಗಪ್ಪ ಜನಾರ್ದನ ರೆಡ್ಡಿಯೇ ಬೆಚ್ಚಿ ಕೂತನಂತಲ್ಲಾ, ರೆಡ್ಡಿಗಳನ್ನೇ ಹೆದರಿಸಿದಂತಹ ಮಠಾಧಿಪತಿಗಳ ಪೈಕಿ ಯಾರನ್ನಾದರೂ ಮಾತನಾಡಿಸಬೇಕೆಂದು ಯೋಚಿಸುತ್ತಿದ್ದಾಗ ಹೊಳೆದ ಹೆಸರು ಪ್ರಸಿದ್ಧಾನಂದ್ ಸ್ವಾಮಿಗಳು. ಕೂಡಲೇ ತಿರುಬೋಕಿ ಮಠಕ್ಕೆ ಫೋನ್ ಮಾಡಿದಾಗ ರಿಂಗಾಯ್ತು.

ರಿಂಗ್ ಟೋನ್: "ಸಿದ್ಧಲಿಂಗೇಶ್ ಶರಣು ನಿನಗೇ ಶರಣು."

"ಹಲೋ ಯಾರ್ರಿ ನೀವು?"

"ನಾನು ಯಾಹೂ ಅಂತ ಪತ್ರಕರ್ತ. ಸ್ವಾಮಿಗಳ ಜೊತೆ ಮಾತನಾಡಬೇಕು. ಫೋನ್ ಕೊಡಿ."

"ಸ್ವಾಮಿಗಳು ಸಿ.ಎಂ. ಜೊತೆ ಮಾತಾಡ್ತ ಇದಾರೆ ಇನ್ನೊಂದು ಫೋನಲ್ಲಿ."

"ಅಂಗಾಂದ್ರೆ ಆ ನಂಬರ್ ಕೊಡಿ."

"ಮಾತು ಮುಗಿತು ಅನ್ಸುತ್ತೆ, ಕೊಟ್ಟೆ ಇರ್ರಿ."

"ಹಲ್ಲೋ?"

"ಸ್ವಾಮೀಜಿ, ನಾನು ಯಾಹೂ ಅಂತ, ಪತ್ರಕರ್ತ. ಒಂದೆರಡು ಮಾತಾಡಬೇಕು."

"ಬೇಗ ಹೇಳಿ ಪೂಜೆಗೋಗಬೇಕು."

"ಪೂಜೆನೂ ಮಾಡ್ತೀರಾ ಸ್ವಾಮಿ ನೀವು?"

"ಯಾವ ಕೆಲಸ ತಪ್ಪಿದ್ರೂ ಪೂಜೆ ಕೆಲಸ ತಪ್ಸಲ್ಲ ನಾನು."

"ದಿವಸ ಮಾಡ್ತೀರಾ?"

"ಹೌದು, ಒಂದು ದಿನಾನೂ ತಪ್ಪಿಸಲ್ಲ."

"ಆದ್ರೆ ನಿನ್ನೆ ತಪ್ಪಿರಬಹುದಲ್ಲ?"

"ಇಲ್ಲ ಕಂಡ್ರೀ."

ಥೂತ್ತೇರಿ

ಯಾಹೂ

"ಮತ್ತೆ ಇಡೀ ದಿನ ಎಡೂರಪ್ಪ ಪರವಾಗಿ ಬೀದಿಲಿ ಕುಂತಿದ್ರಲ್ಲಾ, ಅಂಗಾಗಿ ಕೇಳಿದೆ ಅಷ್ಟೆ."

"ಅದೂ ಒಂದು ರೀತಿ ಪೂಜಾ ಕೆಲಸವೇ ಅಲ್ವೇನ್ರಿ? ಎಡೂರಪ್ಪನಿಗೆ ಒಳ್ಳೇದಾಗ್ಲಿ, ಆತ ಮುಖ್ಯಮಂತ್ರಿ ಪದವೀಲಿ ಇನ್ನೂ ಇಪ್ಪತ್ತು ವರ್ಷ ಇರ್ಲಿ ಅಂತ ಭಗವಂತನ್ನ ಬೇಡಿಕೊಳ್ಳೋದು ಕೂಡ ಪೂಜೆ."

"ಎಡೂರಪ್ಪ ಇಪ್ಪತ್ತೊರ್ಷ ಇರ್ಲಿ ಅಂತೀರಾ?"

"ಯಾಕಿರಬಾರದು? ಆತ ಎಷ್ಟು ಒಳ್ಳೇ ಕೆಲಸ ಮಾಡಿದಾನೆ? ನಮ್ಮ ಸೇವೆನ ಗುರುತಿಸಿ ಲಕ್ಷಾಂತರ ರೂಪಾಯಿ ಮಠಕ್ಕೆ ಕೊಟ್ಟಿದ್ದಾರೆ. ಪ್ರತಿ ವರ್ಷ ಕೊಡೋದೇ ಆದ್ರೆ ಅಂತಹ ವ್ಯಕ್ತಿ ಇಪ್ಪತ್ತಲ್ಲ ನಲವತ್ತು ವರ್ಷ ಇದ್ರೂನೂ ನಮಗೆ ಸಂತೋಷಾನೆ!"

"ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ ಅಂತ ಬಸವಣ್ಣನವರು ಹೇಳ್ತವರಲ್ಲ ಸಾರ್."

"ಬಸವಣ್ಣ ಹೇಳಿದಾನೆ. ಆದ್ರೆ ಬಸವಣ್ಣನಿಗಿಂತ್ಲೂ ಮೊದಲೇ ವೀರಶೈವ ಧರ್ಮ ಇತ್ತು ಅನ್ನದು ಗೊತ್ತಾ?"

"ಇಲ್ಲ ಸ್ವಾಮೀಜಿ."

"ವೀರಶೈವ ಧರ್ಮಕ್ಕೆ ಬಂದು ಸೇರಿಕೊಂಡ ಬಸವಣ್ಣ ತನ್ನದೇ ಆದ ಏನೇನೋ ಕೆಲಸ ಮಾಡಿದ ಮೇಲೆ ಬಂದ ಅಷ್ಟೇ ಕಂಡ್ರೀ."

"ನಿಮ್ಮನ್ನೆಲ್ಲಾ ಉಪಯೋಗಿಸಿಕೊಂಡು ಎಡೂರಪ್ಪ ಮೇಲೆ ಬಂದಂಗೆ ಅನ್ನಿ."

"ಹಾಗೂ ಹೇಳಬಹುದು."

"ಎಡೂರಪ್ಪ ಕೊಟ್ಟ ದುಡ್ಡಲ್ಲಿ ಏನು ಮಾಡಿದ್ರಿ ಸ್ವಾಮಿ?"

"ನನ್ನ ಕಿರೀಟದಲ್ಲಿ ಒಂದೆರಡು ಹರಳು ಬಿದ್ದೋಗಿದ್ವೋ, ಅವನ್ನ ಹಾಕಿಸಿದೆ. ಊಟಕ್ಕೆ ಒಂದು ಬೆಳ್ಳಿ ತಟ್ಟೆ ತಗೊಂಡೆ. ಎರಡು ಉಂಗುರ ಮಾಡಿಸಿಕೊಂಡೆ."

"ಆದ್ರೂ ನಿಮಗೆ ಉಂಗುರ, ಕಿರೀಟ ಒಂದು ಚೂರೂ ಚೆನ್ನಾಗಿ ಕಾಣದಿಲ್ಲ ಸ್ವಾಮಿ. ಅಂಬರೀಷ್‌ಗೆ ಕಿರೀಟ ತೊಡಿಸಿದಂಗೆ ಕಾಣ್ತೀರಿ."

"ಸಿನಿಮಾ ಹೀರೋ ತರ ಕಾಣ್ತೀನಿ ಅನ್ನಿ?"

"ಅಂಬರೀಶು ಕರ್ನಾಟಕದಲ್ಲಿ ಸಿನಿಮಾ ಹೀರೋ ಅಂದ್ರೆ ದೆಹಲಿ ಜನ ನಗ್ತಾರಂತೆ ಸ್ವಾಮಿ. ಅದೇ ತರ ನೀವು ತಿರುಬೋಕಿ ಮಠದ ಸ್ವಾಮಿ ಅಂದ್ರೆ ನಗುಬರುತ್ತೆ."

"ಯಾಕ್ರಿ ನಗುಬರುತ್ತೆ?"

"ಸ್ವಾಮಿಯಾದವರಿಗೆ ಒಂದು ಕಳೆಯಿರುತ್ತೆ ಸ್ವಾಮಿ. ಮುಖದಲ್ಲಿ ಆಧ್ಯಾತ್ಮಿಕ ಪ್ರಭೆಯಿರುತ್ತೆ, ಅದೇ ನಿಮ್ಮನ್ನ ನೋಡಿದ್ರೆ ತ್ರಿಬಲೆಕ್ಸ್ ರಂ ಕುಡಿದು, ತಲೆಬಾಡು ತಿಂದುಕೂತಂಗೆ ಕಾಣ್ತೀರಿ. ಮುಖ ಯಾಕೆ ಸ್ವಾಮಿ ಅಂಗಾಗಿದೆ ನಿಮಗೆ?"

"ನನ್ನ ಮುಖ ಏನಾಗಿದೇರಿ? ನನ್ನನ್ನು ನೋಡಿದರೋರೆಲ್ಲ ಸಾಕ್ಷಾತ್ ಪರಶಿವನನ್ನೇ ನೋಡಿದಂಗಾಗುತ್ತೆ ಅಂತಾರೆ."

"ಇರಬಹುದು ಬಿಡಿ. ಪರಶಿವನೂ ಆದಿವಾಸಿ ಜನಾಂಗದವನಂತೆ. ತನ್ನ ತ್ರಿಶೂಲದಿಂದ ಜಿಂಕೆ, ಮೊಲ, ಹಂದಿನೆಲ್ಲಾ ಸಾಯಿಸಿ ತಿನ್ನತಿದ್ನಂತೆ. ಆದ್ರೆ ಡ್ರಿಂಕ್ಸ್ ಮಾಡ್ತಿರಲಿಲ್ಲ."


"ಅಂದ್ರೆ ನಾನು ಡ್ರಿಂಕ್ಸ್ ಮಾಡ್ತೀನಿ ಅಂತ್ಲೇ?"

"ರಾ ಕುಡಿಬಾರದು ಸ್ವಾಮಿ. ಸಾಕಷ್ಟು ನೀರು ಸೋಡಾ ಬೆರಿಸಿಕೊಂಡು ನಿಧಾನಕ್ಕೆ ತಗೋಬೇಕು. ಅಂಗೇ ಕುಡುದ್ರೆ ಮುಖ ಒಂಥರ ತಲೆಗೆ ಡೈ ಹಾಯ್ಕೊಂಡೂರಿಗೆ ಮುಖದಲ್ಲಿ ಬ್ಲಾಕೌಟಾಗಿರತ್ತಲ್ಲಾ ಅಂಗೆ ಕಾಣ್ತದೆ. ಈಗ ನಿಮ್ಮ ಮುಖಾನೂ ಅಂಗೇ ಆಗ್ಯದೆ ಸ್ವಾಮಿ."

"ನನ್ನ ಮುಖ ಚೆನ್ನಾಗಿ ಕಾಣೋದಕ್ಕೆ ಏನು ಮಾಡಬೇಕ್ರಿ?"

"ಏನಿಲ್ಲ, ಆ ಉಂಗುರ, ಕಿರೀಟ ಹಾಯ್ಕೋಬೇಡಿ. ಒಳ್ಳೇ ಕ್ಷೌರಿಕನ್ನ ಹಿಡಿದು ಹೇರ್‌ಕಟ್ ಮಾಡಿಸಿ. ಗಡ್ಡ ಬೋಳಿಸಿ. ಎಡೂರಪ್ಪನ ತರ ಡ್ರೆಸ್ ಮಾಡಿಕೊಂಡು ಅವನ ಜೊತೆ ಸೇರಿಕೊಳ್ಳಿ. ಆಗ ನಿಮ್ಮ ಮುಖಕ್ಕೆ ಬಿಜೆಪಿ ಕಳೆ ಬರುತ್ತೆ, ಚುನಾವಣೆ ನಿಂತು ಗೆದ್ರೆ ಅಬ್ಕಾರಿ ಸಚಿವರಾದ್ರೆ ರೇಣುಕಾಚಾರಿ ತರನೂ ಇರಬಹುದು."


ಥೂತ್ತೇರಿ!!!



ಹುಬ್ಬಳ್ಳಿ-ಧಾರವಾಡ ಯಡ್ಡಿ ಬುಡಕ್ಕೆ ಬತ್ತಿ ಇಟ್ಟ ಶೆಟ್ಟರನೂ ಭೂಗಳ್ಳ!




ನಮ್ಮಲ್ಲಿ ಸದಾ ವತ್ಸಲೆ ಭೂಮಿ ಸ್ವಾಹಾ ಎಂಬ ಮಂತ್ರವನ್ನು ಪಠಿಸುತ್ತಿರುವ ಬಿಜೆಪಿಗಳು ಸರ್ಕಾರಿ ಭೂಮಿಯನ್ನು ಪಿತ್ರಾರ್ಜಿತ ಆಸ್ತಿ ಎಂಬಂತೆ ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪನೇ ಕಳ್ಳರ ಗುರುವಾಗಿ ಮೆರೆಯುತ್ತಿದ್ದರೆ, ಆತನ ಚೇಲಾಗಳೂ ಅದೇ ಕಸುಬಿನಲ್ಲಿ ನಿರತರಾಗಿದ್ದಾರೆ. ಅವರಲ್ಲಿ ಯಡ್ಡಿ ತಳಕ್ಕೆ ಬತ್ತಿ ಇಟ್ಟು ಆ ಪೋಸ್ಟಿಗಾಗಿ ಹೊಸ ಹೊಸ ಸ್ಟೋರಿ ಕ್ರಿಯೇಟ್ ಮಾಡುತ್ತಿರುವ ಮಂತ್ರಿ ಜಗದೀಶ ಶೆಟ್ಟರ ಯಡಿಯೂರಪ್ಪನಿಗಿಂತ ಫಾಸ್ಟ್ ಅಂತ ಪ್ರೂವ್ ಮಾಡಿದ್ದಾನೆ. ಒಂದೇ ವಾರದಲ್ಲಿ ತನ್ನ ತಮ್ಮ ಪ್ರದೀಪ ಶೆಟ್ಟರಿಗೆ ಎರಡೂವರೆ ಎಕರೆ ಭೂಮಿಯನ್ನು ಕೆಐಎಡಿಬಿಯಿಂದ ಮಂಜೂರು ಮಾಡಿಸಿದ್ದಾನೆ.



ಭೂಮಿ ಸ್ವಾಹಾ ದಂಧೆಯನ್ನು ಕುಲ ಕಸುಬೆಂಬಂತೆ ಶೆಟ್ಟರನ ಇಡೀ ಫ್ಯಾಮಿಲಿ ನಡೆಸಿಕೊಂಡು ಬಂದಿದೆ. ಶಿಕ್ಷಣ ಸಂಸ್ಥೆ, ಕೈಗಾರಿಕೆ, ಸ್ವಯಂಸೇವಾ ಸಂಸ್ಥೆ ಎಂದೆಲ್ಲಾ ಢೋಂಗಿ ಹೆಸರಿಟ್ಟುಕೊಂಡು ವ್ಯವಸ್ಥಿತವಾಗಿ ಅಧಿಕಾರ ದುರುಪಯೋಗಪಡಿಸಿಕೊಂಡು ಕೋಟ್ಯಾಂತರ ಸರ್ಕಾರಿ ಜಮೀನನ್ನು ಅಣ್ಣ ತಮ್ಮ ಸೇರಿ ನುಂಗಿಹಾಕಿದ್ದಾರೆ. ಜಗದೀಶ ಶೆಟ್ಟರ ತನ್ನ ತಮ್ಮ ಪ್ರದೀಪ ಶೆಟ್ಟರನಿಗೆ ಕೇವಲ 8 ದಿನಗಳಲ್ಲಿ ಭೂಮಿಯನ್ನು ಮಂಜೂರು ಮಾಡಿಸಿ ತನ್ನ ಪವರ್ ತೋರಿಸಿದ್ದಾನೆ.

ಸದ್ಯ ಹುಬ್ಬಳ್ಳಿ-ಧಾರವಾಡ ಶಹರದ ಟ್ರಾನ್ಸ್‌ಫರ್ ದಂಧೆಯ ದೊರೆ ಎಂದು ಕರೆಯಿಸಿಕೊಳ್ಳುವ ಪ್ರದೀಪ ಶೆಟ್ಟರ ಅಣ್ಣ ಜಗದೀಶ ಶೆಟ್ಟರನ ರಾಜಕೀಯ ಪ್ರಭಾವವನ್ನು ವ್ಯವಸ್ಥಿತವಾಗಿ ಬಳಸಿಕೊಂಡವನು. ಜವಾನನಿಂದ ಹಿಡಿದು ಜಿಲ್ಲಾಧಿಕಾರಿವರೆಗೂ, ಪಿ.ಸಿ.ಯಿಂದ ಎಸ್.ಪಿ.ವರೆಗೂ ಈ ಪ್ರದೀಪ ಶೆಟ್ಟರನ ಪ್ರೇರಣೆಯಿಂದಲೇ ಎಲ್ಲರೂ ಇಲ್ಲಿಗೆ ಬಂದು ವಕ್ಕರಿಸಿದ್ದಾರೆ. ರಣ ಹಸಿವಿನ ಖಾಕಿಧಾರಿಗಳಂತೂ ಪ್ರದೀಪನನ್ನು ಪರಮಾತ್ಮ ಎಂದು ಕರೆಯುತ್ತಾರೆ. ಕಳೆದ ಹಲವು ವರ್ಷಗಳಿಂದ ಹುಬ್ಬಳ್ಳಿ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ "ಕೋರ" ಎಂಜಿನಿಯರಿಂಗ್ ಎಂಬ ಹೆಸರಿನ ವಾಲ್ವ್ ಇಂಡಸ್ಟ್ರೀಯನ್ನು ನಡೆಸುತ್ತಿರುವ ಪ್ರದೀಪ ಶೆಟ್ಟರ ಇದರ ವಿಸ್ತರಣೆಗಾಗಿ ಹುಬ್ಬಳ್ಳಿ-ಧಾರವಾಡ ಮಧ್ಯದ ರಾಯಾಪೂರ ಕೈಗಾರಿಕಾ ಪ್ರದೇಶದಲ್ಲಿ ಎರಡೂವರೇ ಎಕರೆ ಜಮೀನು ನೀಡುವಂತೆ ಕೆಐಎಡಿಬಿಗೆ 25 ಅಗಸ್ಟ್ 2010 ಕ್ಕೆ ಅರ್ಜಿ ಸಲ್ಲಿಸಿದ್ದ. ಉದ್ಯೋಗ ಮಿತ್ರ ಸ್ಕೀಂನಲ್ಲಿ 5 ಲಕ್ಷ ಡಿ.ಡಿ. ಕೂಡ ಅದೇ ದಿನಾಂಕದಂದೆ ಇಲಾಖೆಗೆ ಸಂದಾಯ ಮಾಡಿದ್ದ. ಮುಂದೆ ಯಾವುದೇ ಸರ್ಕಸ್ ಇಲ್ಲದೆ ಕೆಐಎಡಿಬಿ ಪ್ರದೀಪ ಶೆಟ್ಟರನ ಕೋರ ಎಂಜಿನಿಯರಿಂಗ್ ಕಂಪನಿಗೆ 31 ಅಗಸ್ಟ್-2010ರಂದು 2.5 ಎಕರೆ ಭೂಮಿ ಮಂಜೂರು ಮಾಡಿ ಆದೇಶ ಹೊರಡಿಸಿದೆ. ಹತ್ತಾರು ಕಂಪನಿಗಳು ಜಮೀನಿಗಾಗಿ ಅರ್ಜಿ ಕೊಟ್ಟು ವರ್ಷಾನುಗಟ್ಟಲೆ ಕಾದು ಕುಳಿತಿರುವಾಗ ಪ್ರದೀಪ ಶೆಟ್ಟರಗೆ ಕೇವಲ ಒಂದೇ ವಾರದಲ್ಲಿ ಭೂಮಿ ಹಂಚಿಕೆ ಮಾಡುವ ಮೂಲಕ ಮಂತ್ರಿ ಜಗದೀಶ ಶೆಟ್ಟರ ದಾಖಲೆ ನಿರ್ಮಿಸಿದ್ದಾನೆ.




ಎಲ್ಲರನ್ನು ಬಿಟ್ಟು ಶೆಟ್ಟರಿಗಷ್ಟೆ ಕೊಟ್ಟರು

ಪ್ರದೀಪ ಪಕ್ಕಾ ಬಣಜಿಗ ವ್ಯಾಪಾರಿ. ಪ್ರಾಫಿಟ್ ದಂಧೆಯೊಂದೆ ಇವನಿಗೆ ಗೊತ್ತಿರುವ ಕಸುಬು. ಇಂಥವನು ರಾಯಾಪೂರ ಕೈಗಾರಿಕಾ ಪ್ರದೇಶದ ಕೋಟಿ ಕೋಟಿ ಬೆಲೆಬಾಳುವ 2.5 ಎಕರೆ ಭೂಮಿಯನ್ನು ಕೇವಲ ಎಕರೆಗೆ 16 ಲಕ್ಷದಂತೆ ಕೆಐಎಡಿಬಿಯಿಂದ ಹೊಡೆದಿದ್ದಾನೆ. ಅಗಸ್ಟ್ 31ರಂದು ಕೆಐಎಡಿಬಿ ಭೂಮಿ ಮಂಜೂರು ಆದೇಶದೊಂದಿಗೆ ಪ್ರದೀಪ ಶೆಟ್ಟರಗೆ ಮೊದಲು ತುಂಬಿರುವ 5 ಲಕ್ಷ ಬಿಟ್ಟು ಉಳಿದ ಹಣವನ್ನು ಪಾವತಿ ಮಾಡುವಂತೆ ಸೂಚಿಸಿದೆ. ಶೆಟ್ಟರಗೆ ಇದೇನು ದೊಡ್ಡ ಮೊತ್ತವಲ್ಲ, ಆದರೆ ಹತ್ತು ವರ್ಷದ ಹಿಂದೆನೇ ಎಲ್ಲಾ ಮೂಲಭೂತ ಸೌಕರ್ಯ ಹೊಂದಿ ಸಂಪೂರ್ಣ ಅಭಿವೃದ್ಧಿಪಡಿಸಿರುವ ರಾಯಾಪೂರ ಕೈಗಾರಿಕಾ ಪ್ರದೇಶದಲ್ಲಿ ಕೇವಲ 16 ಲಕ್ಷಕ್ಕೆ ಒಂದು ಎಕರೆ ಜಮೀನು ಹಂಚಿಕೆಯಾಗಿರುವುದು ಒಳಸಂಚಿನಿಂದಲೆ ಹೊರತು ಬೇರೇನೂ ಅಲ್ಲ.





ಒಟ್ಟು 312 ಎಕರೆ ವಿಸ್ತಾರದ ರಾಯಾಪೂರ ಕೈಗಾರಿಕಾ ಪ್ರದೇಶ ಹುಬ್ಬಳ್ಳಿ-ಧಾರವಾಡ ಮಧ್ಯದ ರಾಷ್ಟ್ರೀಯ ಹೆದ್ದಾರಿ 4ಕ್ಕೆ ಮತ್ತು ರೇಲ್ವೆ ನಿಲ್ದಾಣಕ್ಕೆ ಅಂಟಿಕೊಂಡಿದೆ. ಇದಕ್ಕೆ ಅಣತಿ ದೂರದಲ್ಲಿ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ, ಇಂಡಿಯನ್ ಆಯಿಲ್ ಕಾರ್ಪೊರೇಷನ್ ವಲಯ ಬಂಕ್, ಎಸ್.ಡಿ.ಎಮ್. ಮೆಡಿಕಲ್ ಕಾಲೇಜು, ಡೆಂಟೆಲ್ ಕಾಲೇಜು ಸೇರಿದಂತೆ ಬಹುತೇಕ ಸರ್ಕಾರಿ ವಿಭಾಗೀಯ ಕಚೇರಿಗಳು ಈ ಪ್ರದೇಶಕ್ಕೆ ಹೊಂದಿಕೊಂಡಿರುವುದರಿಂದ ಸಹಜವಾಗಿ ರಿಯಲ್ ಎಸ್ಟೇಟ್ ದಂಧೆಗೆ ಪೂರಕವಾಗಿದೆ. ರಾಯಾಪುರದಲ್ಲಿ ಎಕರೆಗೆ ಒಂದರಿಂದ ಒಂದೂವರೆ ಕೋಟಿ ಬೆಲೆ ಇದೆ. ಇದೇ ದರದಲ್ಲಿ ಇಲ್ಲಿಯ ಭೂಮಿಯನ್ನು ಉದ್ಯಮಿಗಳಿಗೆ ಕೆಐಎಡಿಬಿಯಿಂದ ವಿತರಿಸಲಾಗಿದೆ. ಆದರೆ ಮಂತ್ರಿ ಜಗದೀಶ ಶೆಟ್ಟರಗೆ ಕೇವಲ 16 ಲಕ್ಷಕ್ಕೆ ಎಕರೆ ಭೂಮಿಯನ್ನು ಯಾವ ಮಾನದಂಡದ ಮೇಲೆ ಇಲಾಖೆ ನಿಗದಿಪಡಿಸಿತು?



ರೈತರ ಜಮೀನಿನು ವಶಪಡಿಸಿಕೊಂಡು ಅವರಿಗೆ ಹತ್ತಾರು ಕಾಯ್ದೆ ಹೇಳಿ ಬೆದರಿಸಿ ಕವಡೆ ಕಿಮ್ಮತ್ತಿನ ಹಣವನ್ನು ಪರಿಹಾರ ಎಂದು ಕಂತಿನಲ್ಲಿ ನೀಡುವ, ಹತ್ತಾರು ವರ್ಷ ಕಚೇರಿಗೆ ಸುತ್ತಾಡಿಸುವ ಕೆಐಎಡಿಬಿ ಅಧಿಕಾರಿಗಳು ಉದ್ಯಮಿಗಳೊಂದಿಗೆ ದೊಡ್ಡ ಮಟ್ಟದ ಡೀಲು ಕುದುರಿಸಿಕೊಂಡಿರುವುದು ಈ ಪ್ರಕರಣದಿಂದಲೇ ಸಾಬಿತಾಗುತ್ತದೆ. ಖೊಟ್ಟಿ ಕೈಗಾರಿಕೋದ್ಯಮಿಗಳಿಗೆ ಜಮೀನು ಮಂಜೂರು ಮಾಡಿ ಮುಂದೆ ಅದೇ ಜಮೀನನ್ನು ಹೆಚ್ಚು ಹಣಕ್ಕೆ ಮಾರುವ ದಂಧೆ ಕೂಡಾ ಇಲ್ಲಿ ಜೋರಾಗಿದೆ.

ನಿಜವಾಗಲೂ ಒಂದು ಕೈಗಾರಿಕೆ ಸ್ಥಾಪಿಸಿ ನೂರಾರು ನಿರುದ್ಯೋಗಿಗಳಿಗೆ ಕೆಲಸ ನೀಡುವ ಆಸೆ ಹೊಂದಿರುವ ಒಬ್ಬ ಕೈಗಾರಿಕೋದ್ಯಮಿಗಳಿಗೆ ಕೆಐಎಡಿಬಿ ಜಮೀನು ನೀಡಿಲ್ಲ. ಈ ವರ್ಷ 12 ಜನ ಜಮೀನು ಕೋರಿ ಅರ್ಜಿ ಸಲ್ಲಿಸಿದ್ದರೂ ಅವರತ್ತ ತಿರುಗಿ ನೋಡದ ಕೆಐಎಡಿಬಿ ಅಧಿಕಾರಿಗಳು ಮಂತ್ರಿ ಜಗದೀಶ ಶೆಟ್ಟರನ ತಮ್ಮ ಪ್ರದೀಪ ಶೆಟ್ಟರಗೆ ಸೇರಿದ ಕೋರ ಎಂಜಿನಿಯರಿಂಗ್ 2.5 ಎಕರೆ ಭೂಮಿಯನ್ನು ಎಂಟೇ ದಿನದಲ್ಲಿ ಒದಗಿಸಿದೆ. ರಾಯಾಪುರ ಕೈಗಾರಿಕಾ ಪ್ರದೇಶದಲ್ಲಿ ಸರ್ಕಾರದಿಂದಲೇ ಆರಂಭಿಸುವ ಕೈಗಾರಿಕೆಗಾಗಿ 10 ಎಕರೆ ಭೂಮಿಯ್ನು 8 ವರ್ಷದಿಂದ ಕಾಯ್ದಿರಿಸಲಾಗಿತ್ತು, ಈ ಭೂಮಿ ತಮಗೆ ನೀಡಬೇಕು ಎಂದು 12 ಉದ್ಯಮಿಗಳು ಕೇಳುತ್ತಾ ಬಂದಿದ್ದರು. ಪ್ರತಿ ತಿಂಗಳು ಅಧಿಕಾರಿಗಳು ಸಭೆ ನಡೆಸಿ ಇದನ್ನು ಪ್ರಸ್ತಾಪಿಸುತ್ತಲೆ ಬಂದಿದ್ದರು. ಆದರೆ ಅಗಸ್ಟ್ 2010ರ ಅಂತ್ಯಕ್ಕೆ ಈ 10 ಎಕರೆಯಲ್ಲಿ 4.5 ಎಕರೆ ಭೂಮಿಯನ್ನು ಮಾತ್ರ ಪರಭಾರೆ ಮಾಡಿದ್ದು, ಅದರಲ್ಲಿ 2.5 ಎಕರೆ ಪ್ರದೀಪ ಶೆಟ್ಟರನ ಪಾಲಾಗಿದೆ.

ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಿ ಅದರ ಅಕ್ಕಪಕ್ಕದ ಜಮೀನನ್ನು ಕಡಿಮೆ ದರಕ್ಕೆ ಖರೀದಿಸಿ ಈಗ ಸರ್ಕಾರದಿಂದ ಕೋಟಿ ಕೋಟಿ ಪರಿಹಾರ ಹಣವನ್ನು ಪಡೆದಿರುವ ಶೆಟ್ಟರ ಅವರ ಕುಟುಂಬ ಜೀವನ ಪೂರ್ತಿ ಭೂಗಳ್ಳತನವನ್ನೇ ಮೂಲ ಕಸುಬನ್ನಾಗಿಸಿಕೊಂಡಿರುವುದರಲ್ಲಿ ಎರಡು ಮಾತಿಲ್ಲ, ಇದೆಲ್ಲದರ ಹಿಂದೆ ಇರುವ ಪ್ರದೀಪ ಶೆಟ್ಟರ, ಗ್ಲೋಬಲ್ ಎಜುಕೇಶನ್ ಫೌಂಡೇಶನ್ ಹೆಸರಲ್ಲಿ ಬಿ.ಬಿ.ಎ ಮತ್ತು ಎಂ.ಬಿ.ಎ. ಕಾಲೇಜು ನಡೆಸುತ್ತಿದ್ದಾನೆ. ಸದ್ಯದಲ್ಲೇ ಎಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜು ಶುರು ಮಾಡುವ ಉದ್ದೇಶವನ್ನು ಈಗ ಹೊರಗೆಡವಿರುವ ಪ್ರದೀಪ ಅದಕ್ಕಾಗಿ ಹುಬ್ಬಳ್ಳಿ ಹೊರವಲಯದ ತಾರಿಹಾಳ ಬೈಪಾಸ್ ಬಳಿ ಭೂಮಿ ಕೊಳ್ಳೆ ಹೊಡೆಯಲು ಈಗ ಸ್ಕೆಚ್ ರೆಡಿ ಮಾಡಿಕೊಂಡಿದ್ದಾನೆ. ಶೀಘ್ರದಲ್ಲಿ ಅಲ್ಲಿಯ ಹತ್ತು ಎಕರೆಯಷ್ಟು ಜಮೀನು ನುಂಗಿ ನೀರು ಕುಡಿಯುವುದು ಗ್ಯಾರಂಟಿ.

• ಹುರಳಿಕುಪ್ಪಿ ವಿನಯ
vinayalankesh@gmail.com

ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದ ಕೆಐಎಡಿಬಿ

ಯಡ್ಡಿ ಕೈಗಾರಿಕಾ ಖಾತೆಗೆ ನಿರಾಣಿಯನ್ನು ತಂದು ಕೂರಿಸಿದ್ದೇ ನೆಲಗಳ್ಳತನಕ್ಕೆ ಎಂಬುದೀಗ ರಹಸ್ಯವಾಗೇನೂ ಉಳಿದಿಲ್ಲ. ನಿರಾಣಿ ತನ್ನ ಹುಬ್ಬಳ್ಳಿಯ ಗೆಳೆಯ ಗಲಗಲಿಯ ವಿಶ್ವಭಾರತಿ ಎಜುಕೇಶನ್ ಟ್ರಸ್ಟ್‌ಗೆ 82 ಎಕರೆ ಭೂಮಿಯನ್ನು ಸ್ವಯಾರ್ಜಿತ ಆಸ್ತಿ ಎಂಬಂತೆ ಟ್ರಸ್ಟ್ ರಚನೆಯಾಗುವುದಕ್ಕೂ 8 ತಿಂಗಳ ಮೊದಲೇ ಡಿನೋಟಿಫೈ ಮಾಡಿದ್ದಾನೆ. ಅಂದರೆ ಕೂಸು ಹುಟ್ಟುವ ಮುನ್ನವೇ ಕುಲಾವಿ ಹೊಲಿಸಿದ್ದಾನೆ ನಿರಾಣಿ.

ಕೈಗಾರಿಕೋದ್ಯಮಿಗಳು ಮನೆ ಕಟ್ಟಿಕೊಳ್ಳುವುದಕ್ಕಾಗಿ ಭೂಮಿಯನ್ನು ಬೇಲೂರು ಕೈಗಾರಿಕಾ ಪ್ರದೇಶದಲ್ಲಿ 2008 ರಲ್ಲಿ ತೆಗೆದಿರಿಸಲಾಗಿತ್ತು, ಇಲ್ಲಿ ಅನೇಕ ಸಂಸ್ಥೆಗಳಿಗೆ ಅಲ್ಪ ಸ್ವಲ್ಪ ಜಾಗೆ ನೀಡಲಾಗಿದೆ. ಆದರೆ ಹುಬ್ಬಳ್ಳಿಯ ಟ್ರಸ್ಟ್‌ಗೆ ಈ ಜಾಗೆಯನ್ನು ಟ್ರಸ್ಟ್ ನೋಂದಣಿಯಾಗುವ ಮುನ್ನವೇ ನೀಡಿರುವುದು ವಿಚಿತ್ರವೇ ಸರಿ.

ಈ ಟ್ರಸ್ಟ್ ರಚನೆಯಾಗಿದ್ದು 05-08-2009ರಂದು. ಇದಕ್ಕಾಗಿ ಜಾಗೆ ಮಂಜೂರಾಗಿದ್ದು 28-01-2009 ರಂದು. ಅಂದರೆ 8 ತಿಂಗಳು ಮುನ್ನವೇ ಇಲ್ಲದ ಟ್ರಸ್ಟ್‌ಗೆ ಕೆಐಎಡಿಬಿ ಜಾಗೆ ನೀಡಿದೆ. ಅಸಲಿಗೆ ಈ ಟ್ರಸ್ಟ್‌ನ ಮಾಲೀಕ ಗಲಗಲಿ ಮಂತ್ರಿ ನಿರಾಣಿಯ ಎಲ್ಲ 'ವ್ಯವಹಾರ'ಗಳನ್ನು ಮಾಡುವಂತಹವನು. ಅದರಿಂದಲೇ ಈಗ ಆತನಿಗೆ ಕಡಿಮೆ ಬೆಲೆಯಲ್ಲಿ ಭೂಮಿಯ ಇನಾಮು ಸಿಕ್ಕಿದೆ.

ಇಂಥ ಮಂತ್ರಿ ಅಧಿಕಾರದಲ್ಲಿದ್ದರೆ ಮುಂದೆ ಹೆಣ ಹೂಳಲು ಮಂಗಳ ಗ್ರಹಕ್ಕೆ ಹೋಗಬೇಕಾದೀತು!

ಸೀಮಾ ಕಮಾಲ್



ಶಾಸಕಿ ಸೀಮಾ ಮಸೂ[ತಿ] ತನ್ನ ತಮ್ಮನಿಗೆ ಐಷಾರಾಮಿ ಹೋಟೆಲ್ ಕಟ್ಟಲು ಬರೋಬ್ಬರಿ 1 ಎಕರೆ ಭೂಮಿ ಕೊಡಿಸಿದ್ದಾಳೆ. ಕೈಗಾರಿಕಾ ಮಂತ್ರಿ ಮುರಗೇಶ ನಿರಾಣಿಯ ಪರಮಾಪ್ತ ಸ್ನೇಹಿತೆ, ಧಾರವಾಡ ಗ್ರಾಮೀಣ ಶಾಸಕಿ ಸೀಮಾ ಮಸೂತಿ ತನ್ನ ತಮ್ಮ ನಾಗಪ್ಪನಿಗೆ ಮೂರೇ ದಿನದ[ಲ್ಲಿ] ಸರ್ಕಾರಿ ಭೂಮಿ ಕೊಡಿಸಿದ್ದಾಳೆ. ಮಸೂತಿಯ ತಮ[್ಮ] ನಾಗಪ್ಪ ಈಗ ಹೋಟೆಲ್ ದಂಧೆಗೆ ಇಳಿದಿದ್ದಾನೆ. ಅದಕ್ಕಾ[ಗಿ] ಧಾರವಾಡ-ಬೆಳಗಾವಿ ಹೆದ್ದಾರಿಗೆ ಹೊಂದಿಕೊಂಡಿರುವ ವ್ಯಾಪಾರಕ್ಕೆ ಹೇಳಿಮಾಡಿಸಿದಂತಿರುವ ಜಾಗೆಯನ್ನು ಸೀಮ[ಾ] ಗುಳುಂ ಎನಿಸಿದ್ದಾಳೆ. ಗ್ರೀನ್ ಬೆಲ್ಟ್‌ಗಾಗಿ ಮೀಸಲಿಟ್ಟಿ[ದ್ದ] ಭೂಮಿಯನ್ನು ಕೆಐಎಡಿಬಿ ಅಧಿಕಾರಿಗಳು ಈಕೆಯ ಉಡಿಗೆ ಹಾಕಿ ಕೃತಾರ್ಥರಾಗಿದ್ದಾರೆ.

ಧಾರವಾಡ ಹೊರವಲಯದ ನರೇಂದ್ರ ಬಳಿಯ ಕೈಗಾರಿಕಾ ಪ್ರದೇಶವಾದ ಗ್ರೋಥ್ ಸೆಂಟರ್‌ನಲ್ಲಿ ಪ್ರಾಕೃತಿ[ಕ] ಸಮತೋಲನ ಕಾಯ್ದುಕೊಳ್ಳಲು ಕೇಂದ್ರ ಸರ್ಕಾರದ ನಿರ್ದೇಶನದಂತೆ 1995ರಿಂದ ರಾಜ್ಯ ಸರ್ಕಾರ ಈ ಭೂಮಿಯನ್ನು ಗ್ರೀನ್ ಬೆಲ್ಟ್ ಎಂದು ಮೀಸಲಿಟ್ಟಿತ್ತು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 4ಕ[್ಕೆ] ಹೊಂದಿಕೊಂಡಿರುವ 2 ಸಾವಿರ ಎಕರೆ ಪ್ರದೇಶದಲ್ಲಿ ಗ್ರೋಥ್ ಸೆಂಟರ್ ಇದೆ. ಈ ಹೆದ್ದಾರಿ ಪಕ್ಕ 100 ಮೀ[ಟರ್] ಅಗಲದ ಪ್ರದೇಶವನ್ನು ಹಸಿರುಪಟ್ಟಿ ಎಂದು ಕೂಡಾ ಘೋಷಿಸಲಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ[್ಕೆ] ಬಂದಾಗಿನಿಂದ ಈ ಪ್ರದೇಶ ದಿನದಿನಕ್ಕೆ ಕರಗುತ್ತಿದೆ. ಈಗ ಶಾಸಕಿ ಸೀಮಾ ಮಸೂತಿ ತನ್ನ ತಮ್ಮನ ಪುನೀತ್ ಎಂಟರ್‌ಪ್ರೈಸಸ್‌ಗೆ (ಪ್ಲಾಟ ನಂ 176) ಒಂದು ಎಕರೆ ಭೂಮಿಯನ್ನು ಕೊಡಿಸುವಲ್ಲಿ ಯಶಸ್ವಿಯಾಗಿದ್ದಾಳೆ. ಇವಳ ಅರ್ಜಿಗೆ ಕೈಗಾರಿಕಾ ಮಂತ್ರಿ ಮುರುಗೇಶ ನಿರಾಣಿ ಒತ್ತು ಕೊಟ್ಟು ರೆಕಮೆಂಡ್ ಮಾಡಿದರೆ, ಸಂಸದ ಪ್ರಹ್ಲಾದ ಜೋಷಿ ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಮಂತ್ರಿ ಸಿ.ಸಿ. ಪಾಟೀಲ ಮೂರೆ ದಿನಕ್ಕೆ ಮಂಜೂರಿ ಕೊಟ್ಟಿದ್ದಾರೆ.

ಆಶ್ಚರ್ಯವೆಂದರೆ ಶಾಸಕಿ ಸೀಮಾ ಮಸೂತಿ ತನ್ನ ತಮ್ಮನಿಗೆ ಭೂಮಿ ನೀಡುವಂತೆ 31-12-2008 ರಂದು ಶಿಫಾರಸ್ಸು ಪತ್ರ ಬರೆದಿದ್ದಳು. 02-01-2009 ರಂದು ಒಂದು ಎಕರೆ ಭೂಮಿಯನ್ನು ಮಂಜೂರು ನಂ. ಐಎಡಿಬಿ/ಅಲಾಟ್/ಸೆಕ್/12314/08-09) ಮಾಡಲಾಗಿದೆ. ಇದಕ್ಕೆ ಕಾರಣ ಕೂಡ ಸಮಿತಿ ನೀಡಿದೆ. ನಿಗದಿತ ಬೆಲೆಗಿಂತ ದುಪ್ಪಟ್ಟು ಹಣ ನೀಡಲು ಒಪ್ಪಿದ್ದರಿಂದ ಸದರಿಯವರಿಗೆ ಈ ಭೂಮಿ ನೀಡಲಾಗಿದೆಯೆಂತೆ. ಈ ಗ್ರೋಥ್ ಸೆಂಟರನಲ್ಲಿ ಕೈಗಾರಿಕೆಗಳ ಉತ್ತೇಜನಕ್ಕೆ ಪ್ರತಿ ಎಕರೆ ಭೂಮಿಯನ್ನು 1 ಲಕ್ಷಕ್ಕೆ ಮಾರಲಾಗುತ್ತಿತ್ತು, ಆದರೆ ಈಗ ನಾಗಪ್ಪ ಅಂಗಡಿಗೆ ಎಕರೆಗೆ 24 ಲಕ್ಷ ನಿಗದಿ ಮಾಡಲಾಗಿದೆ. ಆದರೆ ಈ ಪ್ರದೇಶದಲ್ಲಿ ಕೃಷಿ ಭೂಮಿಯ ಬೆಲೆಯೇ ಪ್ರತಿ ಎಕರೆಗೆ 50 ಲಕ್ಷಕ್ಕೆ ಏರಿದೆ. ಇನ್ನೂ ಅಭಿವೃದ್ಧಿ ಪಡಿಸಿದ, ಅದರಲ್ಲೂ ಹೆದ್ದಾರಿಗೆ ಹೊಂದಿಕೊಂಡಿರುವ ಹೋಟೆಲ್ ಉದ್ಯಮಕ್ಕೆ ಅನುಕೂಲವಾಗುವಂತಹ ಭೂಮಿ ಬೆಲೆ ಎಷ್ಟಿರಬೇಡ!

ಅಸಲಿಗೆ ಸೀಮಾ ಮಸೂತಿಯೇನು ರಾಜಕೀಯದಲ್ಲಿ ಪಳಗಿದವಳಲ್ಲ, ಈಕೆಯ ತಮ್ಮ ನಾಗಪ್ಪ ಈ ಹಿಂದೆ ಧಾರವಾಡ ತಾಲೂಕ ಕ್ಯಾರಕೊಪ್ಪ ಗ್ರಾಮ ಪಂಚಾಯತ್ ಅಧ್ಯಕ್ಷನಾಗಿಯೂ ಕೆಲಸ ಮಾಡಿದ್ದ. ಹೀಗಾಗಿ ಸೀಮಾ ಮಸೂತಿಯ ಇವತ್ತಿನ ಎಲ್ಲ ರಾಜಕೀಯ ವ್ಯವಹಾರಗಳನ್ನು ಇವನೇ ನೋಡಿಕೊಳ್ಳುತ್ತಿರುವುದು, ಎಲ್ಲಾ ಡೀಲ್‌ಗಳನ್ನು ಇವನೇ ಫಿಕ್ಸ್ ಮಾಡುವುದು.


ಸೀಮಾ ಮಸೂತಿಯ ತವರುಮನೆ ಧಾರವಾಡ ತಾಲೂಕಿನ ಚಿಕ್ಕಮಲ್ಲಿಗವಾಡ. (ಪತಿಯೂರು ಉಪ್ಪಿನ ಬೆಟಗೇರಿ) ಇವಳ ತಂದೆ ಸಣ್ಣಮಲ್ಲಪ್ಪ ಅಂಗಡಿಗೆ ಮೂವರು ಪುತ್ರರು, ಮೂವರು ಪುತ್ರಿಯರು. ಹಿರಿಯ ಪುತ್ರ ಬಸವರಾಜ ಅಂಗಡಿ ಸದ್ಯ ಬೆಂಗಳೂರಿನಲ್ಲಿ ಪೊಲೀಸ್ ಇನ್ಸಪೆಕ್ಟರ್. ಎರಡನೆಯವ ಈಶ್ವರಪ್ಪ. ಕೊನೆಯ ಮಗನೇ ಈ ಭೂಗಳ್ಳ ನಾಗಪ್ಪ. ಕೈಗಾರಿಕಾ ಮಂತ್ರಿ ಮುರಗೇಶ ನಿರಾಣಿ ಧಾರವಾಡ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡ ನಂತರ ಸೀಮಾಳ ಖದರೇ ಚೇಂಜಾಗಿತ್ತು ಅದರ ಫಲವೆಂಬಂತೆ ಕೋಟಿ ಬೆಲೆಬಾಳುವ ಒಂದು ಎಕರೆ ಭೂಮಿಯನ್ನು ಸೀಮಾ ತಮ್ಮನಿಗೆ ಬಳುವಳಿಯಾಗಿ ಕೊಟ್ಟಿದ್ದಾಳೆ.

ಓಟ್ಟಿನಲ್ಲಿ ನಂಬಿದ ಜನಕ್ಕೆ ವ್ಯವಸ್ಥಿತವಾಗಿ ಬಿಜೆಪಿಗರು ಬತ್ತಿ ಇಟ್ಟಿದ್ದಾರೆ. ಓಟು ಕೊಟ್ಟ ಜನರು ಹತ್ತಿರ ಬಂದರೆ ಗೇಟ್ ಪಾಸ್ ಕೊಡುವ, ಕಷ್ಟದಲ್ಲಿ ಬಂದರೆ ಕ್ಯಾರೆ ಎನ್ನದ ಕ್ರೂರ ಚಡ್ಡಿಗಳಿಂದ ಜನ ಕಂಗಾಲಾಗಿದ್ದಾರೆ. ಬರುವ ದಿನಗಳಲ್ಲಿ ಈ ಭೂಗಳ್ಳರಿಗೆ ಜನರೇ ಬುದ್ಧಿ ಕಲಿಸಬೇಕಿದೆ.


ದಾಖಲೆ ಹೊರಬಂದದ್ದು ಹೀಗೆ....!

ಶ್ರೀನಿವಾಸ ಅಂತ ಸಾಧಾರಣ ಕಂಪ್ಯೂಟರ್ ಆಪರೇಟರ್ ಒಬ್ಬನಿದ್ದ. ಈತ ಯಡ್ಡಿ ಮಗಳು ಉಮಾದೇವಿಯ ಕಚೇರಿಯಲ್ಲಿ ಅಸಿಸ್ಟೆಂಟ್ ಆಗಿ ಕೆಲಸ ಮಾಡಿಕೊಂಡಿದ್ದ. ಅವನು ಕೆಲಸಕ್ಕೆ ಸೇರಿ ಹೆಚ್ಚು ದಿನಗಳೇನು ಆಗಿರಲಿಲ್ಲ. ಈಗ ಅಲ್ಲಿ ಕೆಲಸಕ್ಕೂ ಬರುತ್ತಿಲ್ಲ. ಈ ಶ್ರೀನಿವಾಸನೇ ಯಡ್ಡಿ ಫ್ಯಾಮಿಲಿಯ ರಹಸ್ಯ ಕಾಕಾಸಿನ ವ್ಯವಹಾರಗಳನ್ನು ಬಯಲಿಗೆ ತಂದವನು!

ಯಡ್ಡಿ ಸಿಎಂ ಆದಮೇಲೆ ಈತನ ಮಕ್ಕಳು ಹಾಗೂ ಅಳಿಯಂದಿರು ಹಣ ಕದಿಯುವ ಚಾಳಿ ಶುರು ಮಾಡಿಕೊಂಡಿರಲ್ಲ. ಅದೇ ಮೊದಲ ಬಾರಿಗೆ ಅಧಿಕಾರ ಸಿಕ್ಕಿದೆ. ಹಣ ಮಾಡುವ ಅವಕಾಶಗಳೂ ಸಾಕಷ್ಟಿವೆ. ಆದರೆ ಯಾರನ್ನು ನಂಬಬೇಕು, ಯಾರನ್ನು ನಂಬಬಾರದೆಂಬುದು ಮಕ್ಕಳಿಗೆ ಗೊತ್ತಾಗಲಿಲ್ಲ, ಜೊತೆಗೆ ಕದ್ದ ದುಡ್ಡನ್ನು ಬಚ್ಚಿಡುವ ಕಲೆಯೂ ಕರಗತವಾಗಿರಲಿಲ್ಲ. ಹಾಗಾಗಿ ಸಾಕ್ಷಾತ್ ಉಮಾದೇವಿಯೇ ಲೂಟಿಯಾದ ದುಡ್ಡಿನ ಮ್ಯಾನೇಜ್‌ಮೆಂಟಿಗೆ ನಿಂತಳು. ವಿಜಯೇಂದ್ರ, ರಾಘವೇಂದ್ರ, ಸೋಹನ್ ಕುಮಾರ್ ಸೇರಿಕೊಂಡು ತರಹೇವಾರಿ ಕಂಪನಿಗಳನ್ನು ತೇಲಿಬಿಟ್ಟರು. ರಾಜಕಾಲುವೆಯಲ್ಲಿ ಹರಿದುಬರುತ್ತಿದ್ದ ಹಣವನ್ನು ನಾನಾ ಕಂಪನಿಗಳಿಗೆ, ಬ್ಯಾಂಕ್ ಅಕೌಂಟುಗಳಿಗೆ ಉಪಕಾಲುವೆ ಮೂಲಕ ಹರಿಸಿ ದುಡ್ಡಿನ ಡ್ಯಾಂ ತುಂಬಿಸತೊಡಗಿದರು. ಇದೆಲ್ಲದರ ಸೂತ್ರಧಾರಿಣಿ ಉಮಾ ಆಗಿದ್ದಳು.



ಉಮಾದೇವಿ

ತಮ್ಮ ಕುಟುಂಬದ ಒಡೆತನದ ಕಂಪನಿಗಳು. ಶೇರು ದಂಧೆ, ಬ್ಯಾಂಕ್ ಅಕೌಂಟುಗಳ ಲೆಕ್ಕ ಆಡಿಟರ್‌ಗಳ ಸಲಹೆ, ಕಳ್ಳ ದುಡ್ಡಿನ ವಿಲೇವಾರಿಗಳನ್ನೆಲ್ಲಾ ನಿಭಾಯಿಸುತ್ತಿದ್ದ ಉಮಾಗೆ ಸಹಾಯಕ್ಕೊಬ್ಬ ಬೇಕಾಯಿತು. ಕಂಪ್ಯೂಟರ್‌ನಲ್ಲಿ ಇದನ್ನೆಲ್ಲಾ ದಾಖಲಿಸಿ ಅಕೌಂಟ್ಸ್ ಮ್ಯಾನೇಜ್ ಮಾಡಲು ಶ್ರೀನಿವಾಸ್ ಬಂದು ಸೇರಿಕೊಂಡ. ಈತ ಬಿಜೆಪಿಯ ಅನಂತ್‌ಕುಮಾರ್‌ಗೆ ಪರಿಚಯವಿದ್ದ ಹುಡುಗ ಎನ್ನುವವರಿದ್ದಾರೆ. ಅದೇನೆ ಇರಲಿ. ಕೆಲ ತಿಂಗಳು ಉಮಾದೇವಿಗೆ ಸಹಾಯಕನಾಗಿ ಕಂಪ್ಯೂಟರ್ ಚಲಾಯಿಸುತ್ತಿದ್ದ ಶ್ರೀನಿವಾಸ್ ಒಮ್ಮೆ ಅದೇಕೋ ಏನೋ ಉಮಾದೇವಿಯೊಂದಿಗೆ ಜಗಳ ಮಾಡಿಕೊಂಡು ಆದಾದ ಕೆಲ ದಿನಗಳಲ್ಲೇ ಕೆಲಸ ಬಿಟ್ಟು ಹೋದ. ಹಾಗೆ ಹೋದವನು ಬರಿಗೈಯಲ್ಲಿ ಹೋಗಲಿಲ್ಲ. ಉಮಾ ಕಚೇರಿಯ ಕಂಪ್ಯೂಟರ್‌ಗಳಲ್ಲಿ ಅವರ ದಂಧೆಗೆ ಸಂಬಂಧಿಸಿದ್ದ ಏನೇನು ಮಾಹಿತಿಗಳಿದ್ದವೋ ಅವೆಲ್ಲವನ್ನೂ ಕಾಪಿ ಮಾಡಿಕೊಂಡು ಹೋದ ಎನ್ನಲಾಗಿದೆ. ಅಥವಾ ತನಗೇ ಇ-ಮೇಲ್ ಕಳುಹಿಸಿಕೊಂಡಿರಲಿಕ್ಕೂ ಸಾಕು. ಹೀಗೆ ಹೊರಬಂದ ಶ್ರೀನಿವಾಸ್ ನೇರವಾಗಿ ಅನಂತ್‌ಕುಮಾರ್ ಹತ್ತಿರ ಹೋಗಿ ತಾನು ಹೊಂದಿದ್ದ ನಿಧಿ ಸಂಗ್ರಹವನ್ನು ತೋರಿಸಿದ್ದಾನೆ. ಅಲ್ಲಿಂದಾಚೆಗೆ ಏನೇನಾಯಿತೆಂಬುದನ್ನು ನೀವೂ ನೋಡಿದ್ದೀರಿ.



ಮೊದಲು ಈ ದಾಖಲೆಗಳ ಒಂದು ಸೆಟ್ ಅರುಣ್ ಕುಮಾರ್ (ಎ.ಕೆ.) ಎಂಬ ಹೆಸರಿನಲ್ಲಿ ಪ್ರಜಾವಾಣಿ ಕಚೇರಿಗೆ ಹೋಯಿತು. ಅವರು ಪ್ರಕಟಿಸಲು ಹಿಂಜರಿದರು. ನಂತರ ಟೈಮ್ಸ್ ಆಫ್ ಇಂಡಿಯಾ, ವಿಜಯ ಕರ್ನಾಟಕ ಹಾಗೂ ಸುವರ್ಣ ಚಾನಲ್‌ಗೆ ಇದೇ ಎ.ಕೆ. ಕವರ್‌ಗಳು ಹೋದವು. ಯಡ್ಡಿ ಹಗರಣಗಳ ಸ್ಫೋಟ ಕೊನೆಗೂ ಸಂಭವಿಸಿತು. ●

ಕುಮ್ಮಿ ಮಗಳು ಶಮ್ಮಿ ರಾಧಿಕಾಳೇ ಮಮ್ಮಿ!



ಕೆಲವರಿರುತ್ತಾರೆ... ತಮ್ಮ ವೈಯಕ್ತಿಕ ಸಂಬಂಧಗಳನ್ನು ಜೀವಮಾನವಿಡೀ ಕದ್ದುಮುಚ್ಚಿಯೇ ಮೆಂಟೇನು ಮಾಡುತ್ತಾರೆ. ಕೆಲವರಂತೂ ತಮ್ಮ ಕಳ್ಳ ಸಂಬಂಧವನ್ನು ಸಂಭಾಳಿಸಲು ಕಟ್ಟಿಕೊಂಡ ಹೆಂಡತಿಯನ್ನೇ ನೀರಿನ ತೊಟ್ಟಿಯಲ್ಲಿ ತುಂಬಿ ಕೊಲೆ ಮಾಡುತ್ತಾರೆ.

ಇನ್ನು ಕೆಲವರಿರುತ್ತಾರೆ... ಮದುವೆಯ ಹೊರತಾದ ಸಂಬಂಧವನ್ನು ಅಧಿಕೃತಗೊಳಿಸಿ ತನ್ನನ್ನು ನಂಬಿದವರ ಕೈಬಿಡದೆ ಅವರಿಗೆ ಸಾಮಾಜಿಕ ಸ್ಥಾನಮಾನ ಸಿಗುವಂತೆ ನೋಡಿಕೊಳ್ಳುತ್ತಾರೆ.

ಈ ನಿಟ್ಟಿನಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಗೆ ಅವರ ಖಾಸಗಿ ವಿಚಾರದಲ್ಲಿ ಒಂದಿಷ್ಟು ವಿನಾಯಿತಿ ನೀಡಿ ಮೆಚ್ಚುವಂತಹ ಕೆಲಸ ಮಾಡಿದ್ದಾರೆ.

ಕುಮಾರಸ್ವಾಮಿಗೂ ಮಾಜಿ ನಟಿ ರಾಧಿಕಾಗೂ ಇರುವ ಸಂಬಂಧದ ಬಗ್ಗೆ ಯಾರಲ್ಲೂ ಯಾವ ಅನುಮಾನಗಳೂ ಉಳಿದಿರಲಿಲ್ಲ. ಆದರೀಗ ಸ್ವತಃ ರಾಧಿಕಾಳೇ ಅದನ್ನು ಬಹಿರಂಗಗೊಳಿಸಿದ್ದಾಳೆ. ಹದಿನೈದು ದಿನಗಳ ಹಿಂದೆಯೇ "ರಾಧಿಕಾ ಮಾಧ್ಯಮದವರನ್ನು ಸಂಪರ್ಕಿಸಿ, ಕುಮಾರಸ್ವಾಮಿ ನನ್ನ ಗಂಡ, ಶಮಿಕಾ ಕೆ.ಸ್ವಾಮಿ ನಮ್ಮ ಮಗಳು, ನಾಲ್ಕು ವರ್ಷದ ಮುಂಚೆ ನಾವಿಬ್ಬರೂ ಮನೆಯವರ ಸಮಕ್ಷಮದಲ್ಲಿ ಸರಳವಾಗಿ ಮದುವೆಯಾಗಿದ್ದೇವೆ" ಎಂದು ಬಹಿರಂಗಪಡಿಸಲಿದ್ದಾಳೆ ಎಂಬ ಸ್ಪಷ್ಟ ಮಾಹಿತಿ 'ಲಂಕೇಶ್'ಗೆ ದೊರಕಿತ್ತು. ಆದರೆ ಈ ಖಾಸಗಿ ವಿಚಾರವನ್ನು ತೀರಾ 'ಸ್ಕೂಪ್' ರೀತಿ ಬಿಂಬಿಸುವುದು ಪತ್ರಿಕೆಯ ನಿಲುವಾಗಿರಲಿಲ್ಲ. ಯಾಕೆಂದರೆ, "ಕುಮಾರಸ್ವಾಮಿ ನನ್ನ ಪತಿ" ಎಂದು ರಾಧಿಕಾ ಹೇಳಿಕೊಳ್ಳುವುದರ ಹಿಂದೆ ರಾಧಿಕಾಳ ತಂತ್ರಗಳಾಗಲಿ, ಒತ್ತಡವಾಗಲಿ, ಷಡ್ಯಂತ್ರವಾಗಲಿ ಇದ್ದಂತೆ ಕಂಡಿರಲಿಲ್ಲ. ಬದಲಾಗಿ ತಾನು ಮತ್ತು ತನ್ನ ಮಗು ಸಮಾಜದ ಮುಖ್ಯವಾಹಿನಿಯಲ್ಲಿ ಯಾವುದೇ ಮುಜುಗರ ವಿಲ್ಲದೆ ಬದುವ ಉದ್ದೇಶ ಆಕೆಯನ್ನು ಆನಿಸಿತ್ತಾದ್ದರಿಂದ ಅವರ ಬಗ್ಗೆ ಬರೆಯದಿರಲು ನಿರ್ಧರಿಸಿದ್ದೆವು.


ರಾಧಿಕಾ


ಮೊದಲೇ ನಮಗೆ ಸಿಕ್ಕಿದ್ದ ಮಾಹಿತಿ ಈಗ ಊರಿಗೆಲ್ಲಾ ಹಬ್ಬಿದೆ. ಸ್ವತಃ ರಾಧಿಕಾಳೇ ಇವೆಲ್ಲವನ್ನೂ ಒಪ್ಪಿಕೊಂಡು ತನ್ನ ಮಗುವಿನೊಂದಿಗಿರುವ ತರಹೇವಾರಿ ಫೋಟೋಗಳನ್ನು ಮಾಧ್ಯಮಕ್ಕೆ ನೀಡಿದ್ದಾಳೆ. ವರ್ಷದ ಹಿಂದೆಯೇ ಜಯನಗರದ 'ಕ್ರೆಡೆಲ್' ಆಸ್ಪತ್ರೆಯಲ್ಲಿ ರಾಧಿಕಾ ಹೆಣ್ಣು ಮಗುವಿಗೆ ಜನ್ಮ ನೀಡುವುದರೊಂದಿಗೆ ಕುಮಾರಸ್ವಾಮಿ ಜೊತೆಗಿನ ಆಕೆಯ ಸಂಬಂಧ ಬಟಾಬಯಲಾಗಿತ್ತು. ಈಗ ಆ ಮಗುವಿನ ಫೋಟೋ ಮತ್ತು ಹೆಸರು ಎಲ್ಲರಿಗೆ ಗೊತ್ತಾಗಿದೆಯಷ್ಟೇ.

ರಾಧಿಕಾಗೆ ಮೊದಲಿನಿಂದಲೂ ಕರಾವಳಿಯ ಹಾಗೂ ತುಳು ಪತ್ರಕರ್ತರೊಂದಿಗೆ ಆತ್ಮೀಯತೆಯಿತ್ತು. 'ರೂಪತಾರಾ' ಪತ್ರಿಕೆಯಲ್ಲಿ ಪ್ರಕಟಗೊಂಡ ಫೋಟೋದಿಂದಲೇ ರಾಧಿಕಾಳಿಗೆ ಸಿನಿಮಾ ಅವಕಾಶ ಸಿಕ್ಕಿದ್ದರಿಂದ ಉದಯವಾಣಿ ಸಂಸ್ಥೆಯ ಮೇಲೆ ರಾಧಿಕಾಗೆ ಒಂಥರಾ ಭಕ್ತಿ, ವ್ಯಾಮೋಹ. ಇಲ್ಲಿಗೆ ಹತ್ತಿಪ್ಪತ್ತು ದಿನಗಳ ಹಿಂದೆ ಉದಯವಾಣಿಯ ವರದಿಗಾರ ರವಿಪ್ರಕಾಶ್ ರೈ ಎಂಬಾತನಿಗೆ ಫೋನ್ ಮಾಡಿದ ರಾಧಿಕಾ "ಇನ್ನೊಂದು ವಾರದೊಳಗೆ ನಿಮ್ಮ ಪತ್ರಿಕೆಗೆ ತುಂಬಾ ಸೆನ್ಸಿಟೀವ್ ಮ್ಯಾಟರ್ ಕೊಡ್ತೀನಿ" ಎಂದು ಹೇಳಿಕೊಂಡಿದ್ದಳು. ರವಿಪ್ರಕಾಶ "ರಾಧಿಕಾ ನಂಗೊಂದು ಸುದ್ದಿ ಕೊಡ್ತಿಕ್ಕುಂಟು ಮಾರಾಯ್ರೇ" ಅಂತಾ ಸುದ್ದಿ ಸಿಗುವ ಮುನ್ನವೇ ಊರಿಡಿ ಪ್ರಚಾರ ಮಾಡಿಬಿಟ್ಟಿದ್ದ. ಈ ವಿಚಾರ ಸುತ್ತಿ ಬಳಸಿ ರಾಧಿಕಾಳ ಕಿವಿಗೇ ತಲುಪಿತ್ತು. ಕಡೆಗೆ ತನ್ನ ಪರ್ಸನಲ್ ಮ್ಯಾನೇಜರ್ ಮೂಲಕ ಎಲ್ಲ ಪತ್ರಿಕೆಗಳನ್ನೂ ಏಕಕಾಲದಲ್ಲಿ ಸಂಪರ್ಕಿಸಿದ ರಾಧಿಕಾ ಎಲ್ಲರಿಗೂ ಸುದ್ದಿ ತಿಳಿಸಿ, ಅಣ್ಣ ರವಿರಾಜನ ಮೂಲಕ ತನ್ನ ಮತ್ತು ಮಗಳ ಫೋಟೋಗಳನ್ನು ರವಾನಿಸಿದಳು. ತಮಾಷೆಯೆಂದರೆ, ಸ್ವತಃ ರಾಧಿಕಾಳೇ "ನನ್ನ ಗಂಡ ಕುಮಾರ ಸ್ವಾಮಿ" ಎಂದು ಹೇಳಿಕೊಂಡರೂ ಕನ್ನಡಪ್ರಭ ಮತ್ತು ಉದಯವಾಣಿ ಪತ್ರಿಕೆಗಳು ನೇರವಾಗಿ ಕುಮಾರಸ್ವಾಮಿಯ ಹೆಸರನ್ನು ಪ್ರಸ್ತಾಪಿಸಲು ಹೆದರಿ ಹಿಂದೇಟು ಹಾಕಿದ್ದವು.



ಕುಮಾರಸಂಭವ!

ಕಳೆದ ಉಪಚುನಾವಣೆ ಸಂದರ್ಭದಲ್ಲಿ ತನ್ನ ಪತ್ನಿ ಅನಿತಾರನ್ನು ರಾಮನಗರ ವಿಧಾನಸಭಾ ಚುನಾವಣೆಗೆ ನಿಲ್ಲಿಸಿ, ಬೀದಿಬೀದಿಯಲ್ಲಿ ಮತಯಾಚಿಸಿದ ಕುಮಾರಸ್ವಾಮಿ ಆಕೆಯನ್ನು ಅಭೂತಪೂರ್ವವಾಗಿ ಗೆಲ್ಲಿಸಿದ್ದರು. ಆದಾದ ನಂತರ ಅನಿತಕ್ಕನನ್ನು ವಿಧಾನ ಸೌಧದ ಕಡೆ ಹೊರಡಿಸಿದ ಕುಮಾರಸ್ವಾಮಿ ರಾಧಿಕಾಳೊಂದಿಗೆ ಮಾಲ್ಡೀವ್ಸ್‌ಗೆ ಹಾರಿದ್ದರು. ಈ 'ಅಪರೂಪದ ಜೋಡಿ' ವಿಮಾನದಲ್ಲಿ ಪಕ್ಕ ಪಕ್ಕ ಕುಳಿತು ಜುಮ್ಮಚಕ್ಕ ಮಾಡುತ್ತಾ ಪ್ರಯಾಣ ಬೆಳೆಸಿದ್ದ ಬೋರ್ಡಿಂಗ್ ಪಾಸ್‌ಗಳನ್ನು ದೇವೇಗೌಡರ ಪರಮ ವಿರೋಧಿ ಕುಖ್ಯಾತ ನೈಸ್ ಸಂಸ್ಥೆಯ ಅಶೋಕ್ ಖೇಣಿ ಪತ್ರಿಕೆಗಳಿಗೆ ರವಾನಿಸಿ ಮಜ ಮಾಡಿದ್ದರು.


ಶಮಿಕಾ

ಒಟ್ಟು ನಾಲ್ಕೂವರೆ ವರ್ಷಗಳ ಕಾಲ ನಟಿಸುವುದನ್ನು ನಿಲ್ಲಿಸಿ ಅಜ್ಞಾತ ವಾಸಕ್ಕೆ ಸರಿದಿದ್ದ ರಾಧಿಕಾ ಇದ್ದಕ್ಕಿದ್ದಂತೆ ಕಾಣಿಸಿಕೊಂಡಿದ್ದು ಮೈಸೂರು ಲ್ಯಾಂಪ್ಸ್ ಕಾಂಪೌಂಡಿನಲ್ಲಿ ಶಂಕರ್ ಗೌಡ ನಿರ್ಮಿಸಿದ್ದ 'ಈಶ್ವರ್' ಚಿತ್ರದ ಚಿತ್ರೀಕರಣದಲ್ಲಿ. 'ಈಶ್ವರ್' ಸಿನಿಮಾದ ಚಿತ್ರೀಕರಣ ಅಂತಿಮ ಘಟ್ಟದಲ್ಲಿದ್ದಾಗ ರಾಧಿಕಾ ಬದುಕಲ್ಲಿ 'ಕುಮಾರಸಂಭವ'ವಾಗಿದ್ದೇ ತಡ ಆಕೆ ಉಳಿದ ಭಾಗದ ಚಿತ್ರೀಕರಣಕ್ಕೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದಳು. ಇದ್ದಕ್ಕಿದ್ದಂತೆ ತನ್ನ ಸಿನಿಮಾದ ಚಿತ್ರೀಕರಣ ನಿಂತುಹೋಗಿದ್ದರಿಂದ ಅದರ ನಿರ್ಮಾಪಕ ಶಂಕರೇಗೌಡ ಲಬಲಬೊ ಬಾಯಿ ಬಡಿದುಕೊಳ್ಳಲು ಶುರು ಮಾಡಿದ. ಛೇಂಬರ್ ಮುಂದೆ ರಾಧಿಕಾ ವಿರುದ್ಧ ಕಂಪ್ಲೇಂಟು ಕೊಡ್ತೀನಿ ಅಂತ ಊಳಿಡಲು ಆರಂಭಿಸಿದ. ಆದರೆ ಶಂಕರೇಗೌಡ ಎಷ್ಟೇ ಅತ್ತೂಕರೆದರೂ ರಾಧಿಕಾ ಚಿತ್ರೀಕರಣಕ್ಕೆ ಹೋಗುವ ಮಾತೇ ಇರಲಿಲ್ಲ. ಯಾಕೆಂದರೆ "ಇನ್ನು ಮುಂದೆ ಸಿನಿಮಾದಲ್ಲಿ ಕಾಣಿಸಿಕೊಳ್ಳಬಾರದು" ಎಂದು ಆಕೆಯ ಪತಿ ಆಜ್ಞೆ ಮಾಡಿಬಿಟ್ಟಿದ್ದರು. ಆದರೆ ಶಂಕರೇಗೌಡ ಛೇಂಬರ್ ಮೆಟ್ಟಿಲೇರಿದರೆ ಎಲ್ಲ 'ವಿಚಾರ' ಬಹಿರಂಗವಾಗಿಬಿಡುತ್ತದೆ ಎಂದು ಅರಿತ ರಾಧಿಕಾ ಶಂಕರೇ ಗೌಡನಿಗೆ 'ಈಶ್ವರ್' ಚಿತ್ರ ನಿರ್ಮಾಣಕ್ಕೆ ತಗುಲಿದ್ದ ಖರ್ಚಿಗೆ ಎರಡು ಪಟ್ಟು - ಅಂದರೆ ಮೂರೂವರೆ ಕೋಟಿ ರೂಪಾಯಿಗಳನ್ನು - ನೀಡಿ ತನ್ನ ಅಣ್ಣ ರವಿರಾಜನ ಹೆಸರಲ್ಲಿ ಸಿನಿಮಾವನ್ನು ಖರೀದಿಸಿ ಬಿಟ್ಟಳು.

ಈ ಚಿತ್ರದ ಒಂದು ಹಾಡಿನಲ್ಲಿ ರಾಧಿಕಾ ತುಂಬಾ ಎಕ್ಸ್‌ಪೋಸ್ ಮಾಡಿದ್ದಳು ಎಂಬ ಕಾರಣಕ್ಕೆ ಆ ಹಾಡನ್ನು ರೀ ಶೂಟ್ ಮಾಡುವಂತೆ ಕುಮಾರಸ್ವಾಮಿ ಹಠ ಹಿಡಿದಿದ್ದರು. ಹೀಗಾಗಿ ಆ ಹಾಡನ್ನು ಮತ್ತೆ ಚಿತ್ರೀಕರಿಸಲು ಮುಂದಾದಳು ರಾಧಿಕಾ. ಆಗಲೇ ಆಕೆ ಮತ್ತೆ ಮುಖಕ್ಕೆ ಬಣ್ಣ ಬಳಿದುಕೊಂಡು ಮೈಸೂರು ಲ್ಯಾಂಪ್ಸ್ ಕಾಂಪೌಂಡಿನಲ್ಲಿ ಕಂಡುಬಂದದ್ದು.

ಆದರೆ ಅವತ್ತಿನಿಂದ ಮಾಧ್ಯಮದವರು ರಾಧಿಕಾ ಬಳಿ ಆಕೆಯ ವೈಯಕ್ತಿಕ ವಿಚಾರವನ್ನೇ ಕೇಳುತ್ತಿದ್ದರು. ಆಕೆ ಮನೆಯಿಂದ ಹೊರಗೆ ಬಂದರೆ ಸಾಕು ಅವಳನ್ನು ಹಿಂಬಾಲಿಸಿ ಪ್ರಶ್ನಿಸಲು ಕೆಲವು ಟಿವಿ ಚಾನೆಲ್‌ಗಳು ಸದಾ ಕಾದಿರುತ್ತಿದ್ದವು. ಮಾಧ್ಯಮದವರ ಪ್ರಶ್ನೆಗಳು ಸದಾ ಕುಮಾರಸ್ವಾಮಿಯ ಸುತ್ತಲೇ ಕೇಂದ್ರೀಕೃತವಾಗಿದ್ದರಿಂದ ಅವುಗಳಿಗೆ ಉತ್ತರಿಸಲು ರಾಧಿಕಾಳಿಂದ ಸಾಧ್ಯವಾಗುತ್ತಿರಲಿಲ್ಲ. ಹಾಗೆಯೇ ಇನ್ನು ಮುಂಬರುವ ದಿನಗಳಲ್ಲಿ ಮಗಳು ಶಮಿಕಾಳನ್ನು ಪ್ಲೇಹೋಮ್, ಸ್ಕೂಲ್ ಎಂದೆಲ್ಲ ಸೇರಿಸಬೇಕಲ್ಲ ಆಗ ಅಪ್ಪನ ಹೆಸರನ್ನು ನೋಂದಾಯಿಸಲೇಬೇಕು.

ಇದೆಲ್ಲದರಿಂದ ಇನ್ನೆಷ್ಟು ದಿನ ಈ ವಿಚಾರವನ್ನು ಗುಟ್ಟಾಗಿ ಇಡಲು ಸಾಧ್ಯ? ಇದನ್ನು ತಾನೇ ಬಹಿರಂಗಪಡಿಸಿದರೆ ಮಾಧ್ಯಮದವರ ಪ್ರಶ್ನೆಗಳಿಂದ ಮುಜುಗರವೂ ತಪ್ಪುತ್ತದೆ. ಸಾಮಾಜಿಕ ಸ್ಥಾನಮಾನವೂ ಸಿಗುತ್ತದೆ. ಹಾಗೆಯೇ ಮುಂದೊಂದು ದಿನ ವಿರೋಧ ಪಕ್ಷಗಳು ಇದನ್ನು ಪ್ರಸ್ತಾಪಿಸಿ ದೊಡ್ಡ ಸುದ್ದಿಯಾಗಿಸುವ ಬದಲು ತಾನೇ ಅದನ್ನು ಬಹಿರಂಗಪಡಿಸಿದರೆ ಅಂತಹ ಒಂದು ಅಪಾಯವೂ ತಪ್ಪುತ್ತದೆ. ಈ ಎಲ್ಲ ಉದ್ದೇಶಗಳಿಂದಲೇ ರಾಧಿಕಾ ಪತಿ ಕುಮಾರಸ್ವಾಮಿಯ ಅನುಮತಿಯ ಮೇರೆಗೆ ತಾನೇ ಎಲ್ಲವನ್ನೂ ಹೊರಹಾಕಿದ್ದಾಳೆ.


ಕುಮಾರಸ್ವಾಮಿ ಮತ್ತು ರಾಧಿಕಾ 'ಮದುವೆ' ಕಾನೂನಿನ ಪ್ರಕಾರ ಅಕ್ರಮವಾಗಿದ್ದರೂ ಸಮಾಜದ ಕಣ್ಣಿನಲ್ಲಿ ಅದನ್ನು ಸಕ್ರಮವಾಗಿಸಲು ರಾಧಿಕ ಯತ್ನಿಸಿದ್ದಾಳೆ. ರಾಜಕಾರಣಿಗಳು ಮತ್ತು ಚಿತ್ರರಂಗದವರ ಮಟ್ಟಿಗೆ ಇಂತಹ 'ಮದುವೆ' ಹೊಸದೂ ಅಲ್ಲ, ಕೊನೆಯದೂ ಅಲ್ಲ. ಆದರೆ ಅಕ್ರಮ ಸಂಬಂಧಕ್ಕೆ ತನ್ನ ಕೈಹಿಡಿದ ಪತ್ನಿಯನ್ನೇ ಸಾವಿನ ತೊಟ್ಟಿಗೆ ದೂಡುವ, ತನ್ನ ಮುದಿ ಪ್ರಿಯಕರರನ್ನು 'ತಂದೆಗೆ ಸಮಾನ' ಎಂಬಂತಹ ಅಸಹ್ಯ ಹುಟ್ಟಿಸುವ ವಿವರಣೆಗಳನ್ನು ನೀಡುವ ಜನರೂ ಈಗ ನಮ್ಮ ಸುತ್ತ ಇರುವುದರಿಂದ ರಾಧಿಕಾ ಮತ್ತು ಕುಮಾರಸ್ವಾಮಿ ಭಿನ್ನವಾಗಿ ಕಾಣಿಸುತ್ತಿದ್ದಾರೆ.

ಈಗಾಗಲೇ ತನ್ನ ಜೀವನದಲ್ಲಿ ಬಹಳಷ್ಟು ಏರಿಳಿತಗಳನ್ನು ಎದುರಿಸಿರುವ ರಾಧಿಕಾ ಮತ್ತು ಆಕೆಯ ಮುದ್ದು ಮಗಳು ಶಮಿಕಾಳ ಬದುಕು ಇನ್ನಾದರೂ ಸುಖಕರವಾಗಿರಲಿ ಎಂದಷ್ಟೇ ಎಲ್ಲರ ಹಾರೈಕೆ...

• ಅರುಣೋದಯ

1.76 ಲಕ್ಷ ಕೋಟಿ 2 ಜಿ ಸ್ಪೆಕ್ಟ್ರಂ ಹಗರಣ

ನೀರಾ ಮಾಡಿದ ರಾಡಿ



"ಭಾರತವೆಂಬ ಪ್ರಜಾಪ್ರಭುತ್ವ ಮಾರಾಟಕ್ಕಿದೆ. ಇದನ್ನು ಕೊಳ್ಳುವ ಹರಾಜಿನಲ್ಲಿ ಭಾಗವಹಿಸುತ್ತಿರುವ ಗುಂಪಿನಲ್ಲಿ ಹಲವು ಪ್ರಭಾವಶಾಲಿ ವ್ಯಕ್ತಿಗಳು, ಕಾರ್ಪೊರೇಟ್ ಕಂಪನಿಗಳು, ಉದ್ಯಮಿಗಳ ಪರವಾಗಿ ಲಾಬಿ ಮಾಡುವ ವಶೀಲಿಗಾರರು, ಅಧಿಕಾರಿಗಳು ಮತ್ತು ಪ್ರಮುಖ ಪತ್ರಕರ್ತರೂ ಇದ್ದಾರೆ....." ಹೀಗೆ ಘೋಷಿಸಿದೆ 'ಔಟ್‌ಲುಕ್' ಎಂಬ ಪ್ರಮುಖ ಇಂಗ್ಲಿಷ್ ವಾರಪತ್ರಿಕೆ ತನ್ನ ಇತ್ತೀಚಿನ ಸಂಚಿಕೆಯಲ್ಲಿ.

ಏಕೆಂದರೆ ಇವತ್ತು ಹರಾಜಿಗೆ ಇಡಲಾಗಿರುವ ಭಾರತದಲ್ಲಿ ಈ ದೇಶದ ನೈಸರ್ಗಿಕ ಸಂಪತ್ತು ಮಾತ್ರವಲ್ಲ, ಇಲ್ಲಿನ ಕೇಂದ್ರ ಮಂತ್ರಿಗಳ ಸ್ಥಾನಗಳೂ ಮಾರಾಟವಾಗುತ್ತಿವೆ. ಸಹಜವಾಗಿಯೇ ಹೀಗೆ ಮಾರಾಟವಾದ ಸಚಿವ ಸ್ಥಾನಗಳಿಗೆ ಬರುವವರಿಗೂ, ಅವರನ್ನು ಆ ಸ್ಥಾನಗಳಲ್ಲಿ ಕೂರಿಸುವವರಿಗೂ-ಇಬ್ಬರೂ ಕೋಟ್ಯಂತರ ರೂಪಾಯಿಗಳ ಲಾಭವಿದೆ. ಅದಕ್ಕೆ ಇತ್ತೀಚಿನ ಉದಾಹರಣೆ 2 ಜಿ ಸ್ಪೆಕ್ಟ್ರಮ್ ಹಗರಣ.

ಇತ್ತೀಚಿನ ತನಕ ಕೇಂದ್ರದಲ್ಲಿ ಮಂತ್ರಿಯಾಗಿದ್ದ ಡಿಎಂಕೆ ಪಕ್ಷದ ಎ. ರಾಜಾ ನಿಯಮಗಳ ಪ್ರಕಾರ 2ಜಿ ಸ್ಪೆಕ್ಟ್ರಮ್ ತರಂಗಾಂತರಗಳನ್ನು ಮಾರಾಟ ಮಾಡಿದ್ದರೆ ನಮ್ಮ ದೇಶದ ಖಜಾನೆಗೆ 1.76 ಲಕ್ಷ ಕೋಟಿ ರೂಪಾಯಿಗಳು ಬರುತ್ತಿತ್ತು. ಆದರೆ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ 2ಜಿ ಸ್ಪೆಕ್ಟ್ರಮ್ ತರಂಗಾಂತರಗಳನ್ನು ಬೇಕಾಬಿಟ್ಟಿಯಾಗಿ ರಾಜಾ ಹಂಚಿದ್ದರಿಂದ ಆತನ ಜೇಬು ಮತ್ತು ಕಡಿಮೆ ದರದಲ್ಲಿ 2ಜಿ ಸ್ಪೆಕ್ಟ್ರಮ್‌ಗಳನ್ನು ಪಡೆದ ಕಂಪನಿಗಳ ಜೇಬು ತುಂಬಿದವೆಯೇ ಹೊರತು ದೇಶಕ್ಕೆ ಆದ ನಷ್ಟ ಅಪಾರವಾದದ್ದು.



ಮುಖೇಶ್

1.76 ಲಕ್ಷ ಕೋಟಿ ರೂಪಾಯಿಗಳೆಂದರೆ ಅದರಲ್ಲಿ ಎಷ್ಟು ಸೊನ್ನೆಗಳಿರಬಹುದು ಎಂದು ಲೆಕ್ಕ ಹಾಕಿ. ನಮ್ಮ ಕಲ್ಪನೆಗೆ ನಿಲುಕದಂತಹ ಮೊತ್ತ ಅದು! ಈ ಕಾರಣಕ್ಕೇ 2ಜಿ ಸ್ಪೆಕ್ಟ್ರಮ್ ಹಗರಣವನ್ನು ಈ ಹಿಂದಿನ ಎಲ್ಲಾ ಹಗರಣಗಳನ್ನು ಮೀರಿಸುವ, ಈ ದೇಶ ತನ್ನ ಇತಿಹಾಸದಲ್ಲೇ ಕಂಡುಕೇಳರಿಯದಿದ್ದಷ್ಟು ದೊಡ್ಡ ಹಗರಣ ಎಂದೇ ಬಣ್ಣಿಸಲಾಗುತ್ತಿದೆ.

ಅಂದಹಾಗೆ, ಈ ಹಗರಣದ ರೂವಾರಿ ಮಾಜಿ ಮಂತ್ರಿ ರಾಜಾ ಮಾತ್ರವಲ್ಲ, ಆತಗಿಂತ ಮುಖ್ಯವಾಗಿ ಆತನನ್ನು ಟೆಲಿಕಾಂ ಮಂತ್ರಿ ಸ್ಥಾನದಲ್ಲಿ ಕೂರಿಸಿದ ನೀರಾ ರಾಡಿಯಾ ಎಂಬ ವಶೀಲಿಗಾರಳ ಪಾತ್ರವೂ ಇದೆ. ಹಾಗೆಯೇ ಈ ನೀರಾ ರಾಡಿಯಾಳ ಹಿಂದೆ ಮುಖೇಶ್ ಅಂಬಾನಿ ಮತ್ತು ರತನ್ ಟಾಟಾ ತರಹದ ದೈತ್ಯೋದ್ಯಮಿಗಳ ಕೈವಾಡವೂ ಇದೆ. ಜೊತೆಗೆ ರಾಡಿಯಾ, ಅಂಬಾನಿ ಮತ್ತು ಟಾಟಾಗಳ ಉದ್ದೇಶ ಈಡೇರಲು ತಮ್ಮ ಅಳಿಲುಸೇವೆಯನ್ನು ಸಲ್ಲಿಸಿದ ಪತ್ರಕರ್ತರ ಪಾತ್ರವೂ ಇದೆ.

ಭಾರತ ಕಂಡ ಅತಿದೊಡ್ಡ ಹಗರಣದಲ್ಲಿ ಪ್ರಮುಖ ಪಾತ್ರ ವಹಿಸಿರುವ ನೀರಾ ರಾಡಿಯಾ ಎಂಬ ಮಹಿಳೆಯ ಬಗ್ಗೆ ಹಲವು ವರ್ಷಗಳ ಹಿಂದೆಯೇ ಲಂಕೇಶ್ ವರದಿ ಮಾಡಿತ್ತು. ಅಂದಹಾಗೆ ಆಕೆಯ ಅವ್ಯವಹಾರಗಳನ್ನು ದೇಶದ ಇತರೆ ಪತ್ರಿಕೆಗಳಿಗಿಂತ ಮುನ್ನವೇ ಮಾರ್ಚ್ 2008ರಲ್ಲೇ ತೆರೆದಿಟ್ಟಿದ್ದು ನಿಮ್ಮ ಈ ಪತ್ರಿಕೆ.

ಅದು 1999. ಆಗ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿತ್ತು ಮತ್ತು ಕರ್ನಾಟಕದ ಹೆಮ್ಮೆಯ ಚೆಡ್ಡಿ ಕುವರ ಅನಂತಕುಮಾರ್ ಕೇಂದ್ರದಲ್ಲಿ ವಿಮಾನಯಾನ ಸಚಿವರಾಗಿದ್ದರು. ಇಂಗ್ಲೆಂಡ್ ಪ್ರಜೆ ಮತ್ತು ಭಾರತದ ಸಂಜಾತೆಯಾದ ನೀರಾ ರಾಡಿಯಾ ಸಿಂಗಪೂರ್ ಏರ್‌ಲೈನ್ಸ್‌ನಲ್ಲಿ ಹಲವು ವರ್ಷ ಕೆಲಸ ಮಾಡಿದ ಅನುಭವ ಪಡೆದಿದ್ದಳು. ಆಗ ವಿಮಾನಯಾನ ವಲಯದಲ್ಲೂ ಖಾಸಗೀಕರಣ ಪ್ರಕ್ರಿಯೆ ಪ್ರಾರಂಭವಾಗಿದ್ದರಿಂದ ಅನಂತ್‌ಕುಮಾರ್ ಅವರ ಸಂಪರ್ಕ ಮತ್ತು ಸ್ನೇಹ ಗಳಿಸಿದ ನೀರಾ ತನಗೂ 'ಮ್ಯಾಜಿಕ್ ಏರ್' ಎಂಬ ಖಾಸಗಿ ಏರ್‌ಲೈನ್ಸ್ ಪ್ರಾರಂಭಿಸುವುದಕ್ಕೆ ಅನುಮತಿ ನೀಡಬೇಕೆಂದು ಅರ್ಜಿ ಗುಜರಾಯಿಸಿದ್ದಳು.

ಅನಂತ್‌ಕುಮಾರ್‌ನೊಂದಿಗಿನ ಸ್ನೇಹದಿಂದಾಗಿ ನೀರಾ ಕೆಲಕಾಲ ಚೆಡ್ಡಿ ವಲಯಗಳಲ್ಲೂ ಹರಿದಾಡಿದ್ದಳು. ಆಕೆ ಎಷ್ಟೇ ದೊಂಬರಾಟ ನಡೆಸಿದರೂ ಆಕೆಯ ಖಾಸಗಿ ಏರ್‌ಲೈನ್ ಯೋಜನೆ ನೆಲಕಚ್ಚಿತು. ಈ ಮಧ್ಯೆ ಅನಂತ್‌ಕುಮಾರ್ ಕೈಯಿಂದ ವಿಮಾನಯಾನ ಖಾತೆ ತಪ್ಪಿ ಹೋಗಿ ಅವರು ನಗರಾಭಿವೃದ್ಧಿ ಇಲಾಖೆಗೆ ವರ್ಗಾವಣೆಯಾದರು. ಆಗ ನಡೆದ ಹುಡ್ಕೋ ಹಗರಣ ಇವತ್ತಿಗೂ ಸುಪ್ರೀಂಕೋರ್ಟ್ ಮುಂದೆ ವಿಚಾರಣೆಯನ್ನು ಎದುರಿಸುತ್ತಿದೆ.

2003ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಹೋಯ್ತು, ಕಾಂಗ್ರೆಸ್ ನೇತೃತ್ವದ ಯುಪಿಎ ಬಂತು. ಇತ್ತ ಅನಂತ್‌ಕುಮಾರ್ ಆರೆಸ್ಸೆಸ್‌ನ ಬೈಠಕ್‌ಗಳಿಗೆ ಮತ್ತು ಸೋತು ಸುಣ್ಣವಾಗಿದ್ದ ಬಿಜೆಪಿ ಪಕ್ಷದ ಮೀಟಿಂಗ್‌ಗಳಿಗೆ ಸೀಮಿತವಾದರೆ ಅತ್ತ ನೀರಾ ತನ್ನ ಎಲ್ಲ ರೆಕ್ಕೆಗಳನ್ನು ಬಿಚ್ಚಿ ಹಾರಲಾರಂಭಿಸಿದಳು. ಆಕೆಯ ಕನಸಿನ 'ಮ್ಯಾಜಿಕ್ ಏರ್' ಯೋಜನೆ ಭಗ್ನವಾಗಿದ್ದರೂ ಮುಖೇಶ್ ಅಂಬಾನಿ ಮತ್ತು ರತನ್ ಟಾಟಾ ತರಹದ ದೈತ್ಯ ಉದ್ಯಮಿಗಳ ಮೇಲೆ 'ಮ್ಯಾಜಿಕ್' ಮಾಡುವಲ್ಲಿ ಯಶಸ್ವಿಯಾಗಿದ್ದಳು. ಎಷ್ಟರಮಟ್ಟಿಗೆ ಅಂದರೆ ಟಾಟಾ ಸಂಸ್ಥೆ ತನ್ನ ಪಿಆರ್‌ಓ ಇಲಾಖೆಯನ್ನೇ ಬಂದ್ ಮಾಡಿ ತನ್ನ ಎಲ್ಲಾ ಕಂಪನಿಗಳ ಪ್ರಚಾರ ಜವಾಬ್ದಾರಿಯನ್ನು ನೀರಾ ರಾಡಿಯಾಳ ವೈಷ್ಣವಿ ಕಾರ್ಪೊರೇಟ್ ಕಮ್ಯುನಿಕೇಷನ್ಸ್ ಪ್ರೈ ಲಿ., ಎಂಬ ಕಂಪನಿಗೇ ನೀಡಿತು. 2008ರಲ್ಲಿ ಮುಖೇಶ್ ಅಂಬಾನಿ ಕೂಡ ತನ್ನ ಎಲ್ಲಾ ಕಂಪನಿಗಳ ಪ್ರಚಾರ ಜವಾಬ್ದಾರಿಯನ್ನು ನೀರಾಳ ಸಂಸ್ಥೆಗೆ



ನೀರಾ-ರಾಡಿಯಾ

ವಹಿಸಿದ. ಜೊತೆಗೆ ಯುನಿಟೆಕ್, ಸ್ಟಾರ್ ಚಾನೆಲ್, ಇಂಗ್ಲೆಂಡ್ ಮೂಲದ ಗಣಿ ಕಂಪನಿ ವೇದಾಂತ ಮತ್ತು ಎಚ್‌ಸಿಎಲ್ ಎಂಬ ಐಟಿ ಕಂಪನಿಗಳೂ ನೀರಾಳ ಕೈ ಸೇರಿದವು. ನೀರಾ ರಾಡಿಯಾ ಭಾರತದ ದೈತ್ಯ ಕಂಪನಿಗಳ ವಶೀಲಿಕಾರಳಾಗಿ ಕಾರ್ಪೊರೇಟ್ ವಲಯದಲ್ಲಿ ಉತ್ತುಂಗ ತಲುಪಿದಳು.

ನೀರಾ ದೆಹಲಿಯಲ್ಲಿರುವ ಎಲ್ಲಾ ಪ್ರಮುಖ ಮಾಧ್ಯಮಗಳ ಮಾಲೀಕರು ಮತ್ತು ಪತ್ರಕರ್ತರ ಸ್ನೇಹ ಗಳಿಸಿದಳು, ಅವರನ್ನೆಲ್ಲ ತಾನು ಪ್ರತಿನಿಧಿಸುವ ಕಂಪನಿಗಳ ಪರವಾಗಿ ಹೇಗೆ ಬಗ್ಗಿಸಬಹುದು ಎಂಬ ಕಲೆಯನ್ನು ಕರಗತ ಮಾಡಿಕೊಂಡಳು. ಟಾಟಾ-ಅಂಬಾನಿ ತರಹದ ಪ್ರಮುಖರೇ ಆಕೆಯ ಬೆನ್ನಿಗಿದ್ದರಿಂದ ಎಲ್ಲಾ ಪಕ್ಷಗಳ ರಾಜಕಾರಣಿಗಳೊಂದಿಗೂ ಸಂಪರ್ಕ ಸಾಧಿಸಿದಳು. ಪಶ್ಚಿಮ ಬಂಗಾಳದ ಸಿಪಿಎಂ ಪಕ್ಷದ ಹಿರಿಯರ ವಿಶ್ವಾಸವನ್ನೂ ಗಳಿಸಿದ ನೀರಾ ಅಲ್ಲಿನ ಸಿಂಗೂರ್‌ನಲ್ಲಿ ಟಾಟಾ ಕಂಪನಿ ಸ್ಥಾಪಿಸಲು ಉದ್ದೇಶಿಸಿದ್ದ ನ್ಯಾನೋ ಕಾರ್ ಫ್ಯಾಕ್ಟರಿ ಪರವಾಗಿ ತೆರೆಮರೆಯಿಂದಲೇ ತೃಣಮೂಲ್ ಪಕ್ಷದ ನಾಯಕಿ ಮಮತಾ ಬ್ಯಾನರ್ಜಿ ವಿರುದ್ಧ ಸಮರ ಸಾರಿದಳು. ಜನರ ತೀವ್ರ ವಿರೋಧದಿಂದ ಸಿಂಗೂರ್ ಕಾರ್ಖಾನೆ ಸಾಧ್ಯವಾಗದ
ಗುಜರಾತಿನ ಮುಖ್ಯಮಂತ್ರಿ ನರಹಂತಕ ನರೇಂದ್ರ ಮೋ
ತೆಕ್ಕೆಗೆ ರತನ್ ಟಾಟಾನನ್ನೇ ಕೆಡುವುವಲ್ಲಿ ಯಶಸ್ವಿಯಾ
ಅಷ್ಟೇ ಅಲ್ಲ, ಟಾಟಾನೊಂದಿಗೆ ಮುಖೇಶ್ ಅಂ
ಕೂಡ ಮೋದಿ ಈ ದೇಶದ ಪ್ರಧಾನಿ ಆಗಲು
ವ್ಯಕ್ತಿ ಎಂದು ಕೊಂಡಾಡುವಂತೆ ನೋಡಿಕೊಂಡಳು. ಎ
ಎಡಪಂಥೀಯ ಸಿಪಿಎಂ? ಎಲ್ಲಿಯ ಬಲಪಂಥಿ
ನರೇಂದ್ರ ಮೋದಿ? ಆದರೆ ಇವರೆಲ್ಲರ ಮೇಲೆ
'ಮೋಡಿ' ಮಾಡಿದ್ದಾಳೆಂದರೆ ಆಕೆಯ 'ಮ್ಯಾಜಿಕ್'
ಎಂತಹದ್ದು ಎಂದು ಊಹಿಸಿ!

ಹಲವಾರು ವರ್ಷಗಳಿಂದ ತೆರೆಮರೆಯಲ್ಲೇ
ಈ ದೇಶವನ್ನು ಲೂಟಿ ಮಾಡುತ್ತಿರುವ ದೊಡ್ಡ ಕಂಪ
ಹಿತಾಸಕ್ತಿಯನ್ನು ಕಾಪಾಡುತ್ತಿದ್ದ ನೀರಾ ರಾಡಿಯಾ
ವಶೀಲಿಕೋರಳನ್ನು ಈಗ 'ರಾಡಿಯಾ ಟೇಪ್ಸ್'
ವೃತ್ತಾಂತ ತೆರೆಯ ಮೇಲೆ ತಂದು ನಿಲ್ಲಿಸಿದೆ. ಆದರೆ
'ರಾಡಿಯಾ ಟೇಪ್ಸ್' ನಲ್ಲಿ ಭಾರತದ ಪ್ರಮುಖ
ಮತ್ತು ಸುದ್ದಿ ಚಾನೆಲ್‌ಗಳ ಹಲವರೂ
ವಹಿಸಿರುವುದರಿಂದ 2ಜಿ ಸ್ಪೆಕ್ಟ್ರಮ್ ಹಗರಣದಲ್ಲಿ
ರಾಡಿಯಾ, ಅಂಬಾನಿ ಮತ್ತು ಟಾಟಾಗಳ ಪಾತ್ರದ
ಬಹುತೇಕ ಮಾಧ್ಯಮಗಳು ಚಕಾರವೆತ್ತಿಲ್ಲ. ಆದರೆ 'ಓ
ಮತ್ತು 'ಔಟ್‌ಲುಕ್' ಪತ್ರಿಕೆಗಳು ಮಾತ್ರ ಅ
ಯಾವುದೇ ಹಿಂಜರಿಕೆ ತೋರದೆ 'ರಾಡಿಯಾ ಟೇಪ್
ಬಗ್ಗೆ ವರದಿ ಮಾಡಿವೆ.

2ಜಿ ಸ್ಪೆಕ್ಟ್ರಮ್ ಹಗರಣದಲ್ಲಿ ನೀರಾ ರಾಡಿ
ಪಾತ್ರವಿದೆ ಎಂಬ ಶಂಕೆಯ ಮೇಲೆ ಇನ್‌ಕಮ್ ಟ
ಇಲಾಖೆ ನೀರಾಳ ಟೆಲಿಫೋನ್‌ಗಳನ್ನು 2008-0
ಸುಮಾರು 300 ದಿನಗಳ ಕಾಲ ಟ್ಯಾಪ್ ಮಾಡಿತು
ಅವಧಿಯಲ್ಲಿ ವಿವಿಧ ಜನರೊಂದಿಗೆ ನೀರಾ ನ
ಫೋನ್ ಸಂಭಾಷಣೆಗಳ ಪ್ರತಿಯನ್ನು ಪಡೆದ ಜನಹಿತಾಸ
ಪರವಾಗಿ ಹೋರಾಡುತ್ತಿರುವ ಹಿರಿಯ ವಕೀಲ ಪ್ರಶಾ
ಭೂಷಣ್ ಅವುಗಳನ್ನು ಕಳೆದ ವಾರ ಸುಪ್ರೀಂಕೋ
ಮುಂದೆ ಹಾಜರುಪಡಿಸಿ 2ಜಿ ಸ್ಪೆಕ್ಟ್ರಮ್ ಹಗರ
ವಿಚಾರಣೆಯ ಮೇಲೆ ನ್ಯಾಯಾಲಯವೇ
ವಹಿಸಬೇಕೆಂದು ಕೋರಿದರು.

ನೀರಾ ರಾಡಿಯಾಳ ಫೋನ್‌ಗಳನ್ನು ಟ್ಯಾಪ್ ಮಾ
ಅವಧಿಯಲ್ಲಿ ಎರಡು ಪ್ರಮುಖ ಘಟನೆಗಳು ಸಂಭವಿಸಿ
ಒಂದು: ನೈಸರ್ಗಿಕ ಅನಿಲ ಹಂಚಿಕೆ ಕುರಿತಂತೆ ಅಂ
ಸಹೋದರರ ನಡುವೆ ನಡೆಯುತ್ತಿದ್ದ ಜಗಳ. ಎ
ಯುಪಿಎ-2 ಸರ್ಕಾರಕ್ಕೆ ತನ್ನ ಬೆಂಬಲ ಬೇಕಿದ್ದರೆ
ಪಕ್ಷಕ್ಕೆ ಎಷ್ಟು ಮಂತ್ರಿಗಿರಿಗಳನ್ನು ಮತ್ತು ಯಾವ ಖಾತೆ
ಕೊಡುತ್ತೀರಿ ಎಂದು ಡಿಎಂಕೆ ಪಕ್ಷ ಕಾಂಗ್ರೆಸ್‌ನೊ
ಚೌಕಾಸಿ ನಡೆಸುತ್ತಿದ್ದ ಕಾಲ. ಆಗ ಯಾರು ಯಾ
ನೀರಾ ರಾಡಿಯಾ ಹೇಗೆ ಬಳಸಿಕೊಂಡಳೆಂಬುದನ್ನು
ಗಳಲ್ಲಿ ನೀಡಲಾಗಿದೆ.

179 ಲಕ್ಷ ಕೋಟಿ ರೂಪಾಯಿಗಳ 2ಜಿ ಸ್ಪೆ
ಹಗರಣವಲ್ಲದೆ ಈ ನೀರಾ ರಾಡಿಯಾ ಇತರೆ ಹಗರಣಗ
ಕಾರಣವಾಗಿದ್ದಾಳೆ ಎಂದು ನಂಬಲಾಗಿದೆ. ಅವು
ಪ್ರಮುಖವಾದದ್ದು ಜಾರ್ಖಂಡ್‌ನ ಕಳಂಕಿತ ಮಾ
ಮುಖ್ಯಮಂತ್ರಿ ಮಧು ಕೋಡಾ ಟಾಟಾ ಕಂ
ಗಣಿಗಾರಿಕೆ ಲೈಸೆನ್ಸ್ ಅನ್ನು ವಿಸ್ತರಿಸಿದ್ದಕ್ಕೆ ಈಕೆ ಕೋಡ
ಬರೋಬ್ಬರಿ 180 ಕೋಟಿ ರೂಪಾಯಿಗಳ
ಕೊಟ್ಟಿದ್ದಾಳೆ ಎಂಬುದೂ ಒಂದು.

ಜೊತೆಗೆ ಟಾಟಾ ಮತ್ತು ಅಂಬಾನಿಗೆ ವಿರುದ್ಧ
ನಿಲುವನ್ನು ತಾಳಿದ್ದ ದಯಾನಿಧಿ ಮಾರನ್‌ಗೆ ಟೆಲಿಕ
ಸಚಿವಾಲಯ ಸಿಗದೇ ನೀರಾಳ ಕೈಗೊಂಬೆಯಂತೆ ವ
ತ್ತಿದ್ದ ರಾಜಾನೇ ಆ ಇಲಾಖೆ ಪಡೆಯುವಂ
ನೋಡಿಕೊಂಡಿದ್ದೂ ಸೇರಿದೆ.

ಭಾರತ ಅತಿದೊಡ್ಡ ಪ್ರಜಾಪ್ರಭುತ್ವ, ಇಲ್ಲಿನ
ತಮ್ಮ ಮತ ಚಲಾಯಿಸುವ ಮೂಲಕ ದೆ
ರಾಜಕಾರಣಿಗಳ ಮೇಲೆ ಹಿಡಿತ ಹೊಂದಿದ್ದಾರೆ
ಭ್ರಮೆಯನ್ನು ಭಾರತೀಯರಲ್ಲಿ ಮತ್ತು ಇತರೆ ದೇಶ
ಬಿತ್ತಲಾಗಿದೆ. ಆದರೆ ವಾಸ್ತವವಾಗಿ ದೇಶದ ಮೇಲೆ
ಹೊಂದಿರುವವರು ಈ ದೇಶದ ಪ್ರಜೆಗಳಲ್ಲ, ಬದ
ಟಾಟಾ ಮತ್ತು ಅಂಬಾನಿ ತರಹದ ಪ್ರಭಾವಿ ಉದ್ಯಮಿ
ಅವರ ವಶೀಲಿಗಾರರಾದ ನೀರಾ ರಾಡಿಯಾ ತರಹದ
ಮತ್ತು ಇಂಥವರ ತಾಳಕ್ಕೆ ಕುಣಿಯುವ ರಾಜಕ
ಮತ್ತು ಮಾಧ್ಯಮದವರು ಎಂಬುದನ್ನು ನೀರಾ ರಾ
ಸೃಷ್ಟಿಸಿರುವ ಪ್ರಸ್ತುತ ರಾಡಿಯಿಂದ ಮತ್ತೆ
ಸಾಬೀತಾಗಿದೆ.

● ಸಾವ

ರಾಜಾನ ಕಪ್ಪು ಮುಖವೂ ಕೆಂಪೇರುತ್ತೆ!

ರತನ್ ಟಾಟಾ ಮತ್ತು ನೀರಾ ರಾಡಿಯಾ ನಡುವಿನ ಈ ಸಂಭಾಷಣೆ ಈ ದೇಶದ ಲಕ್ಷಾಂತರ ಜನರ ಬದುಕು ಮತ್ತು ಜೀವನದಿಂದ ಎಷ್ಟು ದೂರವಾಗಿದೆ ಎಂಬುದನ್ನು ತೋರುತ್ತದೆ.

ನೀರಾ: ಈಗ ಎಲ್ಲಿದ್ದೀರಿ?

ಟಾಟಾ: ಟೆಲ್ ಅವೀವ್ ಏರ್‌ಪೋರ್ಟ್‌ನಲ್ಲಿ ಪ್ಲೇನ್‌ನಲ್ಲಿ.


ನೀರಾ: ಏನಾಯಿತು?

ಟಾಟಾ: ಯಾವುದೋ ಕಾರಣಕ್ಕೆ ನಮ್ಮ ಪ್ಲೇನ್ ಅನ್ನು ಎರಡು ಗಂಟೆಗಳ ಕಾಲ ತಡೆಹಿಡಿದಿದ್ದಾರೆ.

ನೀರಾ: ಇಂತಹ ಸಮಸ್ಯೆಗಳಿಂದಾಗಿಯೇ ನೀವು ನಿಮ್ಮದೇ ಆದ ವಿಮಾನದಲ್ಲಿ ಹಾರಾಡಬೇಕು ಎಂದು ನಾನು ಹೇಳುವುದು. ನಾಳಿನ ಕಾರ್ಯಕ್ರಮ ಏನು?

ಟಾಟಾ: ಲಂಡನ್‌ನಲ್ಲಿ ಒಂದು ಬ್ಲ್ಯಾಕ್ ಟೈ ಕಾರ್ಯಕ್ರಮ. ಅಂಥ ಕಾರ್ಯಕ್ರಮಗಳು ನನಗೆ ಇಷ್ಟ ಇಲ್ಲ ಎಂದು ನಿನಗೆ ಗೊತ್ತು.

ನೀರಾ: ರತನ್, ನನ್ನನ್ನು ಕರೆದಿದ್ದರೆ ನಾನು ಬರುತ್ತಿದ್ದೆ. ನನ್ನ ಬಳಿ ರಾಬರ್ಟ್ ಕ್ಯಾವಲಿ (ಖ್ಯಾತ ವಸ್ತ್ರ ವಿನ್ಯಾಸಕರು) ಸೃಷ್ಟಿಸಿರುವ ಕಪ್ಪು ಅಂಗಿಯೊಂದಿದೆ. ಈ ದೆಹಲಿಯಲ್ಲಿ ಅದನ್ನು ತೊಡುವ ಅವಕಾಶವೇ ನನಗೆ ಸಿಗುತ್ತಿಲ್ಲ.



ರತನ್

ಟಾಟಾ: ಪರವಾಗಿಲ್ಲ ಬಿಡು, ನೀನು ಅದನ್ನು ಧರಿಸುವುದಕ್ಕೆಂದೇ ಒಂದು ಕಾರ್ಯಕ್ರಮವನ್ನೇ ಆಯೋಜಿಸೋಣ! ನಿನ್ನ ಈ ಅಂಗಿ ಎಲ್ಲಿದೆ? ಲಂಡನ್ನಿನಲ್ಲೋ? ಮುಂಬೈಯಲ್ಲೋ?

ನೀರಾ: ದೆಹಲಿಯಲ್ಲಿ

ಟಾಟಾ: ಪರವಾಗಿಲ್ಲ ಬಿಡು. ನೀನು ಬಯಸಿದರೆ ಹಿಲರಿ ಕ್ಲಿಂಟನ್ ಮತ್ತು ಅಂಥ ಇನ್ನಾರನ್ನೋ ಭೇಟಿ ಆದಾಗ ಅದನ್ನು ತೊಡಬಹುದು!

*****

ಈ ಸಂಭಾಷಣೆಯಲ್ಲಿ ಮಾಜಿ ಮಂತ್ರಿ ರಾಜಾನ ಬಗ್ಗೆ ನೀರಾ ರಾಡಿಯಾ ಮತ್ತು ರತನ್ ಟಾಟಾ ತಮಾಷೆ ಮಾಡಿ ನಗಾಡುತ್ತಾರೆ.

ನೀರಾ ರಾಡಿಯಾ: ಮಾಧ್ಯಮದವರನ್ನು ನಿಭಾಯಿಸಲು ರಾಜಾ ನನ್ನ ನೆರವು ಕೋರಿದ. ಅರೆ ರತನ್, ನಾನು ಎಷ್ಟೇ ಪ್ರಯತ್ನ ಪಟ್ಟರೂ ಈ ರಾಜಾ ಬಾಯಿ ತೆರೆದಾಗಲೆಲ್ಲ ಪೆದ್ದುಪೆದ್ದು ಹೇಳಿಕೆಗಳನ್ನು ಕೊಡುತ್ತಾನೆ.

ಟಾಟಾ: **yeah, yeah**

ರಾಡಿಯಾ: ನಾನು ಅವನಿಗೆ ತೆಪ್ಪಗಿರುವುದನ್ನು ಕಲಿ ಅಂತ ಹೇಳಿದರೂ ಅವನು ಕೇಳುವುದಿಲ್ಲ, ಇತ್ತೀಚೆಗೆ ಕನಿಮೋಳಿ (ಕರುಣಾನಿಧಿಯವರ ಮಗಳು ಮತ್ತು ರಾಜ್ಯಸಭೆ ಸದಸ್ಯೆ) ಮತ್ತು ರಾಜಾ ನಡುವೆ ಸಂಬಂಧವಿದೆ ಎಂಬ ರೂಮರ್‌ಗಳು ದೆಹಲಿಯಲ್ಲಿ ಹಬ್ಬಿದೆ.

ಟಾಟಾ: ಅದನ್ನು ಹಬ್ಬಿಸುತ್ತಿರುವುದು ಯಾರು?

ರಾಡಿಯಾ: ಮತ್ಯಾರು? ಮಾರನ್. ಅದಕ್ಕೆ ತಕ್ಕಂತೆ ಈ ರಾಜಾ ಕೂಡ ಪತ್ರಕರ್ತರ ಮುಂದೆ ಕನಿಯನ್ನು ಹೊಗಳುತ್ತಿರುತ್ತಾನೆ. ಹಾಗೆ ಆಕೆಯನ್ನು ಹೊಗಳುವಾಗ ಅವನ ಕರಿ ಮೂತಿ ಕೂಡ ಕೆಂಪೇರುತ್ತೆ!

ಟಾಟಾ: (ನಗು)

ರಾಡಿಯಾ: ಆದರೆ ಕನಿಗೆ ಅವನ ಬಗ್ಗೆ ಕಿಂಚಿತ್ತೂ ಆಸಕ್ತಿ ಇಲ್ಲ, ಕನಿ ನನ್ನಲ್ಲಿ "ಅಯ್ಯೋ ದೇವರೆ, ಈ ಮನುಷ್ಯನನ್ನು ನನ್ನಿಂದ ದೂರ ಇಡು" ಎಂದು ಹೇಳಿದಳು. ಇದೆಲ್ಲ ಭಾರಿ ಮಜವಾಗಿದೆ.

ಕಾಂಗ್ರೆಸ್ ಈಗ ನಮ್ಮ ಅಂಗಡಿ ಅಂದ ಅಂಬಾನಿ

ಕಾಂಗ್ರೆಸ್ ಮತ್ತು ಡಿಎಂಕೆ ನಡುವೆ ಸಚಿವ ಸಂಪುಟದ ಬಗ್ಗೆ ಹಗ್ಗಜಗ್ಗಾಟ ನಡೆಯುತ್ತಿದ್ದಾಗಲೇ ಮಾಜಿ ಪ್ರಧಾನಿ ಬಿಜೆಪಿಯ ವಾಜಪೇಯಿಯ ದತ್ತು ಅಳಿಯ ರಂಜನ್ ಭಟ್ಟಾಚಾರ್ಯನೊಂದಿಗೆ ನೀರಾ ರಾಡಿಯಾ ನಡೆಸಿದ ವಿಚಿತ್ರ ಸಂಭಾಷಣೆ ಹೀಗಿದೆ:

ರಂಜನ್: ಏನೇ ಆದರೂ ಮಾರನ್ (ಮಾಜಿ ಸಚಿವ ದಯಾನಿಧಿ ಮಾರನ್)ಗೆ ಸಚಿವ ಸಂಪುಟದಲ್ಲಿ ಸ್ಥಾನ ಸಿಗಕೂಡದು ಎಂಬುದು ಆ ಫ್ಯಾಮಿಲಿ ನಿಲುವು ಎಂದು ನೀನು ಹೇಳುತ್ತಿದ್ದೀಯಾ...

ರಾಡಿಯಾ: ಹೌದು.

ರಂಜನ್: ಆದರೆ ಕಾಂಗ್ರೆಸ್‌ನಲ್ಲಿ ಇರುವವರೂ ಮತ್ತು ಇತರರು ಮಾರನ್ ಪರ ಇದ್ದಾರೆ.

ರಾಡಿಯಾ: ಅವರಲ್ಲಿ ಸುನೀಲ್ ಮಿತ್ತಲ್ ಕೂಡ ಒಬ್ಬ.


ರಂಜನ್: ನೋಡು. ನನಗೆ ಗುಲಾಮ್ ನಬಿ ತುಂಬಾ ಚೆನ್ನಾಗಿ ಗೊತ್ತು.

ರಾಡಿಯಾ: ಹಾಗಾದರೆ ಅವರ ಮೂಲಕ ಈ ಸಂದೇಶವನ್ನು ಕಾಂಗ್ರೆಸ್ ನಾಯಕರಿಗೆ ಕಳುಹಿಸು. ಗುಲಾಮ್ ನಬಿಗೆ ವಿಮಾನಯಾನ ಖಾತೆ ಕೊಡಬೇಕು, ಪ್ರಫುಲ್ ಪಟೇಲ್‌ನನ್ನು ಹೊರಗಿಡಬೇಕು ಎಂದು ಹೇಳು.

ರಂಜನ್: ಆದರೆ ನಿನ್ನೆ ರಾತ್ರಿ ಪ್ರಫುಲ್ ದೊಡ್ಡ ರಂಪಾಟ ಮಾಡಿದ್ದಾನೆ.

ರಾಡಿಯಾ: ನನಗೆ ಅದು ಗೊತ್ತು.

ರಂಜನ್: ಅವನನ್ನು ಮಂಗಳವಾರ ಸೇರಿಸಿಕೊಳ್ಳುತ್ತಿದ್ದಾರೆ.



ರಾಡಿಯಾ: ಅದೂ ನನಗೆ ಗೊತ್ತು. ಆನಂದ ಶರ್ಮಾನನ್ನು ಸಂಪುಟಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ.

ರಂಜನ್: ಇಲ್ಲ. ಅದೆಲ್ಲ ಮಾಧ್ಯಮಗಳ ಊಹಾಪೋಹ.

ರಾಡಿಯಾ: ಮುಖೇಶ್ (ಅಂಬಾನಿ)ಯೇ ನನಗೆ ಹೇಳಿದ.

ರಂಜನ್: ಮುಖೇಶ್‌ನಿಗೆ ಸಂತೋಷವಾಗಿರಬೇಕು.

ರಾಡಿಯಾ: ತುಂಬಾ ಸಂತೋಷವಾಗಿದೆ.

ರಂಜನ್ (ನಕು) ಮುಖೇಶ್ ನನಗೆ ಏನೆಂದು ಹೇಳಿದ ಗೊತ್ತಾ? "ಕಾಂಗ್ರೆಸ್ ಪಕ್ಷ ಈಗ ನಮ್ಮ ಅಂಗಡಿಯಾಗಿದೆ" ಎಂದು ಮುಖೇಶ್ ಹೇಳಿದ.

ರಾಡಿಯಾ: (ನಗು)

ರಂಜನ್: ನಬಿಗೆ ಹೇಳುತ್ತೇನೆ. ಹಾಗೆಯೇ ಎಸ್‌ಜೆಗೆ ನೇರವಾಗಿ ಹೇಳಿದರೆ ವಾಸಿ ಅಲ್ಲವೇ?

ರಾಡಿಯಾ: ಎಸ್‌ಜೆ ಅಂದ್ರೆ ಯಾರು?

ರಂಜನ್: (ನಗು). ಎಸ್‌ಜೆ ಅಂದ್ರೆ ಎಸ್‌ಜೆ. ದಿ ಬಾಸ್.

ರಾಡಿಯಾ: ಓ. ಸಾರಿ. ಕೂಡಲೇ ಗೊತ್ತಾಗಲಿಲ್ಲ. ಆಕೆಗೂ ಹೇಳು.

ಪ್ರಮುಖ ಸುದ್ದಿ ಚಾನೆಲ್ ಆದ ಎನ್‌ಡಿಟಿವಿಯ ಸಂಪಾದಕಿ ಬರ್ಖಾ ದತ್. ಈಕೆ ಕೂಡ ನೀರಾ ರಾಡಿಯಾಳ ತಾಳಕ್ಕೆ ಕುಣಿಯುತ್ತಾ ಯಾವ ಮಂತ್ರಿಗೆ ಯಾವ ಖಾತೆ ಕೊಡಬೇಕೆಂಬ ಸೂಚನೆಯನ್ನು ಕಾಂಗ್ರೆಸ್ ನಾಯಕರಿಗೆ ತಲುಪಿಸುವ ಜವಾಬ್ದಾರಿಯನ್ನು ಬಹಳ ಆತಂಕ ಮತ್ತು ಕಾಳಜಿಯಿಂದ ಹೊರುವುದನ್ನು ಈ ಸಂಭಾಷಣೆ ತೋರಿಸುತ್ತದೆ.

ರಾಡಿಯಾ: ಈ ಬಾಲು (ಮಾಜಿ ಕೇಂದ್ರ ಮಂತ್ರಿ ಟಿ.ಆರ್. ಬಾಲು) ಏನೇನನ್ನೋ ಮಾಡುತ್ತಿದ್ದಾನೆ.

ಬರ್ಖಾ: ಏನಾಯಿತು?

ರಾಡಿಯಾ: ಅವನು ಮಾಧ್ಯಮಗಳ ಮುಂದೆ ಏನೇನನ್ನೋ ಹೇಳಿ ಎಲ್ಲರ ದಾರಿ ತಪ್ಪಿಸುತ್ತಿದ್ದಾನೆ.

ಬರ್ಖಾ: ಅಯ್ಯೋ ದೇವರೆ! ಈಗೇನು ಮಾಡೋದು? ನಾನು ಅವರಿಗೆ (ಅಂದರೆ ಕಾಂಗ್ರೆಸ್‌ನವರಿಗೆ) ಏನೆಂದು ಹೇಳಬೇಕು? ಹೇಳು, ಏನಂತ ಹೇಳಬೇಕು?



ಆದೇಶ ಪಾಲಿಸಲು ನಿಂತ ಬರ್ಖಾ

ರಾಡಿಯಾ: ನಾನು ಕರುಣಾ (ಅಂದರೆ ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ) ಅವರ ಹೆಂಡತಿ ಮತ್ತು ಮಗಳ ಜೊತೆ ಮಾತನಾಡಿದ್ದೇನೆ. ಕಾಂಗ್ರೆಸ್‌ನವರು ಬಾಲು ಜೊತೆ ಮಾತನಾಡದೆ ನೇರವಾಗಿ ಕರುಣಾ ಜೊತೆ ಮಾತಾಡಬೇಕೆಂದು ಹೇಳು.

ಬರ್ಖಾ: ಹಾ.....

******


ರಾಡಿಯಾ: ಕಾಂಗ್ರೆಸ್‌ನವರು ಕನಿ ಜೊತೆ ಮಾತಾಡಿದರೆ ಎಲ್ಲ ಬಗೆಹರಿಯುತ್ತೆ.

ಬರ್ಖಾ: ಆರ್‌ಸಿಆರ್‌ನಿಂದ (ಪ್ರಧಾನಿಯ ಮನೆ ಇರುವ ರೇಸ್‌ಕೋರ್ಸ್ ರಸ್ತೆ) ಹೊರಬರುತ್ತಿದ್ದಂತೆ ಅದನ್ನು ಮಾಡುತ್ತೇನೆ.

ರಾಡಿಯಾ: ಗುಲಾಮ್ (ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಗುಲಾಮ್ ನಬಿ ಆಜಾದ್) ಜೊತೆ ಮಾತನಾಡಿ ಇದನ್ನು ತಿಳಿಸು.

ಬರ್ಖಾ: ನೋ ಪ್ರಾಬ್ಲಮ್. ಆದಷ್ಟು ಬೇಗ ಗುಲಾಮ್‌ಗೆ ಹೇಳುತ್ತೇನೆ.

ನೀರಾ ರಾಡಿಯಾಳ ಇತರೆ ಉವಾಚ



* "ರಾಜಾನಿಗೆ ಲಂಚ ಕೊಟ್ಟು ಸ್ಪೆಕ್ಟ್ರಮ್ ಅನ್ನು ಪಡೆದರು."
* "ಉದ್ಧವ್ (ಠಾಕ್ರೆ) ಈಗ ಎರಡು ಕಡೆಯವರಿಂದ ಹಣ ಪಡೆದಿದ್ದಾನೆ."
* "ಕಾಂಗ್ರೆಸ್ ಕೈಯಿಂದ ಇದು ಸಾಧ್ಯವಿಲ್ಲ, ಅವರ ಬೆನ್ನೇರಿ ಹೋಗುವಂತೆ ಉದ್ಧವ್‌ಗೆ ಹೇಳುತ್ತೇನೆ."
* "ಸ್ಟಾಲಿನ್‌ನ ತಾಯಿ ದಯಾಳುಗೆ ಮಾರನ್ 600 ಕೋಟಿ ರೂಪಾಯಿಗಳನ್ನು ಕೊಟ್ಟನಂತೆ."
* "2ಜಿ ಸ್ಪೆಕ್ಟ್ರಮ್ ವ್ಯವಹಾರವದಲ್ಲಿ ನನ್ನ ಕ್ಲೈಂಟ್ ಟಾಟಾಗಳೂ ಅಪಾರ ಲಾಭ ಪಡೆದಿದ್ದಾರೆ."
* "ನನ್ನ ಕ್ಲೈಂಟ್‌ಗಳು ಕೋಟ್ಯಾಂತರ ರೂಪಾಯಿಗಳ ಜಾಹೀರಾತನ್ನು ನೀಡುವಾಗ ನೀವು ಪತ್ರಿಕೆಯವರು ಅವರ ವಿರುದ್ಧವೇ ವರದಿಗಳನ್ನು ಪ್ರಕಟಿಸುವುದೇಕೆ?"

2006 ರಲ್ಲಿ ಮುಂಬೈ ಹೈಕೋರ್ಟ್ ಒಂದು ತೀರ್ಪನ್ನು ನೀಡಿತ್ತು. ಅದರ ಪ್ರಕಾರ ಆಗ ಕಿತ್ತಾಡಿಕೊಳ್ಳುತ್ತಿದ್ದ ಅಂಬಾನಿ ಸಹೋದರರಲ್ಲಿ ಅಣ್ಣ ಮುಖೇಶ್ ತಮ್ಮ ಅನಿಲ್‌ನ ಕಂಪನಿಗೆ ಕಡಿಮೆ ದರದಲ್ಲಿ ನೈಸರ್ಗಿಕ ಅನಿಲವನ್ನು ಸರಬರಾಜು ಮಾಡಬೇಕಿತ್ತು. ಹೈಕೋರ್ಟ್‌ನ ಈ ತೀರ್ಪಿಗೆ ಆಧಾರ ಅದಕ್ಕೂ ಮುನ್ನ ಅಂಬಾನಿ ಸಹೋದರರ ನಡುವೆ ಏರ್ಪಟ್ಟಿದ್ದ ಒಂದು 'ಖಾಸಗಿ ಒಪ್ಪಂದ.' ಈ ತೀರ್ಪಿನಿಂದಾಗಿ ಮುಖೇಶ್ ಅಂಬಾನಿಗೆ ಮುಖಭಂಗವಾಗಿತ್ತಲ್ಲದೆ ಆತನ ಕಂಪನಿಗೆ ಅಪಾರ ನಷ್ಟ ಕೂಡ ಆಗುತ್ತಿತ್ತು. ಆಗ ನೀರಾ ರಾಡಿಯಾ ಈ ತೀರ್ಪಿನ ವಿರುದ್ಧ ಮಾಧ್ಯಮಗಳಲ್ಲಿ ಲೇಖನಗಳನ್ನು ಬರೆಸಲು ಸಿದ್ಧಳಾದಳು. ಆಕೆ ಸಂಪರ್ಕಿಸಿದ ಪ್ರಮುಖ ಸಂಪಾದಕರಲ್ಲಿ ಹಿಂದೂಸ್ಥಾನ್ ಟೈಮ್ಸ್ ಪತ್ರಿಕೆಯ ವೀರ್ ಸಾಂಘ್ವಿ ಒಬ್ಬರು.

ಸಾಂಘ್ವಿ ತರಹದ ಪತ್ರಕರ್ತರು ನೀರಾ ರಾಡಿಯಾ, ಅಂಬಾನಿ ಮತ್ತು ಟಾಟಾ ತರಹವರಿಂದ ಹಣ, ಆಸ್ತಿ ಪಡೆಯುವಂತಹ ಭ್ರಷ್ಟರಲ್ಲ. ಆದರೆ ಅಧಿಕಾರದ ಮತ್ತು ಹಣದ ಹತ್ತಿರ ಹೋದಂತೆ ಹೇಗೆ ಹಿರಿಯ ಪತ್ರಕರ್ತರೂ ತಮ್ಮ ಜವಾಬ್ದಾರಿಯನ್ನು ಮರೆಯುತ್ತಾರೆ ಎಂಬುದನ್ನು ಇದು ಸಾಬೀತುಪಡಿಸುತ್ತದೆ.

ಈ ಸಂಭಾಷಣೆಯಲ್ಲಿ ವೀರ್ ಸಾಂಘ್ವಿ ರಾಡಿಯಾಳಿಂದ ತನ್ನ ಲೇಖನದಲ್ಲಿ ಏನನ್ನು ಬರೆಯಬೇಕೆಂದು 'ಮಾರ್ಗದರ್ಶನ' ಪಡೆಯುತ್ತಾರೆ.


ವೀರ್: ನಿಮಗೆ ಎಂತಹ ಲೇಖನ ಬೇಕು?

ರಾಡಿಯಾ: ಈ ತೀರ್ಪಿನಿಂದಾಗಿ ದೇಶದ ಹಿತಾಸಕ್ತಿಗೇ ಧಕ್ಕೆ ಆಗಿದೆ ಎನ್ನುವುದು ಸ್ಪಷ್ಟವಾಗಬೇಕು.

ವೀರ್: ಓಕೆ.

ರಾಡಿಯಾ: ಆ ಸಂದೇಶಕ್ಕೆ ಒತ್ತು ಸಿಗಬೇಕು.

ವೀರ್: ಭಾರತದಂತಹ ಬಡ ದೇಶದಲ್ಲಿ ಲಭ್ಯವಿರುವ ನೈಸರ್ಗಿಕ ಸಂಪತ್ತನ್ನು ಹಲವೇ ಸಾಹುಕಾರರ ಪಾಲಾಗದಂತೆ ನೋಡಿಕೊಳ್ಳಬೇಕು ಎಂದು ಬರೆಯುತ್ತೇನೆ.



ನೀರಾಳಿಂದ ಡಿಕ್ಟೇಷನ್ ಪಡೆದ ವೀರ್

ರಾಡಿಯಾ: ಅದು ಕರೆಕ್ಟ್.

ವೀರ್: ಇನ್ನೂ ಏನನ್ನು ಹೇಳಬೇಕು?

ರಾಡಿಯಾ: ಸರ್ಕಾರವೇ ಅಂಬಾನಿಗೆ ಆ ಗ್ಯಾಸ್ ಫೀಲ್ಡ್ ಅನ್ನು ನೀಡಿದೆ. ಅದಕ್ಕೆಂದು ಈಗಾಗಲೇ ಹತ್ತು ಬಿಲಿಯನ್ ಡಾಲರ್‌ಗಳನ್ನು ವೆಚ್ಚ ಮಾಡಲಾಗಿದೆ.

ವೀರ್: ಓಕೆ.

ರಾಡಿಯಾ: ಆದರೆ ಒಂದೇ ಒಂದು ಪೈಸೆಯನ್ನೂ ಖರ್ಚು ಮಾಡದ ಅನಿಲ್ ಅಂಬಾನಿಗೆ ಇದರಿಂದ ಲಾಭ ಆಗಲಿದೆ....

ವೀರ್: ಅದನ್ನೂ ಬರೆಯಬೇಕಾ?

ರಾಡಿಯಾ: ಹೌದು....

ಆದರ್ಶ ಗ್ರೂಪ್ ಮತ್ತು ಜೈಶಂಕರ್ ಗ್ಯಾಂಗ್

ಮುಖ್ಯಮಂತ್ರಿಯ ಬೇನಾಮಿ ಕೂಟ



ರಾ. ಸೋಮನಾಥ್
rasomanath@gmail.com

ತಾನು ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್‌ನಿಂದ ಪಡೆದ 3 ಕೋಟಿಯಷ್ಟು ಹಣ ಸಾಲವೇ ಹೊರತು ಲಂಚದ ಕೇಸಲ್ಲ ಎಂದು ಧರ್ಮಸ್ಥಳ ಮಂಜುನಾಥ ಸ್ವಾಮಿಯ ಮೇಲೆ ಆಣೆ ಪ್ರಮಾಣ ಮಾಡುತ್ತಾರೆ ಶೋಭಾ ಕರಂದ್ಲಾಜೆ.

ನನ್ನ ಮಕ್ಕಳು, ಅಳಿಯಂದಿರು ಯಾರೇ ಭೂಮಿ ಖರೀದಿಸಿದ್ದರೂ ಕಾನೂನು ಬದ್ಧವಾಗಿ ಖರೀದಿಸಿದ್ದಾರೆಯೇ ಹೊರತು ಅದರಲ್ಲೇನೂ ಮೋಸವಿಲ್ಲ ಎಂದು ಎದೆ ಬಡಿದುಕೊಂಡು ಕಂಠಪಾಠ ಒಪ್ಪಿಸುವ ಮುಖ್ಯಮಂತ್ರಿ ಯಡ್ಡಿ. ಬಹುಶಃ ಇವರಿಬ್ಬರಿಗೂ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೆ ಲೋಕ ಕೂಡ ಕಣ್ಣು ಕಟ್ಟಿಕೊಂಡಿರುತ್ತದೆ ಎಂಬ ಅಜ್ಞಾನವಿರಬೇಕು. ಆದರ್ಶ ಡೆವಲಪರ್ಸ್‌ನ ಖದೀಮ ಜೈಶಂಕರ್ ಮತ್ತು ಆತನ ತಮ್ಮ ಕರುಣೇಶ್‌ರನ್ನು ಮುಂದಿಟ್ಟುಕೊಂಡು ಯಡ್ಡಿ ಮತ್ತು ಕರಂದ್ಲಾಜೆ ಹೇಗೆ ಒಂದರ ಮೇಲೊಂದು ಆಸ್ತಿ ಖರೀದಿಸುತ್ತಾ ಬಂದರು, ಅದಕ್ಕಾಗಿ ಏನೆಲ್ಲಾ ಕಪಟ ಕಂಪೆನಿಗಳು, ದಾಖಲೆಗಳನ್ನು ಹುಟ್ಟುಹಾಕಿದರು ಮತ್ತು ತಮ್ಮ ಬೇನಾಮಿಗಳಿಗೆಂದು ಏನೆಲ್ಲಾ ಡೀನೋಟಿಫಿಕೇಷನ್, ಭೂಮಿ ಬಳುವಳಿ, ಕಳ್ಳ ಕಂಪೆನಿಗಳ ಸುಳ್ಳು ಪ್ರಾಜೆಕ್ಟುಗಳ ಅಪ್ರೂವಲ್; ಇತ್ಯಾದಿ ದುರಾಚಾರಕ್ಕೆಂದೇ ತಮ್ಮ ಅಧಿಕಾರಾವಧಿಯನ್ನು ಹೇಗೆ ಮೀಸಲಿಟ್ಟಿದ್ದರೆಂಬುದಕ್ಕೆ ಜೀವಂತ ದಾಖಲೆಗಳಿವೆ.



ಖರೀದಿ ಜೈಶಂಕರ್

ಈ ಪೈಕಿ ಅತೀ ಮುಖ್ಯವಾದದ್ದು ಆದರ್ಶ ಡೆವಲಪರ್ಸ್‌ಗೂ ಮುಖ್ಯಮಂತ್ರಿ ಯಡ್ಡಿಗೂ ಇದ್ದ ಕಳ್ಳ ನೆಂಟಸ್ತಿಕೆಯ ಮನೆ ಭೋಗ್ಯದ ಕರಾರು. ಕುಮಾರಸ್ವಾಮಿ ಸಂಪುಟದಲ್ಲಿ ಯಡ್ಡಿ ಉಪಮುಖ್ಯಮಂತ್ರಿ ಆದದ್ದೇ ತಡ, ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್‌ನ ಅದೃಷ್ಟ ಖುಲಾಯಿಸುತ್ತದೆ. ಮೂಲತಃ ಕನಕಪುರ ತಾಲೂಕು ಬಿಳಿದಾಳೆಯ ಮಾದಯ್ಯ ಎಂಬ ಸಾಮಾನ್ಯ ರೈತನ ಮಗನಾದ ಜೈಶಂಕರ್ ಇಲ್ಲಿಗೆ ಇಪ್ಪತ್ತು ವರ್ಷದ ಹಿಂದೆ ಜಲಮಂಡಳಿಯಲ್ಲಿ ಓರ್ವ ಸಾಮಾನ್ಯ ಇಂಜಿನಿಯರ್ ಆಗಿದ್ದ. ಅಲ್ಲಿ ಯಾವುದೋ ಕಳ್ಳ ಬಿಲ್ಲು ವ್ಯವಹಾರದಲ್ಲಿ 15 ಲಕ್ಷ ಲಪಟಾಯಿಸಿ ಸಿಕ್ಕಿಬಿದ್ದನಂತೆ. ಎಲ್ಲಿ ಜೈಲು ಪಾಲಾಗಬೇಕಾಗುತ್ತೋ ಎಂದು ಕೆಲಸಕ್ಕೇ ಚಕ್ಕರ್ ಕೊಟ್ಟು ತಲೆಮರೆಸಿಕೊಂಡಿದ್ದನಂತೆ ಕೊನೆಗೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ತನಿಖೆಯಿಂದ ಪಾರಾಗಿದ್ದನಂತೆ

ಈತನ ತಮ್ಮನೇ ಪ್ರಳಯಾಂತಕ ಕರುಣೇಶ್. ಪಟೇಲ್ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಟ್ರಾನ್ಸ್‌ಫರ್, ಬಿಡಿಎ ಸೈಟು ಅಲಾಟ್‌ಮೆಂಟ್; ಇತ್ಯಾದಿ ಬ್ರೋಕರಿಕೆ ಮಾಡಿಕೊಂಡಿದ್ದ ಕರುಣೇಶ್ ಯಡ್ಡಿ ವಿರೋಧ ಪಕ್ಷದ ನಾಯಕನಾಗುತ್ತಿದ್ದಂತೆ ಧವಳಗಿರಿಗಿಳಿದಿದ್ದ. ಅದೇ ಹೊತ್ತಿಗೆ ಜೈಶಂಕರ್ ತಾನು ಜಲಮಂಡಳಿಯಲ್ಲಿ ದೋಚಿದ್ದ ದುಡ್ಡನ್ನೆಲ್ಲಾ ತಂದು ಸೌತ್ ಎಂಡ್ ಸರ್ಕಲ್ ಸಮೀಪದ ಕೆ.ಆರ್. ರಸ್ತೆಯಲ್ಲಿರುವ ಗರುಡಿ ಅಪಾರ್ಟ್‌ಮೆಂಟ್ ಕಾಮಗಾರಿಗೆ ಕೈಇಟ್ಟಿದ್ದ. ತಮ್ಮ ಕರುಣೇಶ್ ಮೂಲಕ ಯಡ್ಡಿಗೆ ತಗುಲಿಕೊಂಡ ಜೈಶಂಕರ್ ಒಂದರಮೇಲೊಂದು ಕಳ್ಳ ಪ್ರಾಜೆಕ್ಟುಗಳನ್ನು ಹುಟ್ಟುಹಾಕಿ ಕೆಐಎಡಿಬಿಗೆ ವಕ್ಕರಿಸಿದ.

ಆಗ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದ ಆರ್.ವಿ. ದೇಶಪಾಂಡೆಗೆ ಹೇಳಿ ಯಡ್ಡಿ ಕೋರಮಂಗಲದ ರಿಂಗ್ ರಸ್ತೆಯಲ್ಲಿ ಆದರ್ಶ ಡೆವಲಪರ್ಸ್‌ಗೆಂದು ಮೂರು ಕೆಐಎಡಿಬಿಯ ಸೈಟು ಕೊಡಿಸಿಕೊಟ್ಟರು. ಪ್ರತಿ ಸೈಟಿನ ವಿಸ್ತೀರ್ಣವೇ ಕನಿಷ್ಠ ಎರಡೆಕರೆಯಾಗಿತ್ತು, ಅಲ್ಲಿಂದಾಚೆಗೆ ಆದರ್ಶ ಡೆವಲಪರ್ಸ್ ಧಣಿ ಜೈಶಂಕರ್‌ನ ದೆಸೆಯೇ ಬದಲಾಗಿಹೋಯಿತು. ಮುಂದೆ ಯಡ್ಡಿ ಉಪಮುಖ್ಯಮಂತ್ರಿಯಾದ ಮೇಲಂತೂ ಜೈಶಂಕರ್, ಆತನ ತಮ್ಮ ಕರುಣೇಶ್ ಮತ್ತು ಜೈಶಂಕರ್‌ನ ಪತ್ನಿ ಸುಧಾ; ಯಡ್ಡಿ ಪಾಲಿಗೆ ಅಕ್ಷರಶಃ ಬೇನಾಮಿಗಳಾಗಿ ಚಾಲ್ತಿಗೆ ಬಂದರು.

9.12 ಎಕರೆ

ಇದೇ ಜೈಶಂಕರ್‌ಗೆ ತಮ್ಮ ಡಾಲರ್ಸ್ ಕಾಲನಿಯ ಮನೆಯನ್ನು ಭೋಗ್ಯಕ್ಕೆ ಹಾಕಿ ಅದರಿಂದ ಬಂದ 50 ಲಕ್ಷದಲ್ಲೇ ತಾವು ಶಿರಾಳಕೊಪ್ಪ ಮತ್ತು ಶಿಕಾರಿಪುರದಲ್ಲಿ ಕೃಷಿ ಭೂಮಿ ಖರೀದಿಸಿದ್ದಾಗಿ ಯಡ್ಡಿ ಲೋಕಾಯುಕ್ತಕ್ಕೆ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಭೂಸುಧಾರಣಾ ಕಾಯ್ದೆಯ ಕಲಂ 79 ಎ ಮತ್ತು 79ಬಿ ಪ್ರಕಾರ ಕೃಷಿಯೇತರ ಮೂಲದಿಂದ ರೂ. 2 ಲಕ್ಷಕ್ಕೂ ಅಧಿಕ ಆದಾಯವುಳ್ಳ ಯಾರೇ ಆಗಲಿ ಕೃಷಿ ಭೂಮಿಯನ್ನು ಖರೀದಿಸುವಂತಿಲ್ಲ, ಇದು ಕಾನೂನು. ಆದರೆ ಯಡ್ಡಿ 2005ರ ಅಕ್ಟೋಬರ್ 6ರಂದು ಶಿಕಾರಿಪುರ ತಾಲೂಕು ತಿಮ್ಮಲಾಪುರದಲ್ಲಿ 5.2 ಎಕರೆಯಷ್ಟು ಕೃಷಿ ಭೂಮಿಯನ್ನು ಐದು ಲಕ್ಷದ ಮೂವತ್ತು ಸಾವಿರ ರೂಪಾಯಿ ಕೊಟ್ಟು ಖರೀದಿಸಿದ್ದಾರೆ.

ಇದಾದನಂತರ ಉಪಮುಖ್ಯಮಂತ್ರಿಯಾದ ಮೇಲೆ 2007ರ ಜನವರಿ 20ರಂದು ಶಿರಾಳಕೊಪ್ಪದಲ್ಲಿ ಮತ್ತೆ 9.12 ಎಕರೆ ಭೂಮಿಯನ್ನು ಹದಿನಾರು ಲಕ್ಷದ 96 ಸಾವಿರ ರೂಪಾಯಿಗೆ ಖರೀದಿಸುತ್ತಾರೆ. ವಾಸ್ತವವೆಂದರೆ ಈ 9.12 ಎಕರೆ ಭೂಮಿಗೆ 16.92 ಲಕ್ಷ ತೆತ್ತಿದ್ದರೂ ಅದರ ಮಾರುಕಟ್ಟೆ ಬೆಲೆ ಆ ಹೊತ್ತಿಗೆ 50 ಲಕ್ಷವಾಗಿತ್ತು, ತಾವು ಮುಖ್ಯಮಂತ್ರಿಯಾದ ಮೇಲೆ ಅಂದರೆ 2008ರ ಡಿಸೆಂಬರ್ 10ರಂದು ಈ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿಕೊಂಡ ಮುಖ್ಯಮಂತ್ರಿಗೆ ಇಷ್ಟೊಂದು ಆಸ್ತಿ ಖರೀದಿಸಲು ದುಡ್ಡು ಬಂದಿದ್ದು ಆದರ್ಶ ಡೆವಲಪರ್ಸ್ ದಣಿ ಜೈಶಂಕರ್ ಕೊಟ್ಟಿದ್ದ 50 ಲಕ್ಷದಿಂದ?

ಕಪಟ ಬಾಡಿಗೆಯ ಕರಾರು

ತಮ್ಮ ಡಾಲರ್ಸ್ ಕಾಲನಿಯ ಮನೆಯನ್ನು ಜೈಶಂಕರ್‌ಗೆ ಭೋಗ್ಯಕ್ಕೆ ಕೊಟ್ಟು ಬಂದ 50 ಲಕ್ಷದಿಂದಲೇ ತಾನು ಶಿರಾಳಕೊಪ್ಪದಲ್ಲಿ ಒಂಬತ್ತೆಕರೆ ಖರೀದಿಸಿದ್ದೇನೆಂದು ಯಡ್ಡಿ ಲೋಕಾಯುಕ್ತಕ್ಕೆ ಪ್ರಮಾಣಪತ್ರ ಸಲ್ಲಿಸುತ್ತಾರೆ.

ಯಡ್ಡಿ ಲೋಕಾಯುಕ್ತಕ್ಕೆ ಸಲ್ಲಿಸಿದ ದಾಖಲೆಗಳ ಪ್ರಕಾರವೇ 2004-05ನೇ ಸಾಲಿನಲ್ಲಿ ಅವರ ಒಟ್ಟು ವಾರ್ಷಿಕ ಆದಾಯ 7, 98, 475 ರೂಪಾಯಿಗಳಾಗಿತ್ತು, 2005-06ರ ಹೊತ್ತಿಗದು 9,50,504 ರೂಪಾಯಿಗೇರಿತು. 2006-07ರ ಹೊತ್ತಿಗೆ ಹತ್ತು ಲಕ್ಷವನ್ನು ಮೀರಿತ್ತು, ಈ ಪೈಕಿ ಸರಾಸರಿ ಮೂರೂವರೆ ಲಕ್ಷದಷ್ಟು ಕೃಷಿ ಆದಾಯ ಬಿಟ್ಟರೆ ಮನೆಬಾಡಿಗೆ, ಬ್ಯಾಂಕ್‌ಬಡ್ಡಿ ಸಂಬಳ ಇತ್ಯಾದಿ ಕೃಷಿಯೇತರ ಮೂಲದಿಂದ ಯಡ್ಡಿಗೆ ಸರಾಸರಿ 7 ಲಕ್ಷದಷ್ಟು ಆದಾಯವಿತ್ತು.

ಹೀಗಿದ್ದೂ ಎಲ್ಲಾ ಕಾಯ್ದೆ ಕಾನೂನು ಮುರಿದು ಯಡ್ಡಿ ಕೃಷಿ ಭೂಮಿಯನ್ನು ಖರೀದಿಸುತ್ತಾರೆ. ಈ ರೀತಿ ಖರೀದಿಸಿದ ಭೂಮಿಗೆ ಆದರ್ಶ ಖದೀಮ ಜೈಶಂಕರ್ ಕೊಟ್ಟ 50 ಲಕ್ಷವೇ ಮೂಲಾಧಾರ ಎಂದು ಯಡ್ಡಿ ಹೇಳುವ ಮಾತಲ್ಲಾದರೂ ಸತ್ಯವಿದೆಯೇ?

ಡಾಲರ್ಸ್ ಕಾಲನಿಯ ತಮ್ಮ 381, 80 ಅಡಿ ರಸ್ತೆ, 3ನೇ ಸ್ಟೇಜ್, 5ನೇ ಬ್ಲಾಕ್, ರಾಜಾಮಹಲ್ ವಿಲಾಸ್ ಬಡಾವಣೆಯ ವಿಳಾಸದ ಬಂಗಲೆಯನ್ನು 2006ರ ಆಗಸ್ಟ್ 1ರಂದು ವಿಠ್ಠಲ್ ಮಲ್ಯ ರಸ್ತೆ ವಿಳಾಸದ ಆದರ್ಶ ಡೆವಲಪರ್ಸ್‌ಗೆ ಯಡ್ಡಿ 50 ಲಕ್ಷಕ್ಕೆ ಭೋಗ್ಯಕ್ಕೆ ಹಾಕುತ್ತಾರೆ. ಜೊತೆಗೆ ತಿಂಗಳಿಗೆ ಲಕ್ಷ ರೂಪಾಯಿಯಂತೆ ಬಾಡಿಗೆಯನ್ನೂ ಪಡೆದಿದ್ದೇನೆಂದು ಲೆಕ್ಕ ಕೊಡುತ್ತಾರೆ. ಈ ದುಡ್ಡಲ್ಲೇ ತಾನು ಭೂಮಿ ಖರೀದಿಸಿದ್ದೇನೆಂಬುದು ಮುಖ್ಯಮಂತ್ರಿಯ ವಾದ. ಆದರೆ 2006ರಿಂದ 2008ರ ತನಕ ಇದೇ ಮನೆಯಲ್ಲಿ ಯಡ್ಡಿ ಕುಟುಂಬ ವಾಸವಾಗಿತ್ತು, ಉಪಮುಖ್ಯಮಂತ್ರಿಗೆಂದು ಸರ್ಕಾರ ಕಟ್ಟಿಸಿದ್ದ ಪೊಲೀಸ್ ಭದ್ರತೆಯೂ ಇದೇ ಮನೆಯ ಹೆಸರಿಗಿತ್ತು.

ಜೈಶಂಕರ್‌ನ ಕಳ್ಳ ಕಂಪನಿಗಳು

ಇದರರ್ಥ ಆದರ್ಶ ಧಣಿ ಜೈಶಂಕರ್‌ಗೆ ಈ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೇನೆಂದು ಯಡ್ಡಿ ಲೋಕಾಯುಕ್ತಕ್ಕೆ ಸಲ್ಲಿಸಿದ್ದ ಪ್ರಮಾಣಪತ್ರವೇ ಪಕ್ಕಾ ಸುಳ್ಳಾಗಿತ್ತು, ಶಿಕಾರಿಪುರದಲ್ಲಿ ತಾನು ಖರೀದಿಸಿದ್ದ ಕೃಷಿ ಭೂಮಿಗೆ ಯಡ್ಡಿ ಈ ಥರದ ಬೋಗಸ್ ದಾಖಲೆಯೊಂದನ್ನು ಸೃಷ್ಟಿಸಿದ್ದರು.



ಇದು ಮುಖ್ಯಮಂತ್ರಿ ಯಡ್ಡಿ ಮತ್ತು ಆದರ್ಶ ಡೆವಲಪರ್ಸ್ ನಡುವಿನ ಅನೈತಿಕ ನೆಂಟಸ್ತಿಕೆಗೆ ಸಣ್ಣ ಸಾಕ್ಷಿಯಷ್ಟೆ. ಯಡ್ಡಿಯ ಬೇನಾಮಿಯಾದ ನಂತರವೇ ಆದರ್ಶ ಡೆವಲಪರ್ಸ್ ಎಂಬುದು ಆದರ್ಶ ಗ್ರೂಪ್ ಆಫ್ ಕಂಪೆನಿಯಾಗಿ ಬೆಳೆಯಿತು. ಆದರ್ಶ ಡೆವಲಪರ್ಸ್ ಆಕರ್ಷ್ ಪ್ರಾಪರ್ಟೀಸ್, ಆಕರ್ಷ್ ಇನ್‌ಪ್ಲೆಟೆಕ್ ಅಂಡ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ., ಆದರ್ಶ್ ರಿಯಾಲ್ಟಿ ಅಂಡ್ ಹೋಟೆಲ್ಸ್ ಪ್ರೈ.ಲಿ, ಆಕರ್ಷ್ ರಿಯಾಲ್ಟಿ ಪ್ರೈ.ಲಿ, ಮೇ - ಆರ್ಕಿಡ್ಸ್ ಅಪಾರ್ಟ್‌ಮೆಂಟ್ಸ್ ಪ್ರೈ.ಲಿ, ಆದರ್ಶ್ ಪ್ರೈಮ್ ಪ್ರಾಜೆಕ್ಟ್ಸ್ ಪ್ರೈ.ಲಿ, ಇತ್ಯಾದಿ ಹತ್ತಾರು ಕಂಪೆನಿಗಳ ಹುತ್ತವೇ ಆದರ್ಶ್ ಗ್ರೂಪ್ ಅಂಡ್ ಕಂಪೆನೀಸ್.

ಇದರ ಮುಖ್ಯ ಪ್ರೊಮೋಟರುಗಳ ಪೈಕಿ ಪ್ರಮುಖನೇ ಮಾಜಿ ಜಲಮಂಡಳಿಯ ಇಂಜಿನಿಯರ್ ಜೈಶಂಕರ್. ಈತನ ಪತ್ನಿ ಸುಧಾ, ತಮ್ಮ ಕರುಣೇಶ್ ಮತ್ತು ಟಿ.ವಿ. ರವಿಕುಮಾರ್ ಇತ್ಯಾದಿ ದುಷ್ಟ ಚತುಷ್ಟಯವೇ ಇದರ ಪ್ರೊಮೋಟರ್‌ಗಳು. ಮುಖ್ಯಮಂತ್ರಿಯ ಅಳಿಯ ಸೋಹನ್‌ಕುಮಾರ್, ಮಗ ವಿಜಯೇಂದ್ರ, ಮತ್ತೊಬ್ಬ ಮಗ ರಾಘವೇಂದ್ರ, ಮಗಳು ಉಮಾದೇವಿ ಮತ್ತು ಶೋಭಾ ಕರಂದ್ಲಾಜೆಯ ಪರವಾಗಿ ಕಳೆದೊಂದು ವರ್ಷದಿಂದ ಆಸ್ತಿ ಖರೀದಿ, ಬ್ಲಾಕ್‌ಮನಿ ದಂಧೆ, ಚಿತ್ರವಿಚಿತ್ರ ಕಂಪೆನಿಗಳನ್ನು ಹುಟ್ಟು ಹಾಕುವುದೇ ಇವರ ನಿತ್ಯ ಕಸುಬಾಯಿತು.

ಇವರೆಲ್ಲ ಸ್ಟಾರ್ ಹೋಟೆಲ್ ಸೇರಿಕೊಂಡು 2006ರ ಜೂನ್ 2ರಂದು ಮೆ. ಆಕರ್ಷ್ ಪ್ರಾಪರ್ಟೀಸ್ ಎಂಬ ಕಂಪೆನಿಯೊಂದನ್ನು ಸೃಷ್ಟಿಸುತ್ತಾರೆ. ಈ ಆಕರ್ಷ್ ಪ್ರಾಪರ್ಟೀಸ್‌ನ ಶೇ.50ರಷ್ಟು ಪಾಲುದಾರಿಕೆಯಿರುವುದು ಮುಖ್ಯಮಂತ್ರಿ ಮಗಳು ಉಮಾದೇವಿ ಮತ್ತು ಅಳಿಯ ಸೋಹನ್‌ಕುಮಾರ್ ಒಡೆತನದ ಮೇ. ಧವಳಗಿರಿ ಪ್ರಾಪರ್ಟೀಸ್ ಅಂಡ್ ಡೆವಲಪರ್ಸ್ ಪ್ರೈ.ಲಿ. ಎಂಬ ಮತ್ತೊಂದು ಕಂಪೆನಿಯಲ್ಲಿ, ಜೈ ಶಂಕರ್ ಶೇ. 49.80ರಷ್ಟು ಪಾಲುದಾರನಾದರೆ ಪತ್ನಿ ಸುಧಾನ ಮತ್ತು ತಮ್ಮ ಕರುಣೇಶ್ ಶೇ. 0.10 ಪರ್ಸೆಂಟ್ ಪಾಲುದಾರರು.

ಆಕರ್ಷ್ ಪ್ರಾಪರ್ಟೀಸ್‌ನಲ್ಲಿ ಮುಖ್ಯಮಂತ್ರಿ ಕುಟುಂಬದ ಬಂಡವಾಳವಾಗಿ ತೊಡಗಿಸಿದ್ದು 1.10 ಕೋಟಿ. ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದೇ ಶಿವಮೊಗ್ಗ ಮತ್ತು ಬೆಂಗಳೂರು ಸುತ್ತ ಆಕರ್ಷ್ ಪ್ರಾಪರ್ಟೀಸ್ ಏಕಾಏಕಿ 3 ಕೋಟಿಯಷ್ಟು ಆಸ್ತಿ ಖರೀದಿಸಿದೆ. ಈ ಪೈಕಿ ಶಿವಮೊಗ್ಗ ನಗರ ಮಧ್ಯದಲ್ಲಿ 14859 ಅಡಿಗಳ ವಿವಿಧ ಖಾತೆ ನಂ. 134/131/226 ಮತ್ತು 150ರ ಆಸ್ತಿಯನ್ನು ಮುಖ್ಯಮಂತ್ರಿ ಕುಟುಂಬದ ಪರವಾಗಿ ಆಕರ್ಷ್‌ನ ಕರುಣೇಶ್ 2006ರ ಆಗಸ್ಟ್ 11ರಂದು 38 ಲಕ್ಷಕ್ಕೆ ಖರೀದಿಸುತ್ತಾರೆ.

ವಾಸ್ತವವಾಗಿ ಇದು 55 ಲಕ್ಷದ ಸೊತ್ತಾದರೂ ಸರ್ಕಾರಿ ಬೊಕ್ಕಸಕ್ಕೆ ವಂಚಿಸಿ 38 ಲಕ್ಷಕ್ಕೆ ಖರೀದಿಸಿದಂತೆ ಕರುಣೇಶ್ ದಾಖಲೆ ಸೃಷ್ಟಿಸಿದ್ದ. ಇದನ್ನು ಜಿಲ್ಲಾ ರಿಜಿಸ್ಟ್ರಾರ್ ಪತ್ತೆ ಹಚ್ಚಿ ಉಳಿದ ಮೊತ್ತವನ್ನು ವಸೂಲು ಮಾಡುತ್ತಾರೆ. ಇದಾದ ನಂತರ ಇದೇ ಕರುಣೇಶ್ ಶಿವಮೊಗ್ಗದ ಮಧ್ಯೆ 8750 ಅಡಿಗಳ ರೂ. 1.05 ಕೋಟಿ ಬೆಲೆಯ ಮತ್ತೊಂದು ಆಸ್ತಿಯನ್ನು 2006 ಜೂನ್ 8 ರಂದು ಖರೀದಿಸುತ್ತಾನೆ. 2007ರ ಫೆಬ್ರವರಿ 6ರಂದು 77.95 ಲಕ್ಷ ರೂ. ಮತ್ತೊಂದು ಆಸ್ತಿಯನ್ನೂ ಕರುಣೇಶ್ ಖರೀದಿಸುತ್ತಾನೆ.

ಒಟ್ಟು 3 ಕೋಟಿ ರೂಪಾಯಿಗಳ ಮೊತ್ತದ ಈ ಮೂರೂ ನಿವೇಶನಗಳನ್ನು ಸೇರಿಸಿ ಒಟ್ಟನಲ್ಲಿ 108 ಕೊಠಡಿಗಳ ತ್ರೀ ಸ್ಟಾರ್ ಹೋಟೆಲ್ ನಿರ್ಮಿಸುವ ಪ್ರಾಜೆಕ್ಟ್‌ಗೆ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ಅಧ್ಯಕ್ಷತೆಯ ಸಿಂಗಲ್ ವಿಂಡೋ ಕ್ಲಿಯರೆನ್ಸ್ ಕಮಿಟಿಯಿಂದ ಅನುಮೋದನೆಯೂ ಸಿಗುತ್ತದೆ. ವಿಚಿತ್ರವೆಂದರೆ ಈ ಮೂರು ಕೋಟಿ ಬಂಡವಾಳವನ್ನು ಬೇನಾಮಿ ಕರುಣೇಶ್‌ನೇ ಹಾಕಿದಂತೆ ದಾಖಲೆಗಳನ್ನು ಸೃಷ್ಟಿಸಲಾಗಿತ್ತು, ಮುಖ್ಯಮಂತ್ರಿ ಮಕ್ಕಳಾಗಲಿ, ಅವರ ಧವಳಗಿರಿ ಪ್ರಾಪರ್ಟೀಸ್ ಕಂಪೆನಿಯಾಗಲಿ ಇದಕ್ಕೆ ನಯಾಪೈಸೆಯನ್ನೂ ಹಾಕಿಲ್ಲ ಎಂಬಂತೆ ಕರುಣೇಶ್ ದಾಖಲೆ ಸೃಷ್ಟಿಸಿದ್ದ

ಕರಂದ್ಲಾಜೆಗೆ ಲೋನು

ಶೇ.50ರಷ್ಟು ಪಾಲುದಾರಿಕೆಯಿದ್ದರೂ ಮುಖ್ಯಮಂತ್ರಿ ಕುಟುಂಬ ಇಲ್ಲಿ ಯಾವ ಬಂಡವಾಳವನ್ನೂ ಹೂಡೇ ಇಲ್ಲದ ಹಾಗೆ ದಾಖಲೆ ಸೃಷ್ಟಿಸುವುದೊಂದೇ ಇದರ ಹಿಂದಿದ್ದ ಹುನ್ನಾರವಾಗಿತ್ತು!

ಇದಷ್ಟೇ ಅಲ್ಲದೇ ಆಕರ್ಷ್ ಗ್ರೂಪ್‌ನ ಜೈಶಂಕರ್ ಮುಖ್ಯಮಂತ್ರಿ ಮಕ್ಕಳು ಮತ್ತು ಅಳಿಯಂದಿರು ಸೇರಿ ಹುಟ್ಟಿ ಹಾಕಿದ್ದ ಮೇ-ಭಗತ್ ಹೋಮ್ಸ್ ಪ್ರೈ.ಲಿ. ಎಂಬ ಮತ್ತೊಂದು ಕಂಪೆನಿಗೆ 92 ಲಕ್ಷ ರೂಪಾಯಿಗಳಷ್ಟು ಬಡ್ಡಿರಹಿತ ಸಾಲ ಕೊಡುತ್ತಾನೆ. ಜೊತೆಗೆ ಯಡ್ಡಿ ಪರಮಾಪ್ತೆ ಮಂತ್ರಿಣಿ

▶▶ 12



ಸ್ಕೂಪ್ ಮಕ್ಕಳ ಟ್ರಸ್ಟಿಗೆ 10 ಕೋಟಿ ಗಣಿ ದುಡ್ಡು

[illegible]

ಯಡ್ಡಿ ದರ್ಬಾರಿನಲ್ಲಿ ರಾಘವೇಂದ್ರ, ವಿಜಯೇಂದ್ರ ಎಂಬ ಕಳ್ಳರ ಜೋಡಿ ನಡೆಸುತ್ತಿರುವ ಹಗಲು ದರೋಡೆಗೆ ಇನ್ನೊಂದು ಸಾಕ್ಷಿ ಸಿಗುತ್ತಿದೆ.

ಗಣಿ ದಂಧೆಕೋರ ಸಜ್ಜನ್ ಜಿಂದಾಲ್‌ನ ಸೌತ್ ವೆಸ್ಟ್ ಮೈನಿಂಗ್ ಲಿಮಿಟೆಡ್ ಕಂಪೆನಿಯಿಂದ ಯಡ್ಡಿ ಫ್ಯಾಮಿಲಿಗೆ ಸೇರಿರುವ ಪ್ರೇರಣಾ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್‌ಗೆ 10 ಕೋಟಿ ರೂಪಾಯಿ ದುಡ್ಡು ಪಡೆದಿರುವ ದಾಖಲೆಯೊಂದು 'ಲಂಕೇಶ್'ಗೆ ಸಿಕ್ಕಿದೆ.

ಈ ಡೀಲ್‌ನ ವಿವರಗಳನ್ನು ನೋಡಿದರೆ ಈ ರಾಘವೇಂದ್ರ-ವಿಜಯೇಂದ್ರರು ಯಡ್ಡಿ ಮಕ್ಕಳಾ ಇಲ್ಲಾ ಗಡ್ಡಿ ಮಕ್ಕಳಾ ಅಥವಾ ಕಳ್ ಮಕ್ಕಳಾ ಎಂಬ ಅನುಮಾನ ಬಾರದಿರದು.

ಗಣಿಕಳ್ಳ ಜಿಂದಾಲ್

ಬಳ್ಳಾರಿಯ ತೋರಣಗಲ್‌ನಲ್ಲಿರುವ ಸೌತ್‌ವೆಸ್ಟ್ ಮೈನಿಂಗ್ ಲಿ.ಸಜ್ಜನ್ ಜಿಂದಾಲ್‌ಗೆ ಸೇರಿರುವ ಉದ್ಯಮ ಸಾಮ್ರಾಜ್ಯದ ಒಂದು ಶಾಖೆಯಷ್ಟಾಗಿದೆ. ಈಗ್ಗೆ ಇಪ್ಪತ್ತು ವರ್ಷಗಳ ಹಿಂದೆ ಹರಿಯಾಣದ ಹಿಸ್ಸಾರ್‌ನಲ್ಲಿ ತಲೆಯೆತ್ತಿದ ಜಿಂದಾಲ್ ಅಲ್ಯೂಮಿನಿಯಂ ಕಂಪೆನಿಯು ಆಗೊಂದು ಸಣ್ಣ ಉದ್ಯಮ ಸಂಸ್ಥೆಯಾಗಿತ್ತು, ನಂತರ ಬೆಳೆದು ಈಗ ಹತ್ತಿರತ್ತಿರ ಹದಿನೈದು ಸಾವಿರ ಕೋಟಿ ರೂಪಾಯಿ ಮೌಲ್ಯದ ಗಣಿ ಕಂಪೆನಿಯಾಗಿ ಬೆಳೆದಿದೆ.

ಈಗ ನಾವು ಪ್ರಸ್ತಾಪಿಸುತ್ತಿರುವ ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯೂ ಜಿಂದಾಲ್‌ನವರಿಗೆ ಸೇರಿದೆ. ತೋರಣಗಲ್‌ನ ವಿದ್ಯಾನಗರಿಯಲ್ಲಿ ಒಂದು ನೂರು ಕಿ.ಮೀ. ಸುತ್ತಳತೆಯಲ್ಲಿ ಹರಡಿಕೊಂಡಿರುವ ಸೌತ್‌ವೆಸ್ಟ್ ಕಂಪೆನಿ ಕಬ್ಬಿಣದ ಅದಿರಿನ ಗಣಿಗಾರಿಕೆ ಹಾಗೂ ಉಕ್ಕು ತಯಾರಿಕಾ ದಂಧೆಯನ್ನು ನಡೆಸುತ್ತಿದೆ.

ಅದೇ ವಿದ್ಯಾನಗರಿಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ಶಾಖೆಯೊಂದಿದ್ದು ಅಲ್ಲಿ ಸೌತ್ ವೆಸ್ಟ್ ಕಂಪೆನಿಗೆ 64010486365 ನಂಬರ್‌ನ ಕ್ರೆಡಿಟ್ ಅಕೌಂಟ್ ಇಂದಿದೆ.

2010ರ ಮಾರ್ಚ್‌ನಲ್ಲಿ ಚಾಲನೆಗೆ ಬಂದಿರುವ ಈ ಅಕೌಂಟ್‌ನಿಂದ ಕೋಟ್ಯಾಂತರ ರೂಪಾಯಿಗಳ ನೂರಾರು ಟ್ರಾನ್ಸಾಕ್ಷನ್‌ಗಳು ನಡೆದಿವೆ.



ಯಡ್ಡಿ ಫ್ಯಾಮಿಲಿಯ 'ಪ್ರೇರಣಾ ಎಜುಕೇಷನಲ್ ಟ್ರಸ್ಟ್'ಗೆ ಇದೇ ಬ್ಯಾಂಕ್ ಅಕೌಂಟ್‌ನಿಂದಲೇ 10 ಕೋಟಿ ರೂಪಾಯಿಗಳು ಬಂದು ತಲುಪಿದೆ.

ಇಷ್ಟು ಹಣ ಯಾರು ಕೊಟ್ಟರೆಂಬುದು ಸ್ಪಷ್ಟವಾಗೇ ಗೊತ್ತಾಗುತ್ತಿದೆ. ಆದರೆ ಯಾಕೆ ಕೊಟ್ಟರೆಂಬ ಪ್ರಶ್ನೆ ಹಾಗೇ ಉಳಿಯುತ್ತದೆ.

ಯಡ್ಡಿಯ ಪ್ರೇರಣಾ ಟ್ರಸ್ಟ್

ಈಗ್ಗೆ ಮೂರ್ನಾಲ್ಕು ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ಶುರುವಾದ 'ಪ್ರೇರಣಾ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್' ಯಡ್ಡಿ ಫ್ಯಾಮಿಲಿಗೆ ಸೇರಿರುವ ಒಂದು ಸಂಸ್ಥೆ. ಶಿವಮೊಗ್ಗದಲ್ಲೇ ಈ ಟ್ರಸ್ಟ್‌ನವರದೊಂದು ಇಂಜಿನಿಯರಿಂಗ್ ಹಾಗೂ ಮ್ಯಾನೇಜ್‌ಮೆಂಟ್ ಕಾಲೇಜೂ ಇದೆ. ಈ ಕಾಲೇಜಿನ ಉದ್ಘಾಟನಾ ಸಮಾರಂಭ ನಡೆದಾಗ ಯಡ್ಡಿ ಆಗ ಉಪಮುಖ್ಯಮಂತ್ರಿಯಾಗಿದ್ದರು. ಅವತ್ತು ಯಡ್ಡಿಯ ಅಕ್ಕಪಕ್ಕ ಡಿ.ಹೆಚ್. ಶಂಕರಮೂರ್ತಿ, ಬೆಂಗಳೂರಿನ ಪಿಇಎಸ್ ಶಿಕ್ಷಣ ಸಂಸ್ಥೆಯ ದೊರೆಸ್ವಾಮಿ ನಾಯ್ಡು, ಸಿದ್ದಗಂಗಾ ಸ್ವಾಮಿಗಳೆಲ್ಲಾ ಇದ್ದರು. ಇದೇ ಪ್ರೇರಣಾ ಟ್ರಸ್ಟ್‌ನವರು ಈಗ ಶಿವಮೊಗ್ಗದಲ್ಲೇ ಒಂದು ಹೈಟೆಕ್ ಆಸ್ಪತ್ರೆಯನ್ನು ನಿರ್ಮಿಸುತ್ತಿದ್ದಾರೆ.

ಯಡ್ಡಿ ರಾಜ್ಯದ ಮುಖ್ಯಮಂತ್ರಿಯಾದ ಮೇಲೆ ಇನ್ನಷ್ಟು ಚುರುಕಾದ ಪ್ರೇರಣಾ ಟ್ರಸ್ಟ್ ಅನೇಕ ಡೀಲ್‌ಗಳಿಗೆ ಕೈಯಿಟ್ಟಿತ್ತು.


ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯಿಂದ 10 ಕೋಟಿ ರೂಪಾಯಿ ಕಿತ್ತ ಡೀಲ್ ಸಹ ಅದರಲ್ಲಿ ಒಂದಾಗಿದೆ.

ಸೌತ್‌ವೆಸ್ಟ್ ಮೈನಿಂಗ್ ಕಂಪೆನಿಯ ಅಕೌಂಟ್ ನಂಬರ್ 64010486365ನಿಂದ 2010ರ ಮಾರ್ಚ್ 17ರಂದು ಅನಾಮತ್ತು 5 ಕೋಟಿ ರೂ.ಗಳು ಮೊದಲ ಕಂತಾಗಿ ಪ್ರೇರಣಾ ಟ್ರಸ್ಟ್‌ಗೆ ವರ್ಗಾವಣೆಯಾಗಿದೆ. ಚೆಕ್ ಸಂಖ್ಯೆ 433038ರ ಮೂಲಕ ಈ ಮೊತ್ತ ಕೈ ಬದಲಾಗಿದೆ.

ನಂತರ ಅದರ ಮಾರನೆಯ ದಿನವೇ ಅಂದರೆ 2010ರ ಮಾರ್ಚ್ 18ರಂದು ಚೆಕ್ ನಂಬರ್ 433037 ಮೂಲಕ ಮತ್ತೆ 5 ಕೋಟಿ ರೂಪಾಯಿಗಳು ಗಣಿ ಕಂಪೆನಿಯಿಂದ ಪ್ರೇರಣಾ ಟ್ರಸ್ಟ್‌ಗೆ ವರ್ಗಾವಣೆಯಾಗಿದೆ!


ಜಿಂದಾಲ್‌ನವರು ಈ 10 ಕೋಟಿ ರೂಪಾಯಿಗಳನ್ನು ಯಡ್ಡಿ ಫ್ಯಾಮಿಲಿಯ ಪ್ರೇರಣಾ ಟ್ರಸ್ಟ್‌ಗೆ ಯಾಕೆ ಕೊಟ್ಟಿರಬಹುದು?

ಅದಿರು ರಫ್ತು ನಿಷೇಧದ ಡೀಲ್



ಕಳೆದ ನಾಲ್ಕಾರು ವರ್ಷಗಳಿಂದ ಕರ್ನಾಟಕದ ರಾಜಕಾರಣದ ಮೇಲೆ ಕರಿನೆರಳನ್ನು ಚಾಚಿರುವ ಬಳ್ಳಾರಿಯ ಗಣಿ ದಂಧೆ ಈಗ ದಶಾವತಾರಗಳನ್ನು ತಾಳುತ್ತಿವೆ. ಅಕ್ರಮ ಗಣಿಗಾರಿಕೆಯ ವಿವಾದ ಈಗ ನಿತ್ಯದ ಸಂಗತಿ. ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ಇನ್ನಷ್ಟು ಹಣಬಲ, ತೋಳ್ಬಲ ಬೆಳೆಸಿಕೊಂಡ ಗಣಿಧಣಿಗಳು ತಮ್ಮ ದಂಧೆ ವಿಸ್ತರಿಸಿಕೊಂಡು, ಲಾಭ ಹೆಚ್ಚಿಸಿಕೊಳ್ಳಲು ಹೊಸ ದಾರಿ ಹುಡುಕತೊಡಗಿದರು.

ಅದಿರು ರಫ್ತು ನಿಷೇಧವೆಂಬ ಹೊಸ ಪಾಲಿಸಿ ಅದರಲ್ಲಿ ಒಂದಾಗಿತ್ತು, ಗಣಿದಂಧೆಕೋರರ ಪೈಕಿ ಎರಡು ಕ್ಯಾಟಗರಿಯ ಜನರಿದ್ದಾರೆ.



Date		Particulars	Vch Type	Vch No.	Debit	Credit
11-8-2010	To	State Bank of Mysore -CC A/c-64010486365 Ch. No. :002419 dt. 30.07.10 Being amount paid to Mr.R.N.Sohan Kumar towards part payment for purchase of 1.00 acre land at Manyata Tech Park,Bangalore as per approval note enclosed	Payment	[illegible]	2,50,00,000.00	
25-8-2010	To	State Bank of Mysore -CC A/c-64010486365 Ch. No. :004369/25.08.10 Being the amount paid to Mr.R N Sohan Kumar towards Part	Payment	[illegible]	1,25,00,000.00	

ಒಂದು ಗುಂಪು ಕಬ್ಬಿಣದ ಅದಿರು ಹೊರತೆಗೆದು ವಿದೇಶಗಳಿಗೆ ರಫ್ತು ಮಾಡಿ ದುಡ್ಡು ಮಾಡಿಕೊಂಡರೆ ಇನ್ನೊಂದು ಗುಂಪು ಅದಿರನ್ನು ಇಲ್ಲೇ ಸಂಸ್ಕರಿಸಿ ಕಬ್ಬಿಣ-ಉಕ್ಕು ತಯಾರಿಸಿ ಹತ್ತು ಪಟ್ಟು ಲಾಭಕ್ಕೆ ಮಾರಿಕೊಳ್ಳುತ್ತಿದ್ದಾರೆ. ಈ ಎರಡನೇ ಕ್ಯಾಟಗರಿಯ ಗಣಿ ದಂಧೆಯವರಿಗೆ ಅದಿರು-ರಫ್ತಾಗುವುದು ಬೇಕಿಲ್ಲ.

ಅಕ್ರಮ ಗಣಿದಂಧೆ ನಿಲ್ಲಿಸುತ್ತೇನೆಂದು ಹೊರಟ ಯಡ್ಡಿ ಅದಿರು ರಫ್ತಿನ ಮೇಲೆ ನಿಷೇಧ ವಿಧಿಸಿದರಲ್ಲ, ಆ ಪಾಲಿಸಿ ಜಾರಿಗೆ ಬಂದಿದ್ದೇ ಈ ಎರಡನೇ ಕ್ಯಟಗರಿಯ ಜನರ ಲಾಭಕ್ಕಾಗಿ, ಒಂದು ಕಡೆ ಅಕ್ರಮ ಸಾಗಾಣಿಕೆ ತಡೆದ ಪೋಜು ಕೊಟ್ಟ ಹಾಗೂ ಆಯಿತು. ಮತ್ತೊಂದೆಡೆ ಸ್ಟೀಲ್ ಕಾರ್ಖಾನೆಗಳನ್ನು ನಡೆಸುತ್ತಿರುವ ಉದ್ಯಮಪತಿಗಳಿಗೆ ಕಚ್ಚಾವಸ್ತು ಸರಬರಾಜನ್ನು ಗ್ಯಾರಂಟಿಗೊಳಿಸಿದಂತೆಯೂ ಆಯಿತು.

ಇದು ಒಂದೇ ಏಟಿಗೆ ಎರಡು ಹಕ್ಕಿ ಹೊಡೆದ ಯಡ್ಡಿಯ ಚಾಣಾಕ್ಷತೆಗೆ ಸಾಕ್ಷಿಯಾಗಿದೆ. ಯಡ್ಡಿಯ ಈ ಹೊಸ ಪಾಲಿಸಿಯ ಹಿಂದೆ ರೆಡ್ಡಿಗಳ ಹಿತಾಸಕ್ತಿಯೂ ಇತ್ತು, ರೆಡ್ಡಿಗಳ ಬ್ರಾಹ್ಮಿಣಿ ಸ್ಟೀಲ್ಸ್ ಕಂಪೆನಿ 20 ಸಾವಿರ ಕೋಟಿ ರೂಪಾಯಿ ಬಂಡವಾಳದೊಂದಿಗೆ ಪಕ್ಕದ ಆಂಧ್ರಪ್ರದೇಶದಲ್ಲಿ ತಲೆಯೆತ್ತಲು ಸಿದ್ಧತೆಗಳಾಗಿದ್ದವು. ಕೆಲ ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಜಾಗತಿಕ ಬಂಡವಾಳ ಗಾರರ ಹೂಡಿಕೆ ಸಮಾವೇಶದಲ್ಲಿ ಕರ್ನಾಟಕದಲ್ಲೊಂದು ಉಕ್ಕಿನ ಕಾರ್ಖಾನೆ ಸ್ಥಾಪಿಸುವ ಯೋಜನೆಯೊಂದನ್ನು ಇದೇ ರೆಡ್ಡಿ ಪ್ರಕಟಿಸಿದ್ದ, ಅಂದರೆ ರೆಡ್ಡಿ ಬಳಿ ಗಣಿಗಾರಿಕೆ ದಂಧೆ ಇತ್ತಾಗಲಿ ಅವನದ್ದೇ ಆಟ ಉಕ್ಕಿನ ಕಾರ್ಖಾನೆ ಇರಲಿಲ್ಲ, ಆದರೆ ಜಿಂದಾಲ್‌ಗೆ ಸ್ವಂತದ ಉಕ್ಕು ಕಾರ್ಖಾನೆ ಆಗಲೇ ಇತ್ತು, ಹಾಗಾಗಿ ಅದಿರು ರಫ್ತು ನಿಷೇಧ ಆದೇಶದಿಂದ ತಕ್ಷಣ ಲಾಭವಾಗಿದ್ದು ಜಿಂದಾಲ್‌ಗೆ.


ಈಗ ಹೊಸ ಅದಿರು ನೀತಿ ಜಾರಿಗೆ ಬಂದಮೇಲೆ ಬಳ್ಳಾರಿಯ ಗಣಿ ದಂಧೆಯವರು ಕಡ್ಡಾಯವಾಗಿ 30ರಿಂದ 40 ಪರ್ಸೆಂಟ್ ಅದಿರನ್ನು ಜಿಂದಾಲ್ ಕಂಪೆನಿಗೆ ಮಾರಬೇಕಾಗಿ ಬಂದಿದೆ. ಜಿಂದಾಲ್ ಅದಿರನ್ನು ರಫ್ತು ಮಾಡದೆ ಸಂಸ್ಕರಿಸಿ ಇಲ್ಲೇ ಉಕ್ಕು ತಯಾರಿಸುತ್ತೇವೆಂದು ಹೇಳುತ್ತಿರುವುದರಿಂದ ಇಲ್ಲಿ ಈಗ ದಂಧೆ ನಡೆಸುವ ಅವಕಾಶವಿರುವುದು ಜಿಂದಾಲ್‌ಗೆ ಮಾತ್ರ.

ಹೀಗೆ ಇಷ್ಟು ಲಾಭ ಮಾಡಿಕೊಟ್ಟ ಯಡ್ಡಿಗೆ ಜಿಂದಾಲ್‌ನವನು ಪ್ರತ್ಯುಪಕಾರ ಮಾಡಬೇಡವೇ?

ಹಾಗಾಗಿ ಯಡ್ಡಿ ಫ್ಯಾಮಿಲಿಯ ಪ್ರೇರಣಾ ಎಜುಕೇಷ[illegible] ಟ್ರಸ್ಟ್‌ಗೆ ಜಿಂದಾಲ್ ಒಡೆತನದ ಸೌತ್‌ವೆಸ್ಟ್ ಮೈನಿ[illegible] ಕಂಪೆನಿಯು ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟ[illegible] ಲಂಚದ ಹಣ ಇದು. ■



ಅಳಿಯ ಸೋಹನ್ ಕುಮಾರ್‌ನೂ ಕಳ್ಳನೆ..!




ಸೌತ್‌ವೆಸ್ಟ್ ಮೈನಿಂಗ್ ಕಂಪನಿಯಿಂದ ದುಡ್ಡು ಕಿತ್ತವರ ಸಾಲಿನಲ್ಲಿ ಯಡ್ಡಿಯ ಅಳಿಯ ಸೋಹನ್ ಕುಮಾರನೂ ಇದ್ದಾನೆ. ಕಳ್ಳತನದಲ್ಲಿ ಪಳಗಿರುವ ಫ್ಯಾಮಿಲಿ ಈ ಸೋಹನ್‌ನದ್ದು, ಇವನಮ್ಮ ವಿನೋದ ನಟರಾಜ್ ಎಂಬ ಬಾಯಿಬಡುಕಿ ವೀರಶೈವ ಮಹಾಸಭಾದ ಪದಾಧಿಕಾರಿಯೂ ಹೌದು. ಬೆಂಗಳೂರಿನಲ್ಲಿ ಮಾನ್ಯಾಟ ಟೆಕ್‌ಪಾರ್ಕ್ ಹೆಸರಿನಲ್ಲಿದ್ದ ಒಂದೂ ಚಿಲ್ಲರೆ ಎಕರೆ ಭೂಮಿಯನ್ನು ಸೌತ್‌ವೆಸ್ಟ್ ಮೈನಿಂಗ್ ಕಂಪನಿಯು ಖರೀದಿಸಿದಂತೆ ನಾಟಕವಾಡಿ 5 ಕೋಟಿ ರೂ. ಗಿಟ್ಟಿಸಿದ್ದಾನೆ ಈ ಸೋಹನ್. ಈ ಮಾನ್ಯಾಟ ಟೆಕ್ ಪಾರ್ಕ್ ಸೋಹನ್‌ನದ್ದು, ಈ ಭೂಮಿ ಖರೀದಿ ಬಾಬ್ತು ದಿನಾಂಕ 11.8.2010 ರಂದು 2.5 ಕೋಟಿ, 25.8.2010 ರಲ್ಲಿ 1.25 ಕೋಟಿ ಹಾಗೂ 31.8.2010 ರಂದು ಮತ್ತೆ 1.25 ಕೋಟಿ ರೂಪಾಯಿಗಳನ್ನು ಸೌತ್‌ವೆಸ್ಟ್ ಕಂಪನಿಯು ಸೋಹನ್‌ಗೆ ಕೊಟ್ಟಿದೆ.

ರಾಘವೇಂದ್ರನಿಗೆ ಕೊಟ್ಟಿದ್ದು ಲ್ಯಾಂಡ್ ದುಡ್ಡು. ಆದರೆ ಪ್ರೇರಣಾ ಟ್ರಸ್ಟ್‌ಗೆ ಕೊಟ್ಟಿದ್ದು ಯಾವ ದುಡ್ಡು?


ಯಡ್ಡಿಯ ಸುಪುತ್ರ ಸಂಸದ ರಾಘವೇಂದ್ರನಿಗೂ ಇದೇ ಸೌತ್‌ವೆಸ್ಟ್ ಮೈನಿಂಗ್ ಕಂಪನಿಯವರು ಹತ್ತು ಕೋಟಿ ರೂಪಾಯಿಗಳಿಗೂ ಅಧಿಕ ಹಣವನ್ನು ಕೊಟ್ಟಿರುವ ದಾಖಲೆಗಳು ಬಹಿರಂಗವಾಗಿದೆ.

2010 ರ ಆಗಸ್ಟ್ 11 ರಂದು 5 ಕೋಟಿ ರೂ. (ಚಲನ್ ನಂಬರ್ 002418) ಆಗಸ್ಟ್ 25 ರಂದು ಎರಡೂವರೆ ಕೋಟಿ ರೂ. (ಚಲನ್ ನಂಬರ್ 004367125) ಮತ್ತೆ ಆಗಸ್ಟ್ 31 ರಂದು ಎರಡೂವರೆ ಕೋಟಿ ರೂ. (ಚಲನ್ ಸಂಖ್ಯೆ 004442) ಹೀಗೆ ಒಟ್ಟು 10 ಕೋಟಿ ರೂಪಾಯಿಗಳು ಗಣಿ ಕಂಪನಿಯಿಂದ ರಾಘವೇಂದ್ರನಿಗೆ ವರ್ಗಾವಣೆಯಾಗಿತ್ತು, ಈ ಹಗರಣ ಬಯಲಿಗೆ ಬಂದಾಗ 'ಅದು ನಮಗೆ ಸೇರಿದ್ದ ಭೂಮಿ ಮಾರಾಟ ಮಾಡಿದ್ದ ಬಾಬ್ತಿನ ಹಣ' ಎಂದು ಯಡ್ಡಿ ಬಾಯಿಬಡಿದುಕೊಂಡಿದ್ದ.

ಅದು ನಿಜವೇ ಎಂದುಕೊಂಡರು ರಾಘವೇಂದ್ರನ ಸೌತ್‌ವೆಸ್ಟ್ ಕಂಪನಿಗೆ ಮಾರಿಕೊಂಡ ಆ ಭೂಮಿ ರಾಘವೇಂದ್ರನಿಗೆ ಹೇಗೆ ಬಂತು ಎನ್ನುವ ಪ್ರಶ್ನೆಗೆ ಯಡ್ಡಿ ಉತ್ತರ ಕೊಟ್ಟಿರಲಿಲ್ಲ, ಆದರೆ ಈಗ ಯಡ್ಡಿ ಫ್ಯಾಮಿಲಿಯ ಪ್ರೇರಣಾ ಟ್ರಸ್ಟ್‌ಗೆ ಅದೇ ಸೌತ್‌ವೆಸ್ಟ್ ಮೈನಿಂಗ್ ಕಂಪನಿ 10 ಕೋಟಿ ರೂಪಾಯಿ ಕೊಟ್ಟಿದೆ. ಇದು ಯಾವ ಡೀಲ್‌ನ ಬಾಬತ್ತೆಂದು ಈ ಕಳ್ಳರು ಹೇಳುವರೆ?


AS PER OUR REPORT OF EVEN DATE
FOR CHANDRASHEKAR KOTE & CO.
CHARTERED ACCOUNTANTS
PLACE: BANGALORE
FOR AND ON BEHALF OF BOARD
TEJASWINI R
DIRECTOR

ಆದರ್ಶ ದುಡ್ಡಿಗೆ ಮುಖ್ಯಮಂತ್ರಿಯ ಲೆಕ್ಕ


State Bank of Mysore
2 JUN 2006

DEED OF PARTNERSHIP

THIS DEED OF PARTNERSHIP IS MADE AND EXECUTED ON 2ND DAY OF JUNE TWO THOUSAND SIX BY AND BETWEEN:-

1. B.M.JAYESHANKAR, aged about 50 years, son of Late Shir. B.M Madaiah residing at No 245.B-6, 18th Cross, Upper Palace Orchids, Sadashivnagar, Bangalore-560 080, hereinafter called the FIRST PARTY;
2. SUDHA SHANKER aged about 46 years, wife of B.M.Jayashankar residing at No 245.B-6, 18th Cross, Upper Palace Orchids, Sadashivanagar, and Bangalore-560 080 hereinafter called the SECOND PARTY;
3. B.M.KARUNESH aged about 47 years, Late Shir B.M.Madaiah residing at No.607, 15th Cross, 6th Phase, J.P.Nagar, Bangalore-560 078, hereinafter called the THIRD PARTY;
4. DAVALAGIRI PROPERTY DEVELOPERS PVT LTD, A Company incorporated under the Companies Act 1956 Having its Registered office at 2914 ... Magadi Chord Road, Vijaynagar 2nd Stage, Bangalore-560 040 Represented by its Director MR. R.N.SOHAN KUMAR hereinafter called the FOURTH PARTY;

ಪಾರ್ಟನರ್‌ಶಿಪ್ ಕರಾರಿನಲ್ಲಿ ಸಿಎಂ ಅಳಿಯ ಸೋಹನ್‌ನ ಸಹಿ


▶▶ 10

ಶೋಭಾ ಕರಂದ್ಲಾಜೆಗೆ 3.5 ಕೋಟಿಯಷ್ಟು ರೊಕ್ಕ ಕೊಡುತ್ತಾನೆ. ಇನ್ನೂ ಅಚ್ಚರಿಯೆಂದರೆ ಜೈ ಶಂಕರ್ ಕುಮಾರ್‌ಕೃಪಾ ಗೆಸ್ಟ್‌ಹೌಸ್ ಪಕ್ಕ ಮಾಧವನಗರದಲ್ಲಿ ಹೊಂದಿದ್ದ 4 ಕೋಟಿ ರೂಪಾಯಿ ಬೆಲೆಬಾಳುವ ಬೃಹತ್ ಬಂಗಲೆಯನ್ನು ಯಡ್ಡಿ ಕುಟುಂಬದ ಧವಳಗಿರಿ ಪ್ರಾಪರ್ಟೀಸ್ ಕಂಪೆನಿಗೆ ಕೇವಲ 95 ಲಕ್ಷದ ಬೆಲೆ ನಮೂದಿಸಿ ಮಾರುತ್ತಾನೆ.

ಇಲ್ಲಿ ಧವಳಗಿರಿ ಪ್ರಾಪರ್ಟೀಸ್ ಕಂಪೆನಿ ನಿಜಕ್ಕೂ ಜೈ ಶಂಕರ್‌ಗೆ 95 ಲಕ್ಷವನ್ನು ಪಾವತಿಸಿತೆ ಅಥವಾ ಆ ರೀತಿ ದಾಖಲೆ ಸೃಷ್ಟಿಸಲಾಯಿತೆ ಎಂಬುದಷ್ಟೇ ಪ್ರಶ್ನೆಯಾಗಿ ನಿಲ್ಲುತ್ತದೆ. ನಾಲ್ಕು ಕೋಟಿಯ ಬೆಂಗಳೂರು ನಟ್ಟನಡುವಿನ ಬಂಗಲೆಯನ್ನು ಕೇವಲ 95 ಲಕ್ಷಕ್ಕೆ ಜೈಶಂಕರ್ ಏಕೆ ಯಡ್ಡಿ ಮಕ್ಕಳಿಗೆ ಕೊಡುತ್ತಾನೆ? ಶೋಭಾ ಕರಂದ್ಲಾಜೆಗೆ ವಿನಾಕಾರಣ ಮೂರೂವರೆ ಕೋಟಿಯಷ್ಟು ಸಾಲ ಕೊಡಲು ಆತನಿಗೇನು ಹುಚ್ಚಾ?

ಹಕೀಕತ್ತೇನೆಂದರೆ ಆದರ್ಶ ಡೆವಲಪರ್ಸ್‌ನಿಂದ ಇಷ್ಟೆಲ್ಲ ಅನುಕೂಲ(!) ಮಾಡಿಕೊಂಡ ಯಡ್ಡಿ ಅದಕ್ಕೆ ಪ್ರತಿಯಾಗಿ ಹೇಗೆ ಜೈಶಂಕರ್‌ನ ಋಣ ತೀರಿಸಿದ್ದಾರೆಂಬುದೇ ಮುಖ್ಯಮಂತ್ರಿ ಕುರ್ಚಿಗೆ ಕುತ್ತಾಗಿ ಪರಿಣಮಿಸಿದ್ದು...

2008ರ ನವೆಂಬರ್ 19ರಂದು ಮುಖ್ಯಮಂತ್ರಿಯ ಅಧ್ಯಕ್ಷತೆಯಲ್ಲೇ ನಡೆದ 16ನೇ ರಾಜ್ಯ ಹೈಲೆವೆಲ್ ಕ್ಲಿಯರೆನ್ಸ್ ಕಮಿಟಿಯಲ್ಲಿ ಆದರ್ಶ್ ಡೆವಲಪರ್ಸ್‌ಗೆಂದು ದೇವನಹಳ್ಳಿ ಏರ್‌ಪೋರ್ಟ್‌ಗೆ ಕೇವಲ 2 ಕಿ.ಮೀ ಸಮೀಪದ


DETAILS OF ORNAMENTS:
1. Gold ornaments : 450 gms. of gift items & 300 gms. of gold ornaments.
10. SCHEDULE SHOWING ANNUAL INCOME:
1. Income from Agriculture : Rs. 3,25,550.00
2. Income from House property : Rs. 5,00,000.00
3. Salary as Legislative Member : Rs. 2,33,910.00
4. Bank Interest Receipts : Rs. 26,354.00
5. DETAILS OF OTHER LIABILITIES:
1. Adarsha Developers (Rent Advance) : Rs. 45,00,000.00
2. Raghavendra B.Y. : Rs. 12,00,000.00
Place: Bangalore
Date: 25/06/2007
(B.S. Yediyurappa)
True Copy

ಭಗತ್‌ಹೋಮ್ ಲೆಕ್ಕ ಪತ್ರದಲ್ಲಿ ಜೈ ಶಂಕರ್ ರೊಕ್ಕದ ದಾಖಲೆ

ಬಂಡಿಕೊಡಿಗೆಹಳ್ಳಿ-ಸಿಂಗಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಯ ವತಿಯಿಂದ ಎಲೆಕ್ಟ್ರಾನಿಕ್ ಹಾರ್ಡ್‌ವೇರ್ ಪಾರ್ಕ್, ಸಾಫ್ಟ್‌ವೇರ್ ಪಾರ್ಕ್ ಮತ್ತು ಜ್ಯುವೆಲ್ಲರಿ ಪಾರ್ಕ್‌ಗೆಂದು ಒಟ್ಟು 28 ಎಕರೆ ರೈತರ ಜಮೀನನ್ನು ಯಡ್ಡಿ ಮಂಜೂರು ಮಾಡುತ್ತಾರೆ.




ಸಾಕ್ಷ್ಯಾಧಾರಗಳೇ ಸಾಕು

ಇದಕ್ಕೂ ಮುನ್ನ ಉಪಮುಖ್ಯಮಂತ್ರಿಯಾಗಿದ್ದಾಗ ಅಂದರೆ 2006ರ ಆಗಸ್ಟ್ 11ರಂದು ಪಂಚತಾರಾ ಹೋಟೆಲ್ ನಿರ್ಮಾಣಕ್ಕಾಗಿ ಕೆ.ಆರ್.ಪುರಂ ಹೋಬಳಿಯ ವೈಟ್‌ಫೀಲ್ಡ್‌ಗೆ ಹೊಂದಿಕೊಂಡಂತೆ ಸೊಣ್ಣೇನಹಳ್ಳಿಯಲ್ಲಿ 17.5 ಎಕರೆ ಕೆಐಎಡಿಬಿಯ ಜಾಗವನ್ನು ಯಡ್ಡಿಯೇ ನಿಂತು ಕೊಡಿಸಿದ್ದರು. ಮುಖ್ಯಮಂತ್ರಿಯಾದ ಮೇಲೆ ಇದೇ ಭೂಮಿಯನ್ನು ಕೈಗಾರಿಕಾ ಉದ್ದೇಶದಿಂದ ಡೀನೋಟಿಫೈ ಕೂಡಾ ಮಾಡಿಕೊಟ್ಟರು.

ಶಿವಮೊಗ್ಗ ಸಮೀಪದ ಮುಂಚೇನಹಳ್ಳಿಯಲ್ಲಿ ಆದರ್ಶ ಡೆವಲಪರ್ಸ್‌ಗೆಂದು ಐಟಿ ಪಾರ್ಕ್ ಮತ್ತೆ 25 ಎಕರೆ ಭೂಮಿ ಮಂಜೂರು ಮ... ಕೋರಮಂಗಲ ಲಿಂಕ್ ರಸ್ತೆಯ ದೇವರ ಬಿಸನಹ... ಮತ್ತೆ ಐಟಿ ಪಾರ್ಕ್ ಹೆಸರಲ್ಲಿ 6 ಎಕರೆ ಕೊಟ್ಟಿದ್ದ... ಶಂಕರ್‌ನ ಭೂಕಬಳಿಕೆಗೆ ಅನುಕೂಲವಾಗಲೆಂದೇ ... ಹಳ್ಳಿ, ದೊಡ್ಡ ಕನ್ನಹಳ್ಳಿ ಮತ್ತು ಕನ್ನಮಂಗಲದಲ್ಲಿ ... ವಸತಿ ಉದ್ದೇಶಕ್ಕೆಂದು ಮೀಸಲಿಟ್ಟಿದ್ದ ಭೂಮಿ... ಡೀನೋಟಿಫೈ ಮಾಡಿದ್ದು; ಇತ್ಯಾದಿ ಜೈಶಂಕರ್‌ನ ... ದಂಧೆಗೆ ಪೂರಕವಾಗೇ ಯಡ್ಡಿ ಕೈ ಚಳಕ ಮೆರೆ... ಆಕರ್ಷ್ ಪ್ರಾಪರ್ಟೀಸ್‌ನ ಪಾಲುದಾರಿಕೆ ಒ... ಧವಳಗಿರಿ ಪ್ರಾಪರ್ಟೀಸ್ ಪರವಾಗಿ ಮುಖ್ಯಮಂತ್ರಿ ... ಸೋಹನ್‌ಕುಮಾರನೇ ಸಹಿ ಹಾಕಿದ್ದ. ಮುಖ್ಯಮ... ಭಗತ್ ಹೋಮ್ಸ್‌ಗೆಂದು ಆದರ್ಶ್ ಡೆವಲಪ... ಸಂದಾಯವಾಗಿದ್ದ 92 ಲಕ್ಷ ರೂಪಾಯಿಯ ... ಇದೇ ಸೋಹನ್‌ಕುಮಾರ್‌ನ ಸಹಿಯಿತ್ತು. ಜೈಶಂಕ... 3.5 ಕೋಟಿ ರೂಪಾಯಿ ಸಾಲ ಪಡೆದ ಬಗ್ಗೆ ಕರಂದ್ಲಾ... ಲೋಕಾಯುಕ್ತಕ್ಕೆ ಪ್ರಮಾಣ ಪತ್ರದಲ್ಲಿ ನಮೂದಿ... ಕುಮಾರ್ ಪಾರ್ಕ್ ಬಡಾವಣೆಯಲ್ಲಿ ನಾಲ್ಕು ಕೋ... ಸೊತ್ತನ್ನು ಯಡ್ಡಿ ಮಕ್ಕಳ ಕಂಪೆನಿಗೆ ಜೈ... ವರ್ಗಾಯಿಸಿದ್ದಕ್ಕೂ ದಾಖಲೆಗಳಿವೆ. ಕೆಐಎಡಿಬಿ... ಆದರ್ಶ್ ಡೆವಲಪರ್ಸ್‌ಗೆ ಮಂಜೂರಾದ ಭೂ... ಯಡ್ಡಿಯೇ ಸಹಿ ಹಾಕಿದ್ದಾರೆ. ಜೈಶಂಕರ್‌ಗಾಗಿ ... ತನ್ನ ವಸತಿ ಯೋಜನೆಯನ್ನೇ ಬದಲಾಯಿಸಿ... ದಾಖಲೆಯಿದೆ.

ಹೀಗಿದ್ದೂ ವಿರೋಧ ಪಕ್ಷಗಳು ತನ್ನ ವಿಳಿಗೆ ಸ... ಕುತಂತ್ರ ನಡೆಸುತ್ತಿದ್ದಾರೆ ಎನ್ನುವ ಯಡ್ಡಿಗಾಗಲಿ, ಮಂಜ... ಸ್ವಾಮಿಯ ಮೇಲೆ ಪ್ರಮಾಣ ಮಾಡ್ತೀನಿ ... ಕರಂದ್ಲಾಜೆಗಾಗಲಿ; ತಮ್ಮನ್ನು ಕಂಡು ನಾಡಿಗೆ ನಾಡೇ... ಹಾಕುತ್ತಿದೆಯೆಂಬುದು ಹೇಗೆ ಅರ್ಥವಾಗಬೇಕು.

ಹುಬ್ಬಳ್ಳಿ: ರೌಡಿ ಶಿವು ಅಬ್ಬರ ಪೊಲೀಸರೇ ತತ್ತರ!


ಶಿವು

ಪೊಲೀಸು ಮಂದಿಯೇ ಮಾಫಿಯಾಗಳೊಂದಿಗೆ, ರೌಡಿಗಳೊಂದಿಗೆ ಕೂಡಿಕೆ ನಡೆಸಿದರೆ ಅರಾಜಕತೆಯ ಕೂಸು ಹುಟ್ಟುವುದು ಖಚಿತ. ಹಾಗೆ ಹುಟ್ಟಿದ ನೂರಾರು ಕೂಸುಗಳೀಗ ಹುಬ್ಬಳ್ಳಿಯ ನೆಮ್ಮದಿಯ ಬದುಕಿನ ಕತ್ತು ಹಿಸುಕಲಾರಂಭಿಸಿವೆ. ಸದ್ಯ ಇಂಥ ಸಮಾಜಘಾತುಕರ ಸಾಲಿನಲ್ಲಿ ರೌಡಿ ಶಿವು ಪ್ರಮುಖವಾಗಿ ಅಬ್ಬರಿಸುತ್ತಿದ್ದಾನೆ. ಈತನ ಅಂಡಿಗೊದ್ದು ಜೈಲಿಗೆ ದಬ್ಬಬೇಕಿದ್ದ ಪೊಲೀಸು ಮಂದಿ ತತ್ತರಿಸಿ ಬ್ಬೆಬ್ಬೆಬ್ಬೆ ಅನ್ನ ಹತ್ತಿದ್ದಾರೆ!

ಹುಬ್ಬಳ್ಳಿ ತುಂಬಾ ಗ್ಯಾಂಗು ಕಟ್ಟಿಕೊಂಡು ದಾಂಧಲೆ ಯೆಬ್ಬಿಸಲು ಶುರುವಿಟ್ಟಿರುವ ಶಿವಕುಮಾರ್ ಅಲಿಯಾಸ್ ಶಿವು ಜನರಿಗಿರಲಿ ಪೊಲೀಸರಿಗೂ ಕೇರ್ ಮಾಡುತ್ತಿಲ್ಲ. ಇದೇ ನವೆಂಬರ್ ಹದಿನೈದರಂದು ನಡೆದ ಘಟನೆಯೊಂದು ಮೇಲ್ಕಂಡ ವಿಚಾರವನ್ನು ಸಾಬೀತುಪಡಿಸಿದೆ. ಜೊತೆಗೆ ಹುಬ್ಬಳ್ಳಿ ಪೊಲೀಸರು ಅಮೇಧ್ಯದ ನಡುವೆ ಹೊರಳಾಡುತ್ತ ಅದ್ಯಾವ ರೀತಿ ನೈತಿಕತೆ ಕಳೆದುಕೊಂಡಿದ್ದಾರೆಂಬುದನ್ನು ಜಾಹೀರಾಗಿಸಿದೆ.

ಅಂದು ರೌಡಿ ಶಿವು ತನ್ನ ಹಳೇ ಸ್ನೇಹಿತ ಹಾಗೂ ರಿಯಲ್ ಎಸ್ಟೇಟ್ ದಂಧೆಕೋರ ಗಿರೀಶ ಎಂಬಾತನನ್ನು ಮುಗಿಸಲು ಸ್ಕೆಚ್ಚು ಹಾಕಿದ್ದ. ಲ್ಯಾಂಡ್ ಡೀಲಿಂಗ್ ಒಂದಕ್ಕೆ ಸಂಬಂಧಿಸಿದಂತೆ ಉಂಟಾದ ಹರಾಕಿರಿ ಇದಕ್ಕೆ ಪ್ರಮುಖ ಕಾರಣ. ಈ ಕೊಲೆ ಸ್ಕೆಚ್ಚಿಗೆ ಅತಿಥಿ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ಫಿಕ್ಸ್ ಮಾಡಿದ ಗಿರೀಶ ತನ್ನ ಗ್ಯಾಂಗನ್ನು ರೇವಣಕರ ಕಲ್ಯಾಣಮಂಟಪದ ಮುಂದೆ ನಿಲ್ಲಿಸಿ ಗಿರೀಶನಿಗೆ ಫೋನಾಯಿಸಿದ್ದಾನೆ. ಲ್ಯಾಂಡ್‌ಗೆ ಸಂಬಂಧಿಸಿದ ಹರಾಕಿರಿಯನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳೋಣವೆಂದು ಪುಸಲಾಯಿಸಿ ಒಪ್ಪಿಸಿದ್ದಾನೆ. ನಂತರ ಅತಿಥಿ ರೆಸ್ಟೋರೆಂಟ್ ಹೊಕ್ಕು ಗುಂಡಿನ ಸಮಾರಾಧನೆ ಶುರು ಹಚ್ಚಿಕೊಂಡಿದ್ದಾರೆ.


ಚಾಂದಿರಾಂ ಸಿಂಗ್



ಗಿರೀಶನೂ ಒಂದಷ್ಟು ಫೀಲ್ಡು ಕಂಡವನು. ಶಿವು ಆಹ್ವಾನದ ಹಿಂದಿದ್ದ ಅಪಾಯದ ವಾಸನೆ ಗ್ರಹಿಸಿದ ಆತ ಜೊತೆಗೊಂದಷ್ಟು ಹುಡುಗರನ್ನಿಟ್ಟುಕೊಂಡೇ ಬಂದಿದ್ದ. ನಂತರ ಗಿರೀಶ ಹಾಗೂ ಶಿವು ನಡುವೆ ಮಾತುಕತೆ ಶುರುವಾಗಿದೆ. ಆದರೆ ಹೊರಗಡೆ ಬೀಟ್ ಹಾಕುತ್ತಿದ್ದರಲ್ಲಾ ಗಿರೀಶನ ಹುಡುಗರು? ಅವರ ಕಣ್ಣಿಗೆ ಶಿವು ಗ್ಯಾಂಗ್ ಬಿದ್ದಿದೆ. ಇಲ್ಲೊಂದು ವಾರ್ ನಡೆಯೋದು ಖರೆ ಅಂತ ಗೊತ್ತಾಗುತ್ತಲೇ ಗಿರೀಶನ ಕಡೆಯ ಹುಡುಗರು ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದಾರೆ.



ಸುದ್ದಿ ತಿಳಿದು ಸ್ವತಃ ಡಿಸಿಪಿ ಚಾಂಧಿ ರಾಮ ಸಿಂಗ್ ಹಾಗೂ ಎಸಿಪಿ ಎನ್.ಎಸ್. ಪಾಟೀಲರು ಖಾಕಿ ಪಡೆಯೊಂದಿಗೆ ಅತಿಥಿ ರೆಸ್ಟೋರೆಂಟ್‌ಗೆ ದೌಡಾಯಿಸಿದರು. ಆದಾಗಲೇ ಗಿರೀಶನ ಕಡೆಯ ಹುಡುಗರು ಕಾಲ್ಕಿತ್ತಿದ್ದರು. ಗಿರೀಶನೂ ತಪ್ಪಿಸಿಕೊಳ್ಳಲೆತ್ನಿಸಿ ದನಾದರೂ ತಗುಲಿಕೊಂಡ. ಆದರೆ ಚಿತ್ತಾಗಿದ್ದ ಶಿವು ಗಲಾಟೆ ಶುರುಹಚ್ಚಿಕೊಂಡು ಕೈಗೆ ಸಿಕ್ಕಿದ್ದನ್ನೆಲ್ಲ ಎಸೆಯಲಾರಂಭಿಸಿದ. ಅಂತೂ ಪೊಲೀಸು ಪಡೆ ಆತನನ್ನು ಹರಸಾಹಸ ಪಟ್ಟು ಜೈಲಿಗೆ ತುಂಬಿತು.



ಸುದ್ದಿ ತಿಳಿದದ್ದೇ ಪತ್ರಕರ್ತರೊಂದಷ್ಟು ಮಂದಿ ಠಾಣೇಲಿ ಜಮಾಯಿಸಿದರು. ಆದಾಗಲೇ ಬೋನಿಗೆ ಬಿದ್ದ ಕರಡಿಯಂತಾಗಿದ್ದ ಶಿವು, ಚಾಂದಿರಾಮ ಸಿಂಗ್ ಹಾಗೂ ಪಾಟೀಲರಿಗೇ ಅವಾಚ್ಯವಾಗಿ ಬೈಯಲು ಶುರುವಿಟ್ಟಿದ್ದ. 'ಬೋಳೀ ಮಕ್ಳ ಪ್ರತೀ ತಿಂಗ್ಳು ಬಂದು ಮಾಮೂಲಿ ತಗಂಡೋಕ್ತೀರಿ, ಈಗ ನನ್ನನ್ನೇ ಒಳಗಾಕಿದಿರಾ ನಾಯಿಗಳ....' ಇವು ರೌಡಿ ಶಿವು ಪತ್ರಕರ್ತರೆದುರೇ ಪೊಲೀಸು ಅಧಿಕಾರಿಗಳಿಗೆ ಬೆವರಿಳಿಸಿದ ಪರಿ. ಇನ್ನೂ ಮುಂದುವರಿದ ಶಿವು ಪಕ್ಕದಲ್ಲೇ ನಿಂತಿದ್ದ ಪಾಪದ ಪೇದೆಯೊಬ್ಬರ ಕೈ ಕಚ್ಚಿ ಆಕ್ರೋಶ ಇಳಿಸಿಕೊಂಡ! ಹೂವಿನ ಕುಂಡಗಳನ್ನ ಎತ್ತೆತ್ತಿ ಎಸೆದ.

ಖಡಕ್ ಅಧಿಕಾರಿಗಳಾಗಿದ್ದರೆ, ಯಾವುದೇ ಮುಲಾಜುಗಳಿಲ್ಲದಿದ್ದರೆ ಖಂಡಿತವಾಗಿಯೂ ರೌಡಿ ಶಿವುನ ಮೂಳೆ ಎಣಿಸುವ ಸೀನು ಸರಿಯುತ್ತಿತ್ತು. ಆದರೆ ಅಧಿಕಾರಿಗಳೂ ಸೇರಿದಂತೆ ಇಡೀ ಪೊಲೀಸು ಪಡೆ ಶಿವುನ ದಾಂಧಲೆ ಕಂಡು ತತ್ತರಿಸಿ ಖಿಮಕ್ ಖಿಮಕ್ ಅನ್ನದೆ ಸೈಲೆಂಟಾಗಿ ನಿಂತಿತ್ತು. ಇದು ಶಿವು ಹೇಳಿದ್ದರಲ್ಲಿ ಸತ್ಯಾಂಶವಿದೆ ಎಂಬುದನ್ನು ಸಾರಿ ಸಾರಿ ಹೇಳುವಂತಿದೆ.

ಅಷ್ಟಕ್ಕೂ ಹುಬ್ಬಳ್ಳಿ ಖಾಕಿ ಜಗತ್ತಿನ ಇತಿಹಾಸವೇ ಅಂತಹುವಿದೆ. ಈ ಭ್ರಷ್ಟರು ಭೂಮಾಫಿಯಾ, ಬಡ್ಡಿ, ರಿಯಲ್ ಎಸ್ಟೇಟ್, ಇಸ್ಪೀಟ್, ಮಟ್ಕಾ ಮುಂತಾದ ದಂಧೆ ನಡೆಸುವ ಕುಳಗಳಿಗೆ ದೊಗ್ಗು ಸಲಾಮು ಹೊಡೆಯುತ್ತಲೇ ಬಂದಿದ್ದಾರೆ. ರೌಡಿಗಳ ಕಪ್ಪಕ್ಕೂ ನಾಲಿಗೆ ಚಾಚುತ್ತಿದ್ದಾರೆ. ಅಂಥ ಹೊಲಸನ್ನೇ ಹೊಟ್ಟೆ ತುಂಬಿಸಿಕೊಂಡಿರುವವರಿಗೆ ಶಿವುನಂಥ ರೌಡಿಗಳ ಅಬ್ಬರ ಅದು ಹೇಗೆ ಆಕ್ರೋಶ ಹುಟ್ಟಿಸೀತು? ಈ ಘಟನೆ ನಡೆಯುವುದಕ್ಕೆ ಒಂದು ವಾರದ ಮೊದಲು ಇದೇ ಶಿವು ಲಾಂಗು ಮಚ್ಚುಗಳೊಂದಿಗೆ ಅಬ್ಬರಿಸಿದ್ದ. ಹುಬ್ಬಳ್ಳಿಯ ಗದಗ ರಸ್ತೆಯಲ್ಲಿ ಮಾಜಿ ಕಾರ್ಪೊರೇಟರ್ ದೊರೆರಾಜ್ ಮಣಿಕುಂಟ್ಲ ಎಂಬ ರಿಯಲ್ ಎಸ್ಟೇಟ್ ದಂಧೆಕೋರನೊಂದಿಗೆ ಹಾಕ್ಯಾಟ ಶುರುವಿಟ್ಟ ಶಿವು ಭಯಂಕರ ಕದನ ನಡೆಸಿದ್ದ. ಈ ವಿಚಾರ ಪೊಲೀಸರ ಕಿವಿ ತಲುಪಿದರೂ ಅವರು ತಲೆ ಕೆಡಿಸಿಕೊಳ್ಳಲಿಲ್ಲ. ಅಂದೇ ಈ ಇಬ್ಬರನ್ನು ಎಳೆದೊಯ್ದು ಬುಡಕ್ಕೊದಿದ್ದರೆ ಮತ್ತೆ ಅಂತಹುದೇ ಘಟನೆ ನಡೆಯುತ್ತಿರಲಿಲ್ಲ.

ಈ ರೀತಿ ಪೊಲೀಸ್ ಇಲಾಖೆಯನ್ನೇ ಪಡೋಟಿಯಲ್ಲಿಟ್ಟುಕೊಳ್ಳುವಷ್ಟು ಬೆಳೆದಿರುವ ಈ ಶಿವಕುಮಾರನ ಹಿನ್ನೆಲೆಯ ವಿಚಾರಕ್ಕೆ ಬಂದರೆ ಈತ ಸಭ್ಯರೊಬ್ಬರ ಮಗ. ರೈಲ್ವೆ ಇಲಾಖೆಯಲ್ಲಿ ನೌಕರರಾಗಿದ್ದುಕೊಂಡು ಹಲವು ಸಂಘ ಸಂಸ್ಥೆಗಳೊಡಗೂಡಿ ಅನ್ಯಾಯದ ವಿರುದ್ಧ ದನಿಯೆತ್ತುತ್ತಿದ್ದ ಬಾಲಸುಬ್ರಮಣ್ಯರ ಮಗ ಶಿವು. ಕಾರ್ಮಿಕರ ದನಿಯಂತಿದ್ದ ಬಾಲಸುಬ್ರಮಣ್ಯ ಅದಕ್ಕಾಗಿ ಎಂಥಾ ತ್ಯಾ... ಸಿದ್ಧರಿದ್ದ ಮಹಾನುಭಾವ.

ಆದರೆ ಶಿವು ಅಪ್ಪನ ಹಾದಿಗೆ ವಿರುದ್ಧ ದಿಕ್ಕಿನ... ನಡೆಯತೊಡಗಿದ. ಈತ ಮೊದಲು ಕಾಂಗ್ರೆಸ್‌ನ ... ನಾಯಕ ಕಮ್ ರೌಡಿ ಸುದರ್ಶನ ಶೆಟ್ಟಿಯ ಸಂಪ... ಬಂದು ಗೆಳೆತನ ಸಾಧಿಸಿದ ಮತ್ತು ಅದರಿಂದಲೇ ಹಾದಿ... ಶೆಟ್ಟಿಯಿಂದಲೇ ರೌಡಿಸಂ ಅನ್ನು ಆವಾಹಿಸಿಕೊಂಡ ಬಹುಬೇಗನೆ ಗ್ಯಾಂಗೊಂದನ್ನು ಕಟ್ಟಿಕೊಂಡ. ತನ್ನ ... ನಿವೃತ್ತಿ ಹೊಂದಿದ ನಂತರ ಬಂದ ಹಣವನ್ನು ಕಿತ್ತುಕೊ... ರಿಯಲ್ ಎಸ್ಟೇಟ್‌ಗೆ ಹಾಗೂ ಬಡ್ಡಿಗೆ ಬಿಡತೊ... ಎಸ್.ಕೆ. ರಿಯಲ್ ಎಸ್ಟೇಟ್ ಹೆಸರಿನ ಅಂಗಡಿಯೊ... ತೆರೆದ. ಅದರಿಂದಲೇ ರೌಡಿಸಂನಲ್ಲಿ ಬೇರಿಳಿಸಿಕೊಂಡ... ಸಾಕಷ್ಟು ಹಣವನ್ನೂ ಮಾಡಿಕೊಂಡ. ಇಂಥಾ ಮಹಾನು... ಸದ್ಯ ಹುಬ್ಬಳ್ಳಿ ಧಾರವಾಡ ಡಿಎಸ್‌ಎಸ್‌ನ ಸಂಚ... ನಾಗಿದ್ದಾನೆ! ತನ್ನ ಹಿಂದೆಮುಂದೆ ನಾಲ್ಕಾರು ... ಅಡ್ಡಾಡುತ್ತಲೇ ರಾಜಕೀಯದ ಪಿತ್ಥ ಹತ್ತಿಸಿಕೊಂಡ ... ಕಳೆದ ಬಾರಿ ಮಹಾನಗರ ಪಾಲಿಕೆಗೆ ನಡೆದ ಚುನಾವಣೆ... ಬಿಎಸ್‌ಪಿಯಿಂದ ಸ್ಪರ್ಧಿಸಿದ್ದ. ಸೋಲು ಖಚಿತವಾದಂ... ತನ್ನ ಪಟಾಲಂಗೆ ಮತಗಟ್ಟೆಗಳಿಗೆ ನುಗ್ಗಿ ಮತಪತ್ರ... ಎಗರಿಸಿದ್ದ. ಈ ಪ್ರಕರಣದಲ್ಲಿ ಜೈಲನ್ನೂ ಕಂಡಿದ್ದ.


ಇಂಥಾ ಅನಾಹುತಕಾರಿಯನ್ನು ಮೊದಲೇ ಬೆನ್ನಟ್ಟ... ಕೆಲಸವನ್ನು ಪೊಲೀಸರು ಮಾಡಬೇಕಿತ್ತು. ಈ ಬಗ್ಗೆ ... ಹರಿಸದ ಪರಿಣಾಮವಾಗಿಯೇ ಶಿವು ಯಾರನ್ನು ... ಮಾಡದೆ ಅಬ್ಬರಿಸಹತ್ತಿದ್ದಾನೆ. ಮಕಮೂತಿ ತ... ಉಗಿಸಿಕೊಂಡು ತತ್ತರಿಸುವ ದೈನೇಸಿ ಸ್ಥಿತಿ ಪೊಲೀಸರದು...

ಹುಬ್ಬಳ್ಳಿ ಪೊಲೀಸರ ಈ ಷಂಡತನಕ್ಕೆ ಏನನ್ನಬೇ...

■ ಹುಬ್ಬಳ್ಳಿಯಾ...

ಕಾರವಾರದಲ್ಲಿ ಸೀರೆ ಶೋ

ಯಡ್ಡಿಯ ಹುಚ್ಚಾಟವೂ ಹೆಂಗಸರಿಗಾದ ಹಿಂಸೆಯೂ!



"... ಅಯ್ಯೋ ... ಆ ಯಡಿಯೂರಪ್ಪನಿಗೆ ಹುಚ್‌ಗಿಚ್ ಹಿಡಿದಿದ್ಯೋ ಹ್ಯಾಂಗೆ, ಮಾರಾಯ್ತಿ...ನೋಡೆ... ಅಂವ ಇದ್ದಂಗೆ ಮಳ್‌ಮಳ್ ಮಾತಾಡ್ತಾನೆ... ಮಾತ್‌ಮಾತಿಗೆ ಚಪ್ಪಾಳೆ ಹೊಡೀರಿ ಅಂತಾನೆ... ಕೈ ಎತ್ತಿ ಅಂತಾನೆ... ಅಂವ ಹೇಳ್ದ ಅಂತ್ವೇಳಿ ಕೂಸು ಕೈಲಿ ಹಿಡಕಂಡು ಸರ್ಕಸ್ ಮಾಡಾಕೆ ಆಗ್ತದೇನೆ...? ನನ್ ಹೆಸ್ರಲ್ಲಿ ದೇವ್ರಿಗೆ ದೀಪ ಹಚ್ಚಿ ಅಂತಾವ್ನೆ... ಸೂಪರ್ ಸೀರೆ ಕೊಟ್ಟೇನಿ ಅಂತಾನೆ... ಎಂತಿಕ್ ದೀಪ ಹಚ್ಚಬೇಕು..? ಅವನಪ್ಪನ ಮನೆ ದುಡ್ನಲ್ಲಿ ಸೀರೆ ಕೊಡ್ತಾನೇನೆ...? ಕುರ್ಚಿ ಹುಚ್ ಹಿಡ್ದದ್ಯೆ ಮಾರಾಯ್ತಿ ಇವ್ನಿಗೆ... ದೊಂಬರಾಟ ಮಾಡ್ತಾವ್ನೆ...."

ಇದು ಕಾರವಾರದಲ್ಲಿ ನಡೆದ ಸಿಎಂ ಯಡ್ಡಿಯ ಸೀರೆ ಶೋಗೆ ಬಲವಂತವಾಗಿ ಕರೆತಂದಿದ್ದ ಹೆಂಗಸರು ಅಸಹ್ಯದಿಂದ ಮಾತಾಡಿಕೊಂಡ ಪರಿ! ಇದೊಂದು ಹಿಂಸೋತ್ಸವದಂಥ ಸರ್ಕಾರಿ ಕಾರ್ಯಕ್ರಮವಾಗಿತ್ತು. ಸೀರೆ ಪಡೆಯಲು ಬಂದಿದ್ದ ಹೆಂಗಸರಲ್ಲಿ ಸಡಗರವಾಗಲಿ, ಯಡ್ಡಿ ಬಗ್ಗೆ ಅಭಿಮಾನವಾಗಲಿ ಒಂಚೂರೂ ಇರಲಿಲ್ಲ; ಬದಲಿಗೆ ಸಂಕಟದಿಂದ ಸುಸ್ತಾಗಿ ಹೋಗಿದ್ದರು. ಯಡ್ಡಿಯ ಯಡವಟ್ಟು ಮಾತುಗಾರಿಕೆಯ ಕಿರಿಕಿರಿಯಿಂದ ಕಂಗೆಟ್ಟು ಹೋಗಿದ್ದರು. ತಾಪಂ-ಜಿಪಂ ಇಲೆಕ್ಷನ್ ಪ್ರಚಾರಕ್ಕೆ ಯಡ್ಡಿ "ಸೀರೆ ರಾಜಕೀಯ" ಶುರುವಿಟ್ಟುಕೊಂಡಿರುವುದು ಕಾರವಾರ ಬೀಚ್‌ನಲ್ಲಿ ನೆರೆದಿದ್ದ ಅಷ್ಟೂ ಹೆಂಗಸರಿಗೆ ಅರ್ಥವಾಗಿಹೋಗಿತ್ತು. ಸರ್ಕಾರಿ ಹಣದಿಂದ ಸೀರೆ ಹಂಚಿದ ಯಡ್ಡಿ ತನ್ನಪ್ಪನ ಮನೆ ದುಡ್ಡಿಂದ ಬಾಗೀನ ಕೊಟ್ಟೋನಂಗೆ ಬೀಗಿದ್ದು ನೋಡಿ ಮಹಿಳೆಯರೆಲ್ಲ ಮುಸಿಮುಸಿ ನಕ್ಕಿದ್ದೇ ನಕ್ಕಿದ್ದು!


ಯಡ್ಡಿಯ ಅಧಿಕಾರಿಗಳು ಕಾರವಾರ ಕಡಲ ತಡಿಯಲ್ಲಿ ಹೆಚ್ಚು ಕಮ್ಮಿ ಹತ್ತು ಸಾವಿರ "ಗೃಹಲಕ್ಷ್ಮಿ"ಯರನ್ನು ಒಟ್ಟಾಕಿದ್ದರು. ಈ ತಾಯಂದಿರಲ್ಲಿ ಬಹುತೇಕರು ಹಸುಗೂಸುಗಳನ್ನು ಎದೆಗವುಚಿಕೊಂಡೇ ಬಂದಿದ್ದರು. ಭಾಗ್ಯಲಕ್ಷ್ಮಿಯ ತರದಿದ್ದರೆ ಬಾಗೀನ ಇಲ್ಲವೆಂದು ಬ್ಲ್ಯಾಕ್‌ಮೇಲ್



ಮಾಡಲಾಗಿತ್ತು. ಸುಳ್ಳುಪೊಳ್ಳು ಆಮಿಷ-ಬೆದರಿಕೆಯೊಡ್ಡಿ ಧೂರ್ತ ಅಧಿಕಾರಿಗಳು ಅಮಾಯಕ ಹೆಂಗಸರನ್ನು ಎಳೆದುತಂದಿದ್ದರು. ಸಿಎಂ ಫಂಕ್ಷನ್‌ಗೆ ಬರದಿದ್ರೆ ಭಾಗ್ಯಲಕ್ಷ್ಮಿ ಬಾಂಡ್, ಸೀರೆ ಸಿಗೋದಿಲ್ಲಾ ಎಂದು ಬಲಾತ್ಕಾರವಾಗಿ ಮಹಿಳೆಯರನ್ನು ಸರ್ಕಾರಿ ಬಸ್‌ಗಳಲ್ಲಿ ತುಂಬಿ ಜಿಲ್ಲೆಯ ಮೂಲೆಮೂಲೆಗಳಿಂದ ತರಲಾಗಿತ್ತು. ಜಿಲ್ಲಾ ಕೇಂದ್ರಕ್ಕೆ ನೂರಾರು ಕಿ.ಮೀ. ದೂರದಲ್ಲಿರುವ ಭಟ್ಕಳ-ದಾಂಡೇಲಿ ಮುಂಡಗೋಡ-ಸಿದ್ದಾಪುರ ಮುಂತಾದೆಡೆಯಿಂದ ಮೊದಲ ದಿನ ರಾತ್ರಿಯೇ ಹೆಂಗಸರನ್ನು ತರುವ ತಯಾರಿ ಮಾಡಲಾಗಿತ್ತು.

ಸಿಎಂ ಸಾಹೇಬರ ಸವಾರಿ ಮುಂಜಾನೆ 11 ಗಂಟೆಗೆ ವಿಜಯಂಗೈಯುತ್ತದೆಂದು ಹೇಳಲಾಗಿತ್ತು. ಹಾಗಾಗಿ ಹತ್ತು ಗಂಟೆ ಹೊತ್ತಿಗೆ ಜಿಲ್ಲೆಯ ಅಷ್ಟೂ ಹನ್ನೊಂದು ತಾಲೂಕುಗಳಿಂದ ಫಲಾನುಭವಿ ಹೆಂಗಸರು ಕಾರವಾರದತ್ತ ಜಮಾಯಿಸತೊಡಗಿದರು. ಆದರೆ ಸಿಎಂ ಹ್ಯಾಲಿಕಾಪ್ಟರ್ ಅದ್ಯಾಕೋ ಹುಬ್ಬಳ್ಳಿಯಿಂದ ಕಾರವಾರಕ್ಕೆ ಹಾರಲೊಲ್ಲದ್ದರಿಂದ ಯಡ್ಡಿ ರಸ್ತೆ ಮೂಲಕ ಬಂದರು. ಬರುವಾಗ ಜರೋಬ್ಬರಿ ಮಧ್ಯಾಹ್ನ 1.30 ಆಗಿತ್ತು! ಯಡ್ಡಿಯ ಭೀಷಣ ಭಾಷಣ ಮುಗಿದು ಮಹಿಳೆಯರು-ಮಕ್ಕಳು ಊರಿಗೆ ಹೊರಟಾಗ 3.30! ಐದಾರು ತಾಸು ಈ ಹೆಂಗಸರು ಬಿಸಿ ಕಾವಲಿಯಂಥ ಕಾರವಾರ ಬೀಚಲ್ಲಿ ಪುಟ್ಟ ಮಕ್ಕಳನ್ನು ಸಂಭಾಳಿಸಿಕೊಂಡು ಪಟ್ಟ ಪಾಡು ಇದೆಯಲ್ಲಾ, ಅದು ನರಕ ಸದೃಶವೇ ಸರಿ!!

ಒಂದೆಡೆ ಕಡಲ ತಡಿಯ ಉಪ್ಪಿನಂಶದ ಬಿಸಿ ವಾತಾವರಣ. ಇನ್ನೊಂದೆಡೆ ಸುಡುವ ರಣ ಬಿಸಿಲು. ಹಸುಳೆಗಳು-ಮಕ್ಕಳು-ತಾಯಂದಿರು ಬೆಂಕಿಯಲ್ಲಿ ಬಿದ್ದಂತೆ ಒದ್ದಾಡುತ್ತಿದ್ದರು. ಹಸಿವು-ಹಿಂಸೆಯಿಂದ ಮಕ್ಕಳು ಚೀರಾಡುತ್ತಿದ್ದರು. ತಾಯಂದಿರು ಯಡ್ಡಿಗೆ ಹಿಡಿಶಾಪ ಹಾಕುತ್ತಾ "ಹುಸ್... ಹುಸ್" ಎಂದು ನಿಟ್ಟುಸಿರುಬಿಡುತ್ತಿದ್ದರು; ಮಕ್ಕಳ ಸಮಾಧಾನಿಸಲು, ರಿಲ್ಯಾಕ್ಸ್ ಆಗಲು ಚಡಪಡಿಸುತ್ತಿದ್ದರು. ಸಿಎಂ ಯಡ್ಡಿ ಮಹಾತ್ಮನಂತೂ ತನಗೆ ತಾನೇ ತಾರೀಫು



ಮಾಡಿಕೊಳ್ಳುತ್ತ ಆತ್ಮರತಿಯ ಅಸಡ್ಡಾಳ ಭಾಷಣ ಬಿಗಿವಾಗಲಂತೂ ಹೆಂಗಸರ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೇ ಬಿದ್ದಂತಾಗಿತ್ತು.

ಒಂದು ಲಡ್ಡು ಸೀರೆಗಾಗಿ ಇಷ್ಟೊಂದು ತ್ರಾಸು ಪಡಬೇಕಾಗಬಹುದೆಂಬ ಸಣ್ಣ ಕಲ್ಪನೆಯೂ ಆ ಪಾಪದ ಹೆಣ್ಣುಮಕ್ಕಳಿಗಿರಲಿಲ್ಲ. ಇಂಥ "ಅನಾಹುತ"ದ ಮುನ್ಸೂಚನೆ ಸಿಕ್ಕಿದ್ದರೆ ಅವರು ಬರುತ್ತಲೂ ಇರಲಿಲ್ಲ ಬಿಡಿ. ಹೈರಾಣಾಗಿ ಹೋಗಿದ್ದ ಗೃಹಲಕ್ಷ್ಮಿಯರಿಗೆ "ಯಡ್ಡಿಯಣ್ಣ" ಕೊಟ್ಟ ಹಿಂಸೆ ಮತ್ತೂ ಘೋರವಾಗಿತ್ತು! ತನ್ನ ಪ್ರತಿ ಹುಸಿ ಭರವಸೆ, ವೀರಾವೇಷದ ಮಾತುಗಳಿಗೆ ಚಪ್ಪಾಳೆ ತಟ್ಟಿ, ಕೈ ಎತ್ತಿ ಪ್ರೋತ್ಸಾಹಿಸಿ ಎಂದು ಡ್ರಿಲ್ ಮಾಸ್ಟರ್ ಥರ ಯಡ್ಡಿ ಹೆಂಗಸರಿಗೆ ತಾಕೀತು ಮಾಡುತ್ತಿದ್ದುದು ಹಾಸ್ಯಾಸ್ಪದವಾಗಿತ್ತು. ಹೆಣ್ಣುಮಕ್ಕಳಿಗೆ ಪದವಿ ತನಕ ಪುಕ್ಕಟೆ ವಿದ್ಯಾಭ್ಯಾಸ ಕೊಡಿಸ್ತೇನೆ, ಗೃಹಲಕ್ಷ್ಮಿಯರಿಗೆ ಪುಗಸಟ್ಟೆ (ಸರ್ಕಾರಿ ಖರ್ಚಿನಲ್ಲಿ) ವೈದ್ಯಕೀಯ ಚಿಕಿತ್ಸೆ, ಆಪರೇಷನ್ ಮಾಡಿಸ್ತೇನೆ, ಹೆಣ್ಣುಮಗುವಿಗೆ 16 ವರ್ಷ ತುಂಬಿದಾಗ 1 ಲಕ್ಷ ಕೊಡಿಸ್ತೇನೆ ಎಂದೆಲ್ಲಾ ಯಡ್ಡಿ ಭೋಂಗು ಬಿಟ್ಟಾಗ ಹೆಂಗಸರು ಕಡ್ಡಾಯವಾಗಿ ಚಪ್ಪಾಳೆ ಹಾಕಿ ಭೋಪರಾಕ್ ಅನ್ನಬೇಕಿತ್ತು.

ಬಿಸಿಲ ಝಳದಿಂದ ಬಸವಳಿದಿದ್ದ - ರಚ್ಚೆ ಹಿಡಿದಿದ್ದ ಮಕ್ಕಳ ನಿಭಾಯಿಸುತ್ತಿದ್ದ ತಾಯಂದಿರೇನಾದರೂ ಕೈಎತ್ತದಿದ್ದರೆ, ಚಪ್ಪಾಳೆ ತಟ್ಟದಿದ್ರೆ, ಯಡ್ಡಿಗೆ ದೊಡ್ಡ ಕೋಪವೇ ಬಂದುಬಿಡ್ತಿತ್ತು. ಹೆಂಗಸರ ಕಂಕುಳಲ್ಲಿ ಕೂಸುಗಳಿವೆ; ಅವರೆಲ್ಲ ಬಿಸಿಲಲ್ಲಿ ಹಸಿವಿನಲ್ಲಿ ಜರ್ಜರಿತರಾಗಿದ್ದಾರೆಂಬ ಮಾನವೀಯತೆಯೂ ಹುಂಬ ಯಡ್ಡಿಗೆ ಇರಲಿಲ್ಲ. ಭೂಭಾನಗಡಿ, ಪುತ್ರ-ಪುತ್ರಿ ಮೋಹದಿಂದ ರಾಜೀನಾಮೆ ಒತ್ತಡಕ್ಕೆ ಸಿಲುಕಿದ್ದ ಯಡ್ಡಿ ಅದೆಷ್ಟು ಹತಾಶರಾಗಿದ್ದರು, ಸ್ಥಿಮಿತ ಕಳೆದುಕೊಂಡಿದ್ದರೆಂದರೆ, ಚಪ್ಪಾಳೆ ಹೊಡೆಯದ ಹೆಂಗಸರ ಹಂಗಿಸುವುದಕ್ಕೂ ಆತ ಹಿಂಜರಿಯಲಿಲ್ಲ. ಸಂಯಮ ಸದಾಚಾರವನ್ನೆಲ್ಲಾ ಬಿಟ್ಟು "ಬುದ್ಧಿಗೇಡಿ ಹೆಂಗಸರು ಚಪ್ಪಾಳೆ ತಟ್ಟದೆ ಹಾಗೇ ಸುಮ್ಮನೆ ಕುಳಿತಿರುತ್ತಾರೆ. ... ಬುದ್ಧಿ ಇರೋರು ಚಪ್ಪಾಳೆ ಹಾಕ್ತಾರೆ" ಎಂದು ಭಾಗ್ಯಲಕ್ಷ್ಮಿಯ ಅಮ್ಮಂದಿರನ್ನು ಅವಮಾನಿಸಿಬಿಟ್ಟರು ಯಡ್ಡಿಜೀ!!

ಒಮ್ಮೆ ವೀರಾವೇಷ, ಇನ್ನೊಮ್ಮೆ ಕರುಣಾಜನಕ, ಮಗದೊಮ್ಮೆ ಹಾಸ್ಯಾಸ್ಪದವಾಗಿ ಮಾತಾಡುತ್ತ ಯಡ್ಡಿ ಕಪಿಮುಂಗಿಯಂತೆ ಕುಣಿಯುತ್ತಿದ್ದಾಗ ಯಾತನೆಯಲ್ಲಿ ಚಡಪಡಿಸುತ್ತಿದ್ದ ಹೆಂಗಸರು ಆತನಿಗೆ ಲಟಿಕೆ ಮುರಿದು ಶಾಪ ಹಾಕುತ್ತಿದ್ದರು, "ಇವ್ನ ಸೀರೆನೂ ಬ್ಯಾಡ.... ಭಾಷ್ಣಾನೂ ಬ್ಯಾಡ.... ಬೇಗ ಊರಿಗೆ ಮುಟ್ಸಿದ್ರೆ ಸಾಕು...." ಎಂದು ಕುದಿಯುತ್ತಿದ್ದರು. ಭಾಷಣ ಮಾಡುವಾಗ ಸಿಎಂಗೆ ಮಾಜಿ ಸಿಎಂ ಕುಮಾರಸ್ವಾಮಿ ನೆನಪಾಗಿ ಉರಿದುಬಿದ್ದರು. "ಆ ಕುಮಾರಸ್ವಾಮಿ ನಾನು ಕೊಡ್ತಿರೋ ಸೀರೆ ರೇಟು 100 ರೂ. ಅಂತಿದ್ದಾರೆ.... ನೀವೇ ನೋಡ್ರಿ.... ಇದು 250-300 ರೂ.ನ ಉಂಚ್ಚಾ ಸೀರೇರಿ.... ಈ ಯಡಿಯೂರಪ್ಪ ಕಳಪೆ ಸೀರೆ ಹಂಚೋನಲ್ಲಾರಿ...." ಎನ್ನುತ್ತಾ ಒಂದು ಸೀರೆ ಉದ್ದಕ್ಕೆ ಕೈಲಿ ಎತ್ತಿಹಿಡಿದು ತೋರಿಸುತ್ತಾ ಬೊಬ್ಬೆಹಾಕಿದ್ದು ಬೇಸರದಲ್ಲಿದ್ದ ಹೆಂಗಸರನ್ನು ಒಂಚೂರು ರಂಜಿಸಿತು.

ಸೋಗಲಾಡಿ ಸಿಎಂ ಹೇಳಿದ್ದೇ ಒಂದು; ಸೀರೆ ಶೋನಲ್ಲಿ ಆಗಿದ್ದೇ ಒಂದು. 11 ಸಾವಿರ ಹೆಂಗಸರಿಗೆ ಸೀರೆ ವಿತರಿಸುವ ಸರ್ಕಾರಿ ಸಮಾರಂಭವಿದಾಗಿತ್ತು. ಆದರೆ ಕುರ್ಚಿ ಉಳಿಸಿಕೊಳ್ಳಲು ದಿಲ್ಲಿಗೆ ಹೋಗುವ ಧಾವಂತದಲ್ಲಿದ್ದ ಯಡ್ಡಿ ಅವಸರವಸರವಾಗಿ ಬರೀ 11 ಮಂದಿಗಷ್ಟೇ ಒಳ್ಳೊಳ್ಳೆ ಸೀರೆ ಕೊಟ್ಟು ಜಾಗ ಖಾಲಿ ಮಾಡಿದರು. ಯಡ್ಡಿ ಹೋದ ನಂತರ ಊರಿಗೆ ಹೋಗಲು ಬಸ್ ಏರಿ ಕುಳಿತಿದ್ದ ಹೆಂಗಸರಿಗೆ ಅಧಿಕಾರಿಗಳು ವಿತರಿಸಿದ ಸೀರೆಗಳು ಮಾತ್ರ ನಿಕೃಷ್ಟ ಕ್ವಾಲಿಟಿಯದಾಗಿದ್ದವು! ಅವುಗಳಲ್ಲಿ ಶೇಕಡ 80ರಷ್ಟು ಲಾಟಲ್ಲಿ ಖರೀದಿಸಿದ್ದ ಕಳ್ಳಸಂತೆ ಸೀರೆಗಳು; ಬೆಲೆ ಹೆಚ್ಚೆಂದರೆ 150ರಿಂದ 175 ರೂ. ಇರಬಹುದಷ್ಟೇ.

"ಇಂಥ ಬುರ್ನಾಸ್ ಬಾಗೀನ ಭಾಗ್ಯಕ್ಕೆ ನಾವ್ರು 100ರಿಂದ 175 ಕಿ.ಮೀ. ದೂರದಿಂದ ಕಾರ್ವಾರಕ್ಕೆ ಬರ್ಬೇಕಿತ್ತಾ? ನಮ್ಮ ಶಿಶುಗಳನ್ನು ಹಿಂಸೆಗೀಡು ಮಾಡ್ಬೇಕಿತ್ತಾ?" ಎಂದು ಹೆಂಗಸರು ಕಂಡಕಂಡವರೆದುರು ಸೀರೆ ಪ್ರದರ್ಶಿಸಿ ಯಡ್ಡಿ ಯೋಗ್ಯತೆ ಹರಾಜಾಕುತ್ತಿದ್ದರು. ತಮಗೆ ಕೊಟ್ಟಿದ್ದ ಪಲಾವ್ ಅಂತೂ ಪಶು-ಪ್ರಾಣಿಗಳೂ ತಿನ್ನುವ ಹಾಗಿರಲಿಲ್ಲವೆಂದು ನೊಂದ ಹೆಂಗಸರು ಹೇಳಿದ್ದು ಸಿಎಂ ಯಡ್ಡಿ ಮತ್ತು ಜಿಲ್ಲಾ ಉಸ್ತುವಾರಿ ಹೊತ್ತ ಮಂತ್ರಿ ಕಾಗೇರಿ ಮಾಣಿಯ ತೆವಲು-ಶಿಕ್ಕಲುತನಗ ನಿಸ್ಸಂಶಯವಾಗಿ ಸಾಬೀತು ತರಿಸುವಂತಿತ್ತು! ಫಂಕ್ಷನ್‌ಗೆ 15 ಸಾವಿರ ಜನ ಸೇರಿದ್ದರು. ಗೃಹಲಕ್ಷ್ಮಿಯರೇ ಹನ್ನೊಂದು ಸಾವಿರದಷ್ಟಿದ್ದರು. ಇದೆಲ್ಲಾ ಗೊತ್ತಿದ್ದೂ ಹೊಣೆಗೇಡಿ ಕಾಗೇರಿ ಟೀಂ 8 ಸಾವಿರ ಮಂದಿಗಾಗುವಷ್ಟೇ "ಪಲಾವ್" ತಯಾರಿಸಿತ್ತು. ಭಾಗ್ಯಲಕ್ಷ್ಮಿಯರಿಗೆಂದು ತಂದಿದ್ದ ಹಾಲು-ಹಣ್ಣು ಅಧಿಕಾರಿಗಳೇ ಸ್ವಾಹಾ ಮಾಡಿದ್ದೂ ಕೆಲವು ತಾಲೂಕುಗಳಲ್ಲಾಗಿದೆ. ಇದೆಲ್ಲಾ ಕಾಗೇರಿ ಕಾರ್ಯವೈಖರಿಗೆ ಸಾಕ್ಷಿ!

ಸೀರೆ ದಾನವೆಂಬ ಯಡ್ಡಿಯ ಓಟ್‌ಬ್ಯಾಂಕ್ ಪೊಲಿಟಿಕ್ಸ್ ಪ್ರಹಸನಕ್ಕೆ 30-40 ಲಕ್ಷ ಪೋಲಾಗಿದೆ. ಒಂದು ಸೀರೆಗೆ ಅಬ್ಬಬ್ಬಾ ಅಂದರೆ 225 ರೂ. ಕೊಟ್ಟು ಖರೀದಿಸಿರಬಹುದು. ಇದರ ಮೂರು ಪಟ್ಟು ಹಣ ಯಡ್ಡಿಯ ವೈಭವೀಕರಿಸುವ ಡಂಭಾಚಾರದ ಶೋ ಒಂದಕ್ಕೇ ವ್ಯಯವಾಗಿದೆ! ಸಭೆ-ಊಟ-ವಾಹನ ಇನ್ನಿತರ ಖರ್ಚುಗಳೆಲ್ಲ ಲೆಕ್ಕಹಾಕಿದರೆ ಒಂದು 225 ರೂ. ಸೀರೆ ವಿತರಣೆಗೆ 1,000 ರೂ. ವ್ಯರ್ಥವಾಗಿದೆ! ಸಿಎಂ ಯಡ್ಡಿಯ ಒಂದು ತಾಸಿನ ಸರ್ಕಸ್‌ಗೆ ಹಾಳಾದ ಲಕ್ಷ ಲಕ್ಷ ರೂ.ಗಳನ್ನು ಇನ್ನೂ ಬಾಂಡ್ ಸಿಗದ ನತದೃಷ್ಟ ಭಾಗ್ಯಲಕ್ಷ್ಮಿಯರಿಗೆ ಬಾಂಡ್ ಕೊಡಲು ಬಳಸಬಹುದಿತ್ತು!

ಯಡ್ಡಿಗೆ ಹಾಗೊಮ್ಮೆ ಬಡ ಗೃಹಲಕ್ಷ್ಮಿಯರಿಗೆ ಸೀರೆ ಕೊಟ್ಟು ಪುಣ್ಯ ಕಟ್ಟಿಕೊಳ್ಳುವ ತೆವಲು ತೀವ್ರವಾಗಿದ್ದರೆ ಆ ಸೀರೆ ಕೊರಿಯರ್ ಅಥವಾ ಪೋಸ್ಟ್‌ನಲ್ಲಿ ಮನೆ ಬಾಗಿಲಿಗೇ ಕಳಿಸಬಹುದಿತ್ತು. ಇಲ್ಲವೇ ಅಧಿಕಾರಿಗಳ ಮೂಲಕ ತಲುಪಿಸಬಹುದಿತ್ತು. ತಾಯಂದಿರಿಗೆ ಸಂಸಾರ ಕೆಲಸವೆಲ್ಲಾ ಬಿಟ್ಟು ಹಸುಗೂಸುಗಳ ಎದೆಗವುಚಿಕೊಂಡು ದೂರದ ಜಿಲ್ಲಾ ಕೇಂದ್ರಕ್ಕೆ ಬರುವ ತಾಪತ್ರಯವೂ ತಪ್ಪುತ್ತಿತ್ತು. ಆದರೆ ಯಡ್ಡಿಗದು "ಹೀರೋ" ಪೋಸು ಕೊಟ್ಟುಕೊಂಡು ಬೀಗಲು ಆಗುತ್ತಿರಲಿಲ್ಲ. ಹಾಗಾಗಿ ಲಕ್ಷಾಂತರ ಸರ್ಕಾರಿ ಕಾಸು ಹಾಳು ಮಾಡಿ "ಬಾಗೀನ ಭಾಗ್ಯ" ಕಾರ್ಯಕ್ರಮವನ್ನು ಯಡ್ಡಿ ಹಮ್ಮಿಕೊಂಡಿದ್ದಾರೆ. ತಮಾಷೆಯೆಂದರೆ, ಸೀರೆ ವಿತರಿಸಲು ಬಂದಿದ್ದ ಯಡ್ಡಿ ಮಾತ್ರ ಹಗರಣಗಳಿಂದ ಸಂಪೂರ್ಣ ಬೆತ್ತಲಾಗಿದ್ದರು. ಉತ್ತರ ಕನ್ನಡಿಗರು ಯಡ್ಡಿಯ "ನಿರ್ವಾಣ ಸ್ಥಿತಿ" ಕಂಡು ಕಣ್ಮುಚ್ಚಿಕೊಂಡಿದ್ದರು.

ನೀರೆಯರಿಗೆ ಸೀರೆ ವಿತರಿಸಲು ಸಿಎಂ ಯಡ್ಡಿಜೀ ಬೆತ್ತಲಾಗೇ ರಾಜ್ಯಾದ್ಯಂತ ಅಂಡಲೆಯುತ್ತಿದ್ದಾರೆ; ಸಿಎಂ ಕುರ್ಚಿಯಿಂದಿಳಿದು "ಬಟ್ಟೆ" ಹಾಕಿಕೊಂಡು ಮಾನ ರಕ್ಷಿಸಿಕೊಳ್ಳಬೇಕೆಂಬ ಪ್ರಜ್ಞೆಯೂ ಇಲ್ಲವೇ? ಎಂಥ ನಾಚಿಕೆಗೇಡು, ಅಲ್ಲವೇ?

• ನಹುಶ





ಗೀತಾ ನಾಗಭೂಷಣ್ ಮೇಲೆ ಹಲ್ಲೆ


ಗುರೂಜಿ ಫ್ಯಾಮಿಲಿಯ ದಗಲ್ಬಾಜಿ ಸ್ಕೆಚ್ಚು

ಹಿರಿಯ ಲೇಖಕಿ ಗೀತಾ ನಾಗಭೂಷಣ್‌ರ ಬದುಕು ಸಂಕಟಕ್ಕೆ ಸಿಲುಕಿದೆ. ಬಹು ಹಿಂದಿನಿಂದಲೂ ಮಾನಸಿಕ ಕಿರುಕುಳದ ಮಟ್ಟದಲ್ಲಿದ್ದ ಇವರ ಮಗಳು ಕಾವ್ಯಶ್ರೀ ಗಂಡನ ಕುಟುಂಬಿಕರ ದುಷ್ಟತನವೀಗ ಹಿರಿಜೀವದ ಮೇಲೆ ಹಲ್ಲೆ ನಡೆಸುವಂಥ ಅಮಾನುಷ ಹಂತ ತಲುಪಿದೆ.

ಗೀತಾರ ಮಗಳು ಕಾವ್ಯಶ್ರೀ ಹಾಗೂ ಅರವಿಂದ ಗುರೂಜಿ ನಡುವಿನ ದಾಂಪತ್ಯ ಮುರಿದು ಬಿದ್ದು ಆರು ವರ್ಷವಾಗುತ್ತಾ ಬಂದಿದೆ. ಅಂದಿನಿಂದಲೇ ಅರವಿಂದನ ಕುಟುಂಬಿಕರ ಕಣ್ಣು ಗೀತಾ ನಾಗಭೂಷಣ್ ಸ್ವಂತದ ದುಡಿಮೆಯಿಂದ ಕಟ್ಟಿಕೊಂಡಿರುವ ಗುಲ್ಬರ್ಗಾದ ಸ್ವಸ್ತಿಕ್ ನಗರದ ಎರಡಂತಸ್ತಿನ ಸೂರಿನ ಮೇಲೆ ಬಿದ್ದಿತ್ತು. ಈ ಹಿನ್ನೆಲೆಯಲ್ಲಿ ಪದೇ ಪದೇ ಗೀತಾರ ಮೇಲೆ ಕಿರುಕುಳಗಳು ನಡೆಯುತ್ತಿದ್ದವು. ಈಗ್ಗೆ ಎರಡು ವರ್ಷಗಳ ಹಿಂದೊಮ್ಮೆ ಈ ಕಿರುಕುಳ ಕೊಂಚ ವಿಪರೀತಕ್ಕೆ ಹೋಗಿ ತಣ್ಣಗಾಗಿತ್ತು.

ಮೊನ್ನೆ ರಾತ್ರಿ ಒಂಬತ್ತು ಗಂಟೆಯ ಸುಮಾರಿಗೆ ಅಳಿಯ ಅರವಿಂದ ಹಾಗೂ ಆತನ ಅಪ್ಪ ವಿದ್ಯಾಧರ ಗುರೂಜಿ, ಅಣ್ಣ ಅಶೋಕ್ ಗುರೂಜಿ, ದೊಡ್ಡ ಸೊಸೆ ವಾಸಂತಿ, ಸಹೋದರಿ ಅರ್ಚನಾ, ಅಳಿಯ ಅನಿಲ್ ಹುಂಡೇಕರ್ ಹೀಗೆ ಒಂದಿಡೀ ಕುಟುಂಬವೇ ಗೀತಾರ ಮನೆಯಲ್ಲಿ ಜಮಾವಣೆಗೊಂಡಿತ್ತು. ಜೊತೆಗೆ ಗೀತಾರ ಬಳಿ ಅದೇನೋ ಮಾತಾಡಬೇಕೆಂಬ ಬೇಡಿಕೆಯನ್ನಿಟ್ಟಿತ್ತು.

ಗೀತಾ ನಾಗಭೂಷಣ್ ಸೌಜನ್ಯದಿಂದಲೇ ಅದಕ್ಕೊಪ್ಪಿ ಮಾತಾಡಲು ನಿಂತರೆ, ಗುರೂಜಿ ಫ್ಯಾಮಿಲಿಯಿಂದ ಅಸಲೀ ಡಿಮ್ಯಾಂಡ್ ಹೊರಬಿದ್ದಿದೆ. ಕಾವ್ಯಳ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಇಡೀ ಮನೆಯನ್ನು ಅಳಿಯ ಅರವಿಂದನ ಹೆಸರಿಗೆ ಬರೆದು ಕೊಡಬೇಕೆಂಬುದು ಅದರ ಸಾರಾಂಶ. ಇಷ್ಟಾಗುತ್ತಲೇ ಈ ಮಂದಿ ಜಗಳ ಮಾಡಲೆಂದೇ ಬಂದಿದ್ದಾರೆಂಬ ಅಂಶ ಗೀತಾರಿಗೆ ಮನದಟ್ಟಾಗಿತ್ತು, ತಕ್ಷಣ ಎಚ್ಚೆತ್ತುಕೊಂಡ ಅವರು 'ನಿಮ್ ಕೂಡ ಈಗ ಮಾತಾಡ ಕಾಗಲ್ಲ, ದಯವಿಟ್ಟು ಹೋಗಿ' ಅಂದರು. ಅದಕ್ಕಾಗೇ ಕಾದು ಕೂತವನಂತಿದ್ದ ಅಳಿಯ ಅರವಿಂದ ಗೀತಾರ ಕಪಾಳಕ್ಕೆ ಹೊಡೆದನಲ್ಲದೆ, 'ನಿನ್ನ...ನ್ ಮುದುಕಿ. ನಿನ್ ಕಥೆ ಮುಗುಸ್ತೀನಿ' ಅಂತೆಲ್ಲಾ ಆವಾಜ್ ಹಾಕಿದ. ಅಷ್ಟಕ್ಕೂ ಸುಮ್ಮನಾಗದೆ ಮತ್ತೊಂದು ಸಲ ಹಲ್ಲೆ ನಡೆಸಿ ಗೀತಾರನ್ನು ನೆಲಕ್ಕೆ ಕೆಡವಿದ.



ಈ ದುಷ್ಟಪಡೆ ದಾಂಧಲೆಯೆಬ್ಬಿಸಲು ಪಕ್ಕಾ ಪ್ಲಾನ್ ಮಾಡಿಕೊಂಡೇ ಬಂದಿತ್ತಲ್ಲಾ? ಅದರನ್ವಯ ಇಡೀ ಗುರೂಜಿ ಫ್ಯಾಮಿಲಿಯ ಗಂಡಸರು-ಹೆಂಗಸರೆಲ್ಲ ಕೆಟ್ಟಾ ಕೊಳಕು ಬೈಗುಳಗಳೊಂದಿಗೆ ಅಖಾಡಕ್ಕಿಳಿದಿದ್ದರು. ಇತ್ತ ಅರವಿಂದ ಗೀತಾರನ್ನು ನೆಲಕ್ಕೆ ಕೆಡವಿದರೆ, ಅತ್ತಲಿಂದ ಆತನ ಬಾಮೈದ ಅನಿಲ್ ಹುಂಡೇಕಾರ ಪುಂಡಾಟ ಶುರುವಿಟ್ಟುಕೊಂಡಿದ್ದ. ಸೀದಾ ಮನೆಯೊಳಗೆ ನುಗ್ಗಿದ ಅನಿಲ್ ಕರ್ಟನ್ ರಾಡ್‌ನಿಂದ ಗೀತಾರ ಮಗ ಭರತ್‌ಗೆ ಹೊಡೆದಿದ್ದಾನೆ. ಗುರೂಜಿ ಫ್ಯಾಮಿಲಿಯ ದೊಡ್ಡ ಸೊಸೆ ವಾಸಂತಿ ಸೊಂಟದ ಕೆಳಗಿನ ಭಾಷೆಯಲ್ಲಿ ಬೈಗುಳಗಳ ಸುರಿಮಳೆಗರೆಯುತ್ತಾ ಈ ಘನ ಕಾರ್ಯದಲ್ಲಿ ಪಾಲ್ಗೊಂಡಿದ್ದಾಳೆ. ಗೀತಾ ಹಾಗೂ ಮಗ ಭರತ್ ಹಠಾತ್ತಾಗಿ ನಡೆದ ಹಲ್ಲೆಯಿಂದ ಚೇತರಿಸಿಕೊಳ್ಳೋ ಮುನ್ನವೇ ಇಡೀ ತಂಡ ಕೊಲೆ ಬೆದರಿಕೆ ಹಾಕಿ ವಾಪಸಾಗಿದೆ. ಅನಿಲ್ ಹುಂಡೇಕರನಂತೂ 'ನಾಳೆ ಬಂದು ಅಮ್ಮ-ಮಗನ ಜೀವ ತಗಂಡೋತ್ತಿನಿ' ಅಂತ ಅಬ್ಬರಿಸಿದ್ದಾನೆ.

ಇಷ್ಟೆಲ್ಲಾ ಅಸಹ್ಯದ ಘಟನೆಗಳು ವಿದ್ಯಾಧರ ಗುರೂಜಿಯ ಸಮ್ಮುಖದಲ್ಲೇ ನಡೆದಿದೆ. ಸ್ವಾತಂತ್ರ್ಯ ಹೋರಾಟಗಾರ, ಸುಸಂಸ್ಕೃತ ಎಂಬಿತ್ಯಾದಿ ಬಿರುದುಗಳನ್ನು ಹೊತ್ತುಕೊಂಡಿರುವ ಈತ ಒಂದು ಬಾರಿ ಶಾಸಕನಾಗಿದ್ದವನು. ಇಂಥಾ ಆಸಾಮಿ ಅಸಹಾಯಕ ಹೆಣ್ಣುಮಗಳ ಮೇಲೆ ತನ್ನ ಮಕ್ಕಳು, ಸೊಸೆಯಂದಿರು ಅಮಾನುಷವಾಗಿ ಹಲ್ಲೆ ನಡೆಸುತ್ತಿದ್ದರೂ ಏನೊಂದು ಮಾತಾಡದೆ ತೆಪ್ಪಗಿದ್ದ!


ಗೀತಾ ನಾಗಭೂಷಣ್ ಮೇಲೆ ಇಂತಹುದೊಂದು ಹಲ್ಲೆ ನಡೆಯಲು ಕಾರಣ ಅವರ ಮಗಳು ಕಾವ್ಯರ ದಾಂಪತ್ಯದಲ್ಲುಂಟಾದ ಬಿರುಕು. ಪ್ರಸ್ತುತ ಕಾವ್ಯ ಗುಲ್ಬರ್ಗಾದ ಡಿಗ್ರಿ ಕಾಲೇಜ್‌ನಲ್ಲಿ ಉಪನ್ಯಾಸಕ ವೃತ್ತಿ ಮಾಡುತ್ತಾ ಗುಲ್ಬರ್ಗಾದ ಬಾಡಿಗೆ ಮನೆಯಲ್ಲಿ ಒಂಟಿಯಾಗಿ ಬದುಕುತ್ತಿದ್ದಾರೆ. ಈಕೆ ಪಿಯುಸಿ ಓದುತ್ತಿದ್ದಾಗಲೇ ಗೀತಾ ತಮ್ಮ ಜಾತ್ಯತೀತ ನಂಬುಗೆಯಂತೆ ದಲಿತ ಪಂಗಡದ ವಿದ್ಯಾಧರ ಗುರೂಜಿಯ ಮಗ ಅರವಿಂದನೊಂದಿಗೆ ಮದುವೆ ಮಾಡಿದ್ದರು.

ಈ ಅರವಿಂದ ತಾನೇ ಸಂಪಾದಿಸಿ ಬದುಕುವ ಸ್ವಾಭಿಮಾನದ ಲವಲೇಶವೂ ಇಲ್ಲದ ಆಸಾಮಿ. ಆದರೆ ಕಾವ್ಯ ತನ್ನಮ್ಮನಿಂದ ಸ್ವಾಭಿಮಾನವನ್ನು ಬಳುವಳಿಯಾಗಿ ಪಡೆದುಕೊಂಡಿದ್ದಾಕೆ. ಗಂಡನ ಬರಗೆಟ್ಟ ಮನಸ್ಥಿತಿಯ ಅರಿವಾದರೂ ಪಾರ್ಟ್ ಟೈಂ ನೌಕರಿ ಮಾಡುತ್ತಾ ಅದರ ನಡುವಲ್ಲೇ ಪದವಿ ಪೂರೈಸಿ ಡಾಕ್ಟರೇಟನ್ನೂ ಪಡೆದುಕೊಂಡಳು. ಕೆಲಸವೂ ಸಿಕ್ಕಿತು. ಈ ನಡುವೆಯೇ ಒಂದು ಹೆಣ್ಣು ಮತ್ತೊಂದು ಗಂಡು ಮಕ್ಕಳು ಆದವು. ಆದರೆ ಅರವಿಂದನ ಕೂತು ತಿನ್ನುವ ದರಿದ್ರ ಬುದ್ಧಿ ಮಾತ್ರ ಬದಲಾಗಲಿಲ್ಲ.

ಇಂಥಾ ಗಂಡನೊಂದಿಗಿನ ಹೆಣಗಾಟ, ಮಾನಸಿಕ ಹಿಂಸೆಯನ್ನೆಲ್ಲ ತಡೆದುಕೊಂಡು ಸಾಕಾದ ಕಾವ್ಯ ಈಗ್ಗೆ ಆರು ವರ್ಷಗಳ ಹಿಂದೆ ಗಂಡನನ್ನು ತೊರೆದು ಬಂದರು. ಅದ್ಯಾವುದೋ ಮಸಲತ್ತುಗಳಿಂದ ಮಕ್ಕಳು ಗಂಡನ ಮನೆಯಲ್ಲೇ ಉಳಿದುಕೊಂಡವು. ಪ್ರಸ್ತುತ ಕಾವ್ಯಾರ ಹಿರಿಮಗಳು ಪೂಜಾಗೀಗ ಹತ್ತೊಂಬತ್ತು ವರ್ಷ. ಗಂಡು ಮಗನಿಗೆ ಹದಿನಾಲ್ಕು ವರ್ಷ.

ಕೂತು ತಿನ್ನುವ ಮನಸ್ಥಿತಿಯವರ ಅತಿಯಾಸೆ ಹೇಗಿರುತ್ತವೋ ನೋಡಿ, ಈ ಅರವಿಂದ ಹೆಂಡತಿ ತೊರೆದುಹೋದರೆ ಆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ, ಆತನ ಮನೆಯವರೂ ಕ್ಯಾರೇ ಅನ್ನಲಿಲ್ಲ, ಸ್ವಾತಂತ್ರ್ಯ ಹೋರಾಟಗಾರನ ಪೋಸು ಕೊಡುವ ಅರವಿಂದನ ಅಪ್ಪನಾದರೂ ಒಂದೇ ಒಂದು ಕ್ಷಣ ಹಿರೀಕನ ಸ್ಥಾನದಲ್ಲಿ ನಿಂತು ಯೋಚಿಸಲಿಲ್ಲ, ಬದಲಾಗಿ ಇಡೀ ಗುರೂಜಿ ಫ್ಯಾಮಿಲಿಯೇ ವ್ಯವಸ್ಥಿತ ಷಡ್ಯಂತ್ರವೊಂದನ್ನು ಹೆಣೆಯಿತು. ಅದರನ್ವಯ ಕಾವ್ಯದ ಮಕ್ಕಳಿಬ್ಬರನ್ನ ತಮ್ಮ ಬಳಿಯೇ ಉಳಿಸಿಕೊಳ್ಳಲಾಯ್ತು, ಅದರ ಹಿಂದಿದ್ದದ್ದು ಈ ಮಕ್ಕಳನ್ನು ಮುಂದಿಟ್ಟುಕೊಂಡು ಗೀತಾ ನಾಗಭೂಷಣ್‌ರ ಮನೆ ವಶಪಡಿಸಿಕೊಳ್ಳುವ ಹುನ್ನಾರ!

ಅದರನ್ವಯ ತಲೆ ಬಲಿಯದ ಮಕ್ಕಳಿಗೆ ಅಮ್ಮನ ಬಗ್ಗೆ, ಅಜ್ಜಿಯ ಬಗ್ಗೆ ಇಲ್ಲಸಲ್ಲದ್ದನ್ನು ಹೇಳುತ್ತಾ ದ್ವೇಷ ತುಂಬುವ ಕಸರತ್ತು ಗುರೂಜಿ ಫ್ಯಾಮಿಲಿಯ ಕಡೆಯಿಂದ ನಡೆದಿದೆ. ಇದೇ ಮಸಲತ್ತು ಮೊನ್ನೆ ಗೀತಾರ ಮೇಲೆ ನಡೆದ ಹಲ್ಲೆಗೆ ಮೂಲ ಕಾರಣವೆಂಬುದು ಪರಮ ಸತ್ಯ.



ಇನ್ನು ಗೀತಾ ನಾಗಭೂಷಣ್‌ರ ವಿಚಾರಕ್ಕೆ ಬಂದರೆ ಮೊನ್ನೆ ನಡೆದ ಘಟನೆಯಿಂದ ಈ ಹಿರಿಜೀವ ತತ್ತರಿಸಿ ಹೋಗಿದೆ. ತನ್ನ ಬದುಕಿನಲ್ಲಾದ ಅಸ್ತವ್ಯಸ್ತ ದಾಂಪತ್ಯದ ನೆರಳೇ ಮಗಳ ಬದುಕನ್ನು ಆವರಿಸಿಕೊಂಡಿರುವ ಬಗ್ಗೆ ನೋವು ಮಡುಗಟ್ಟಿದಂತಿದೆ.

ಯಾಕೆಂದರೆ ಗಿತಾ ನಾಗಭೂಷ ಣರ ದಾಂಪತ್ಯ ಗೀತೆ ಕೂಡಾ ಅಪಸ್ವರಗಳಿಂದಲೇ ಪರ್ಯಾವಸಾನಗೊಂಡಿರುವಂತಹದು. ಮೊದಲ ಗಂಡನಿಂದ ಬಿಡುಗಡೆ ಹೊಂದಿ ಎರಡನೇ ಗಂಡನ ಮಡಿಲಲ್ಲಿ ಬದುಕು ಅರಸಿದ ಗೀತಾರ ಸ್ಥಿತಿ ಮುಳ್ಳಿನ ಮರ ತಬ್ಬಿಕೊಂಡಂತಾಗಿತ್ತು, ಯಾಕೆಂದರೆ, ಆತನೂ ಈ ಅರವಿಂದನಂತೆ ಕೂತು ತಿನ್ನುವ ಕ್ಯಟಗರಿಯಾತ. ಅಲ್ಲದೆ ವಿಪರೀತ ಕುಡುಕ.



ಮೆಚ್ಚಬೇಕಾದ ಅಂಶವೆಂದರೆ, ಗೀತಾ ಮಡಿಲು ತುಂಬಿದ ಎರಡು ಮಕ್ಕಳನ್ನು ಎದೆಗವುಚಿಕೊಂಡು ಬದುಕನ್ನ ಎದುರಿಸಿ ನಿಂತರು. ಕಾಲೇಜಿನ ನೌಕರಿ ಅದಕ್ಕೆ ಆಸರೆಯಾಯಿತು. ಇದೆಲ್ಲದರ ನಡುವೆ ಸಮಾಜದ ಮುಳ್ಳುಗಣ್ಣುಗಳನ್ನು ಪ್ರತೀ ಕ್ಷಣವೂ ಎದುರಿಸುತ್ತಾ ಬದುಕಬೇಕಾದ ಸ್ಥಿತಿ. ಇವೆಲ್ಲ ಅಕ್ಷರಗಳಾಗಿ ಅನಾವರಣಗೊಂಡವೇ ವಿನಃ ಗೀತಾರೊಳಗಿನ ಬಂಡಾಯವನ್ನು ಬರೆಯುವ ಕಸುವನ್ನು ಕುಂದಿಸಲಿಲ್ಲ.

ಕಾಲೇಜು ನೌಕರಿಯಲ್ಲೇ ದುಡ್ಡು ಕೆಲೆ ಹಾಕಿ ಗುಲ್ಬರ್ಗಾದ ಸ್ವಸ್ತಿಕ್‌ನಗರದ ಸೇಡಂ ರಸ್ತೆಯಲ್ಲೊಂದು ಸ್ವಂತ ಮನೆ ಕಟ್ಟಿಸಿ ನೆಲೆಗೊಂಡರು. ಇದು ಅವರ ಹದಿನೈದು ಹದಿನಾರು ವರ್ಷಗಳ ಕಾಲ ಅವುಡುಗಚ್ಚಿ ದುಡಿದ ಬೆವರಿನ ಫಲ. ಇದೀಗ ಇದೇ ಮನೆಯಲ್ಲಿ ಗೀತಾ, ಸೊಸೆ, ಮೊಮ್ಮಕ್ಕಳೊಂದಿಗೆ ಬದುಕುತ್ತಿದ್ದಾರೆ.

ಹೀಗೆ ಬದುಕಿನಲ್ಲಿ ಹಲವಾರು ಏರಿಳಿತಗಳನ್ನು ಕಂಡಿರುವ ಗೀತಾರಿಗೀಗ 68 ವರ್ಷ ವಯಸ್ಸು. ಆಸ್ತಿ ಅಂತಿರುವುದು ಮನೆ ಮಾತ್ರ. ಅದನ್ನು ಮಕ್ಕಳಿಗೆ ಪಾಲು ಮಾಡಿರುವ ಗೀತಾ ಕೆಳ ಅಂತಸ್ತನ್ನು ಮಗಳು ಕಾವ್ಯಗೂ ಮೊದಲ ಮಹಡಿಯನ್ನು ಮಗ ಭರತ್‌ನ ಹೆಸರಿಗೂ ಬರೆದಿಟ್ಟಿದ್ದಾರೆ.

ಆದರೆ ಅದೇ ಮನೆಯ ಮೇಲೆ ಗುರೂಜಿ ಫ್ಯಾಮಿಲಿಯ ಕಣ್ಣು ಬಿದ್ದಿದೆ. ಕಾವ್ಯ ಈ ಹಿಂದೆಯೇ ಅರವಿಂದನಿಂದ ವಿಚ್ಛೇದನ ಬಯಸಿದ್ದರು. ಆದರಾತ ಸತಾಯಿಸುತ್ತಲೇ ಬಂದಿದ್ದಾನೆ. ಡೈವೋರ್ಸ್ ಅಂತೇನಾದರೂ ಕೊಟ್ಟರೆ ಆಸ್ತಿ ಕೈ ತಪ್ಪಿ ಹೋಗುತ್ತದಲ್ಲಾ? ಅದಕ್ಕು ಮುಂಚೆಯೇ 'ವ್ಯವಸ್ಥೆ' ಮಾಡಿಕೊಳ್ಳುವ ಸಲುವಾಗಿಯೇ ಮೊನ್ನಿನ ಪ್ರಕರಣ ನಡೆದಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗೀತಾ ಮಂಗಳವಾರದಂದು ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ ಅದ್ಯಾವ ಮುಲಾಜಿಗೆ ಬಿದ್ದಂತೆ ವರ್ತಿಸಿರುವ ಪೊಲೀಸರು ಗೀತಾರ ಮನೆಗೆ ಪೇದೆಯನ್ನು ಕಳಿಸಿ ರಕ್ಷಣೆ ಒದಗಿಸಿದ್ದರೇ ಹೊರತು ಹಲ್ಲೆ ನಡೆಸಿದ ಗುರೂಜಿ ಫ್ಯಾಮಿಲಿಯ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ.

ಇದಾದ ಬಳಿಕವೂ ಗುರೂಜಿ ಫ್ಯಾಮಿಲಿಯ ಗೂಂಡಾ ಗಿರಿ ನಿರಂತರವಾಗಿ ಮುಂದುವರೆದಿದೆ. ನಮ್ಮ ವಿರುದ್ಧ ದೂರು ಕೊಟ್ಟ ವಿಚಾರ ತಿಳಿಯುತ್ತಲೇ ಗೀತಾರ ಮನೆ ಯೆದುರು ಹಾಜರಾದ ಅಶೋಕ್ ಗುರೂಜಿ ಕೇಸ್ ವಾಪಸು ತೆಗೆದು ಕೊಳ್ಳುವಂತೆ ಧಮಕಿ ಹಾಕಿದ್ದಾನೆ. ಇದೆ ಲ್ಲದರಿಂದಾಗಿ ಗೀತಾ ನಾಗಭೂಷಣ್ ಭಯದ ನಡುವೆಯೇ ಬದುಕುವಂತಾಗಿದೆ.

ಗೀತಾ ನಾಗಭೂಷಣ್ ಕನ್ನಡದ ಮಹತ್ವದ ಲೇಖಕಿ. ಸಾಹಿತ್ಯ ಜಗತ್ತಿನಲ್ಲಿ ಅವರಿಗೆ ದೊಡ್ಡ ಸ್ಥಾನಮಾನವಿದೆ. ಇಂಥವರ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಕ್ಕೆ ಪೊಲೀಸರೇ ಬ್ರೇಕ್ ಹಾಕಬೇಕಿದೆ. ಅದು ಈ ಹಿರಿಯ ಜೀವಕ್ಕೆ ತೋರಿಸಬಹುದಾದ ನಿಜವಾದ ಗೌರವ.

• ಸಂತೋಷ್ ಬಾಗಿಲಗದ್ದೆ

ಅವಿವೇಕಿ ಅರವಿಂದ!

ಗೀತಾ ನಾಗಭೂಷಣ್‌ರ ಅಳಿಯ ಅರವಿಂದ ಮೊದಲೇ ಹೇಳಿದಂತೆ ಕೂತು ತಿನ್ನುವ ಆಸಾಮಿ. ಜೊತೆಗೆ ಪಕ್ಕಾ ಅವಿವೇಕಿ. ಈತ ಒಂದೂವರೆ ವರ್ಷದ ಹಿಂದೆ ಪಿಯುಸಿ ಸೈನ್ಸ್ ಕಾಲೇಜ್ ಸ್ಥಾಪಿಸಿ ತಾನೇ ಚೇರ್ಮನ್ ಆಗಿದ್ದಾನೆ. ಜೊತೆಗೊಂದು ಕೋ-ಆಪರೇಟಿವ್ ಸೊಸೈಟಿಯನ್ನೂ ನಡೆಸುತ್ತಿದ್ದಾನೆ.

ಆದರೆ ಈತ ಖರ್ಚಿಗಾಗಿ ನೆಚ್ಚಿಕೊಂಡಿರುವುದು ಕಮಿಷನ್ ದಂಧೆಯನ್ನು, ರಾಜಕೀಯ ಅಂತೆಲ್ಲ ಪುಢಾರಿಗಳೊಂದಿಗೆ ಅಡ್ಡಾಡುವ ಈತ ಅದೂ ಇದೂ ಕೆಲಸ ಮಾಡಿಸಿಕೊಟ್ಟು ಕಮೀಷನ್ ನುಂಗುತ್ತಾನೆ. ಸದ್ಯ ಇದೇ ಈತನ ಕಸುಬು.

ಇನ್ನು ಈತನೊಂದಿಗೆ ಇರುವ ಮಗಳು ಪೂಜಾ ಪಿಯುಸಿ ಡ್ರಾಪೌಟ್. ಈ ಹುಡುಗಿಯೂ ಅರವಿಂದನ ಆಡ್ನಾಡಿತನಗಳಿಗೆ ಪಕ್ಕಾ ಸಾಥ್ ನೀಡುತ್ತಿದೆ. ಈ ಹಿಂದೆ ಮೆಡಿಕಲ್ ಓದಲು 20 ಲಕ್ಷ ಬೇಕು ಅಂತ ಕಾವ್ಯರನ್ನೇ ಪೂಜಾ ಪೀಡಿಸಿದ್ದಳು. ಅಷ್ಟು ಹಣ ಇಲ್ಲ ಅಂದರೆ ಲೋನ್ ಮಾಡಿಕೊಡು ಅಂತಲೂ ಗಂಟುಬಿದ್ದಳು. ಇದು ಮಕ್ಕಳನ್ನು ಅರವಿಂದ ಹಾಳುಗೆಡವುತ್ತಿರುವ ಪರಿ. ಸದ್ಯ ಈತನಿಗೆ ಕಾವ್ಯ ಬೇಕಿಲ್ಲ. ಆದರೆ ಡೈವೋರ್ಸ್ ಕೊಡೆಂದರೂ ಈತ ಕೊಡಲೊಲ್ಲ, ಗೀತಾರ ಆಸ್ತಿ ಲಪಟಾಯಿಸಿದ ಬಳಿಕವೇ ಕಾವ್ಯಗೆ ಡೈವೋರ್ಸ್ ಕೊಡಬೇಕೆಂದು ಅರವಿಂದ ಶಪಥ ಮಾಡಿದಂತಿದೆ!

ದುರಂತವೆಂದರೆ ತನ್ನ ಮಗ ಬೇರೆಯವರ ಆಸ್ತಿಗೆ ಬಾಯಗಲಿಸಿ ಕೂತಿದ್ದರೂ, ಅದಕ್ಕಾಗಿ ತನ್ನದೇ ಸೊಸೆಗೆ ವಿಪರೀತ ಕಾಟ ಕೊಡುತ್ತಿದ್ದರೂ ಸ್ವಾತಂತ್ರ್ಯ ಹೋರಾಟಗಾರ ವಿದ್ಯಾಧರ ಗುರೂಜಿ ತೆಪ್ಪಗಿದ್ದಾನೆ.

...ಹಿಳಾ ವಿರೋಧಿಯಾದ ...ಾರೀಸು ಹಕ್ಕುಗಳು

...ೇರಳದಲ್ಲಿ ಪ್ರಗತಿಪರರೂ ಇಸ್ಲಾಂ ಧಾರ್ಮಿಕ ನಿಯಮ ...ುರಿತು ಪ್ರಗಲ್ಭ ಪಂಡಿತರೂ ಆಗಿದ್ದ ಚೇಕನೂರ್ ...ವಿ (ಮುಹಮ್ಮದ್ ಅಬುಲ್ ಹಸನ್) ಅವರನ್ನು ...ದಲ್ಲಿ ಕೆಲವು ಮೌಲವಿಗಳು (ಧರ್ಮಗುರುಗಳು) ... ಮಾಡಿದ್ದನ್ನು ಕೆಲವು ವರ್ಷಗಳ ಹಿಂದೆ ನಾನು ... ಮಾಡಿದ್ದೆ. ಸಿ.ಬಿ.ಐ. ತನಿಖೆಯಿಂದ ಕೊಲೆಗಾರರು ...ಿಲ್ಪಟ್ಟು ಮೊಕದ್ದಮೆ ನಡೆದು, ಬಾಬರಿ ಮಸೀದಿ ... ಹೊರಬಿದ್ದ ಅದೇ ದಿನ ಈ ತೀರ್ಪು ಹೊರಬಿದ್ದಿದ್ದು ...ಗೆ ಮಾತ್ರ ಜೀವಾವಧಿ ಶಿಕ್ಷೆ ನೀಡಿ ಉಳಿದವರೆಲ್ಲ ...ಬಿಡುಗಡೆ ಮಾಡಲಾಗಿದೆ. ಈ ಆರೋಪಿಗಳೆಲ್ಲರೂ ...ುರುಗಳ ವೇಷದಲ್ಲಿಯೇ ನ್ಯಾಯಾಲಯಕ್ಕೆ ಬಂದದ್ದು ...ಾಗಿತ್ತು. ಹದಿನೇಳು ವರ್ಷಗಳ ಹಿಂದೆ ಚೇಕನೂರ್ ...ವಿಗಳ ಕೊಲೆಯಾಗಿದ್ದರೆ ಇಂದು ಈ ಮೊಕದ್ದಮೆಯ ...ಮಾಯಿತೆಂದು ಪತ್ರಿಕೆಗಳು ವರದಿ ಮಾಡಿದವು. ...ಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ ಸಿ.ಬಿ.ಐ. ...ಲಯದಲ್ಲಿ ಈ ರೀತಿ ಹೇಳಿತು, "ಚೇಕನೂರರು ...ದ್ದಿದ್ದರೆ ಸಮಾಜಕ್ಕೆ ಹಾಗೂ ಸಮುದಾಯಕ್ಕೆ ದೊಡ್ಡ ...ಹ ದೊರೆತಂತಾಗುತ್ತಿತ್ತು."


...ಕನೂರರು ಇಸ್ಲಾಂ ಧಾರ್ಮಿಕ ನಿಯಮಗಳು ಯಾವ ...ತಿರುಚಲ್ಪಟ್ಟಿವೆ ಎಂಬುದನ್ನು ಖುರ್‌ಆನ್ ಹಾಗೂ ... ಧಾರ್ಮಿಕ ಗ್ರಂಥಗಳನ್ನು ಅರೇಬಿಕ್ ಭಾಷೆಯ ...ದ ಅಧ್ಯಯನದಿಂದ ಮನನ ಮಾಡಿಕೊಂಡು ...ರು ಮೂವತ್ತರಷ್ಟು ಕೃತಿಗಳನ್ನು ರಚಿಸಿ ಜನರಲ್ಲಿ ... ಮೂಡಿಸಲು ಪ್ರಯತ್ನಿಸಿದ್ದರು.

...ಂದು ಚಾಲ್ತಿಯಲ್ಲಿರುವ ಶರಿಯತ್ (ಇಸ್ಲಾಂ ಧಾರ್ಮಿಕ ...ಮಗಳು) ನಿಯಮಗಳಲ್ಲಿ ಹೆಚ್ಚಿನವುಗಳು ಹದೀಸ್ ... ಗ್ರಂಥಗಳಿಂದ ಎತ್ತಿಕೊಂಡವುಗಳಾಗಿವೆ. ಹದೀಸ್ ... ಪ್ರವಾದಿಗಳೊಡನೆ ನಡೆದ ಪ್ರಶ್ನೋತ್ತರಗಳಾಗಿವೆ. ...ಗಳ ಮರಣಾನಂತರ ಸುಮಾರು ಇನ್ನೂರು ವರ್ಷಗಳ ... ರಷ್ಯಾ ದೇಶದ ಬುಕಾರಾ ಎಂಬಲ್ಲಿ ಹುಟ್ಟಿದ ...ರಿ ಎಂಬುವರು ಅರೇಬಿಯಾಕ್ಕೆ ಬಂದು ಮೆಕ್ಕಾ ... ಮದೀನಾದ ಜನರೊಡನೆ ಪ್ರವಾದಿಗಳು ನಡೆಸಿದ ...ಕತೆಗಳ ಕುರಿತು ಮಾಹಿತಿ ಸಂಗ್ರಹಿಸಿ ರಚಿಸಿದ ...ಾಗಿದೆ. 'ನನ್ನೊಡನೆ ನಡೆಸಿದ ...ೋತ್ತರಗಳನ್ನು ಎಲ್ಲಿಯೂ ...ಡಬಾರದು,' ಎಂದು ...ದಿಗಳು ತಾಕೀತು ಮಾಡಿ ...ಆನಿನಲ್ಲಿರುವ ನಿಯಮಗಳನ್ನು ... ಅನುಸರಿಸಬೇಕೆಂದೂ ...ಧಿಸಿದ್ದಾರೆ. ಆದರೆ ಈಗ ...ಲ್ಲಿರುವ ಶರಿಯತ್ತಿನಲ್ಲಿ ಹೆಚ್ಚಿನ ...ಮಗಳೂ ಈ ಗ್ರಂಥಗಳಿಂದ ...ಂಡವುಗಳಾಗಿದ್ದು ಖುರ್‌ಆನ್ ಬೋಧನೆಯ ಕೇವಲ ... 20ರಷ್ಟು ನಿಯಮಗಳು ಮಾತ್ರ ಶರಿಯತ್ತಿನಲ್ಲಿವೆ. ...ೂರ್ ಮೌಲವಿಗಳು ಶರಿಯತ್ತಿನಲ್ಲಿರುವ ಇಂತಹ ...ಮಗಳನ್ನು ವಿರೋಧಿಸಿ ಆ ಕುರಿತು ಕೃತಿಗಳನ್ನು ...ರು. ಅವರ ವಾದ ವೈಖರಿಯನ್ನು ಸಮರ್ಥವಾಗಿ ... ಅವರಿಗೆ ಉತ್ತರ ನೀಡಲು ಉಳಿದ ಮೌಲವಿಗಳಿಗೆ ...ಾಗಲಿಲ್ಲ. ಅವರ ಪ್ರಸಿದ್ಧಿ ಮತ್ತು ಜನಪ್ರಿಯತೆಯನ್ನು ... ಈ ಜನರಿಂದ ಸಾಧ್ಯವಾಗದ ಕಾರಣ ಅವರನ್ನು ... ಮಾಡಿ ಜನರನ್ನು ಮತಾಂಧತೆಗೆ ದೂಡಿ ತಮ್ಮ ... ತೀರಿಸಿಕೊಂಡರು! ಈಗ ಚೇಕನೂರ್‌ರು ಸ್ಥಾಪಿಸಿದ್ದ ...ಆನ್ ಸುನ್ನತ್ ಸೊಸೈಟಿ' ಎಂಬ ಸಂಘಟನೆ ...ುತ್ತಿದೆ. ಇದರ ಪ್ರಥಮ ರಾಜ್ಯಾಧ್ಯಕ್ಷರು ಕೇರಳದ ... ಮುಖ್ಯ ಇಂಜಿನಿಯರ್ ವೀರಾನ್ ಕುಟ್ಟಿ ...ರಾಗಿದ್ದರು. ಈಗ ಕೇರಳಾದ್ಯಂತ ಅಲ್ಲಲ್ಲಿ ಈ ...ನೆಯ ಶಾಖೆಗಳು ಪ್ರಾರಂಭವಾಗಿದ್ದು ವಿದ್ಯಾವಂತರು ...ಘಟನೆಗೆ ಬೆಂಬಲ ಸೂಚಿಸುತ್ತಿದ್ದಾರೆ.

... ವಾರ ಮುಸ್ಲಿಂ ವಾರೀಸು ಹಕ್ಕಿನ ಕುರಿತು ... ಈ ಸಂಘಟನೆಯ ಸಭೆಯೊಂದು ಕೋಝಿ...ನಲ್ಲಿ ನೆರವೇರಿತು. ಡಾ. ಜಲೀಲ್ ಪುಟ್ಟಕ್ಕಾಡ್ ...ರು ಈ ಸಂಘಟನೆಯ ಉಪಾಧ್ಯಕ್ಷರಾಗಿದ್ದು ...ೂರರ ಮಾವ ಸಲೀಂ ಹಾಜಿ ಎಂಬವರು ...ಾಗಿದ್ದಾರೆ.

...ಿಯತ್ ನಿಯಮದಂತೆ ಮುಸ್ಲಿಂ ವಾರೀಸು ಹಕ್ಕು ... ಗೋಜಲು ಗೋಜಲಾಗಿದೆ. ಈ ಕುರಿತು ಸಮನಾಗಿ ...ನ ನಡೆಸಲು ವಿದ್ವಾಂಸರಿಗೆ ಒಂದು ವರ್ಷವಾದರೂ ...ಾಗುತ್ತದೆ. ಈಜಿಪ್ಟ್‌ನ 'ಅಲ್ ಅಸ್‌ಹರ್' ...ಾಲಯದಲ್ಲಿ ಇಸ್ಲಾಂ ಧಾರ್ಮಿಕ ನಿಯಮಗಳನ್ನು ...ಸಿದ್ದ ಓರ್ವ ಪ್ರಾಧ್ಯಾಪಕರಿಗೆ ವಾರೀಸು ಹಕ್ಕನ್ನು ... ಅಧ್ಯಯನ ನಡೆಸಿ ಅರ್ಥೈಸಿಕೊಳ್ಳಲು ನಾಲ್ಕು ...ಷ್ಟು ದೀರ್ಘ ಕಾಲ ಬೇಕಾಯಿತೆನ್ನಲಾಗಿದೆ. ಈಗ ...ಲ್ಲಿ ಈ ಕುರಿತು ಚರ್ಚೆ ನಡೆಸಲು ಖುರ್‌ಆನ್ ... ಸೊಸೈಟಿ ಮುಂದಾಗಿದೆ.





ವಾರೀಸು ಹಕ್ಕಿನಲ್ಲಿ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯಂತೆ ಕಾಣಲಾಗಿದೆ ಎಂದು ವಿದ್ವಾಂಸರೋರ್ವರೆಂದರು. ವಾರೀಸು ಹಕ್ಕು ಖುರ್‌ಆನ್ ನಿಯಮಗಳಿಗನುಸಾರವಾಗಿ ರಚಿಸಿಲ್ಲ. ಸಂಕೀರ್ಣವಾದ ಈ ನಿಯಮಗಳ ಕುರಿತು ಮುಸ್ಲಿಂ ಮತಪಂಡಿತರಲ್ಲಿ ಬಹಳ ಕಮ್ಮಿ ಜನರಷ್ಟೇ ಸಮನಾದ ತಿಳಿವಳಿಕೆಯುಳ್ಳವರಾಗಿದ್ದಾರೆ. ಎಷ್ಟೋ ಬಾರಿ ಗ್ರಂಥಗಳನ್ನು ಅಧ್ಯಯನ ಮಾಡಿಯೇ ಇವರು ವಿವಾದಗಳನ್ನು ಪರಿಹರಿಸಿಕೊಳ್ಳುತ್ತಾರೆ. ನ್ಯಾಯಾಲಯದಲ್ಲಿ ವಾರೀಸು ಹಕ್ಕುಗಳ ಮೊಕದ್ದಮೆ ವಾದಿಸುವ ನ್ಯಾಯವಾದಿಗಳಾಗಲಿ, ತೀರ್ಪು ನೀಡುವ ನ್ಯಾಯಾಧೀಶರಾಗಲಿ, ಡಿ.ಎಫ್. ಮುಲ್ಲಾ ಎಂಬವರ 'ಪ್ರಿನ್ಸಿಪಲ್ಸ್ ಆಫ್ ಮೋಡರ್ನ್ ಲಾ' ಎಂಬ ಕೃತಿಯನ್ನು ಆಧರಿಸಿ ವಾದ ಮಂಡಿಸುತ್ತಲೋ ತೀರ್ಪು ನೀಡುತ್ತಲೋ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ.

ವಾರೀಸು ಹಕ್ಕಿನಲ್ಲಿ ಓರ್ವನಿಗೆ ಹೆಣ್ಣುಮಕ್ಕಳು ಮಾತ್ರವಿದ್ದಾಗ ಒಬ್ಬಳೇ ಮಗಳಾದರೆ ತಂದೆತಾಯಿಯರ ಆಸ್ತಿಯಲ್ಲಿ ಕೇವಲ ಅರ್ಧಪಾಲು ಮಾತ್ರ ಆಕೆಯ ಪಾಲಿಗೆ ದೊರೆತು ಇನ್ನುಳಿದ ಅರ್ಧಭಾಗ ತಂದೆಯ ಸಹೋದರರು ಅವರ ಗಂಡುಮಕ್ಕಳು, ಅಜ್ಜ ಅಜ್ಜಿ ಬದುಕಿದ್ದರೆ ಅವರಿಗೂ ಹೋಗುತ್ತದೆ. ಒಂದಕ್ಕಿಂತ ಹೆಚ್ಚು ಹೆಣ್ಣುಮಕ್ಕಳು ಮಾತ್ರವಿದ್ದರೆ ಅವರಿಗೆ ತಂದೆಯ ಆಸ್ತಿಯ ಮೂರನೇ ಎರಡು (2/3) ಭಾಗ ಮಾತ್ರ ದೊರೆಯುತ್ತದೆ. ತಂದೆ ಬದುಕಿದ್ದು ಮಗ ಮೃತಪಟ್ಟಿದ್ದರೆ ಆತನ ವಿಧವೆ ಪತ್ನಿ ಮತ್ತು ಅನಾಥ ಮಕ್ಕಳಿಗೆ ಯಾವ ಪಾಲೂ ದೊರೆಯುವುದಿಲ್ಲ! ಗಂಡ ಹೆಂಡತಿಯ ವಿಷಯದಲ್ಲೂ ಗಂಡ ಸತ್ತರೆ ಹೆಂಡತಿಗೆ ಆತನ ಆಸ್ತಿಯಲ್ಲಿ 1/8 ಭಾಗ ಮಾತ್ರ ದೊರೆಯುತ್ತದೆ. ಹೆಂಡತಿ ಸತ್ತು ಗಂಡ ಬದುಕಿದ್ದರೆ ಆತನಿಗೆ ಹೆಂಡತಿಯ ಆಸ್ತಿಯ 1/4 ಭಾಗ ದೊರೆಯುತ್ತದೆ. ಹೆಂಡತಿ ಆಕೆಯ ತವರಿನಿಂದ ತಂದ ಆಸ್ತಿಯಲ್ಲಿ ಆತನ ಎರಡನೇ ಹೆಂಡತಿಯೂ ಆಕೆಯ ಮಕ್ಕಳೂ ಪಾಲು ಪಡೆಯುತ್ತಾರೆ. ಅಂದರೆ ಆ ಆಸ್ತಿಯಲ್ಲಿ ಯಾವ ಸಂಬಂಧವೂ ಇಲ್ಲದ ಯಾರ್‍ಯಾರಿಗೋ ಆಸ್ತಿಯ ಹಕ್ಕು ದೊರೆಯುತ್ತದೆ. ಗಂಡನಿಗೆ ಮೂವರು ಹೆಂಡತಿಯರಿದ್ದರೆ ಒಬ್ಬೊಬ್ಬರಿಗೆ 1/24 ಭಾಗ ಮಾತ್ರ ದೊರೆಯುತ್ತದೆ! ಇಂತಹ ನಿಯಮಗಳಿಂದಾಗಿಯೇ ನ್ಯಾಯಾಧೀಶ ಖಾಲಿದ್ ಅವರು ಈ ನಿಯಮಗಳನ್ನು ರಾಕ್ಷಸ ನಿಯಮಗಳೆಂದಿರಬಹುದು.

ತಂದೆಯ ಆಸ್ತಿಯಲ್ಲಿ ವಿಧವೆ ಸೊಸೆ ಮತ್ತು ಅನಾಥ ಮೊಮ್ಮಕ್ಕಳಿಗೆ ಪಾಲು ಕೊಡಬೇಕಾಗಿಲ್ಲವೆಂದು ಖುರ್‌ಆನ್ ಎಲ್ಲಿಯೂ ದಾಖಲಿಸಿಲ್ಲ ಎಂದಿದ್ದಾರೆ ಚೇಕನೂರ್ ಮೌಲವಿ. ವಾರೀಸು ಹಕ್ಕಿನ ಕುರಿತು ಇವರು ಒಂದು ಗ್ರಂಥವನ್ನೇ ರಚಿಸಿದ್ದಾರೆ. ಪಾಕಿಸ್ತಾನದಲ್ಲಿ ಅಯ್ಯೂಬ್ ಖಾನರ ಆಡಳಿತದಲ್ಲಿ ಈ ಸಮಸ್ಯೆ ಎದುರಾಗಿ ಈ ಅನ್ಯಾಯವನ್ನು ಮನಗಂಡ ಅಯ್ಯೂಬ್ ಖಾನರು, ಈ ಸಮಸ್ಯೆಯನ್ನು ಪರಿಹರಿಸಲು ಮೌಲವಿಗಳ ಅಭಿಪ್ರಾಯವನ್ನು ಆಹ್ವಾನಿಸಿದಾಗ ಚೇಕನೂರರು, ಅವರ ಸಂದೇಹವನ್ನು ಪರಿಹರಿಸಿ ವಿಧವೆ ಮತ್ತು ಅನಾಥ ಮಕ್ಕಳಿಗೆ ವಾರೀಸು ಹಕ್ಕು ನೀಡುವ ಕುರಿತು ವಿಶದೀಕರಿಸಿದ್ದರು. ಹೀಗಾಗಿ ಪಾಕಿಸ್ತಾನದಲ್ಲಿ ಈ ನಿಯಮದ ತಿದ್ದುಪಡಿ ಮಾಡಲಾಗಿದೆ.

ವಾರೀಸು ಹಕ್ಕಿನ ಕುರಿತು ಚೇಕನೂರರ ಅನುಯಾಯಿಗಳಾದ ಅಬ್ದುಲ್ ಅಲಿ ಮೌಲವಿ ಎಂಬುವರು ಒಂದು ಗ್ರಂಥ ರಚಿಸಿ ಕಳೆದವಾರ ನಡೆದ ಸಭೆಯಲ್ಲಿ ಬಿಡುಗಡೆಗೊಳಿಸಿದ್ದಾರೆ. ಇಸ್ಲಾಂ ಧಾರ್ಮಿಕ ನಿಯಮ (ಶರಿಯತ್) ಪ್ರಕಾರ ಉಯಿಲನ್ನೂ ಬರೆದಿಡುವಂತಿಲ್ಲ, ಮಕ್ಕಳಿಲ್ಲದ ಸಂದರ್ಭದಲ್ಲಿ ದತ್ತು ತೆಗೆದುಕೊಂಡರೂ, ಆತನಿಗೆ ಸಾಕು ತಂದೆತಾಯಿಗಳ ಆಸ್ತಿಯಲ್ಲಿ ಹಕ್ಕು ದೊರೆಯುವುದಿಲ್ಲ, ಇಂತಹ ಹಲವಾರು ನಿಯಮಗಳ ತಿದ್ದುಪಡಿಯಾಗಬೇಕು; ನಮ್ಮ ಸ್ವತ್ತುಗಳೇನಿದ್ದರೂ ಅದು ನಮ್ಮ ಸಂತತಿಗಳಿಗೆ ಮಾತ್ರ ದೊರೆಯಬೇಕು; ಈ ದೇಶದ ಸಂವಿಧಾನದಲ್ಲಿ ಎಲ್ಲ ಪ್ರಜೆಗಳಿಗೂ ಏಕರೀತಿಯಲ್ಲಿ ಅನ್ವಯಿಸುವಂತಹ ನಿಯಮಗಳಿರಬೇಕು; ಆದುದರಿಂದ ಏಕರೂಪ ನಾಗರಿಕ ಸಂಹಿತೆಗೆ ನಾವೆಲ್ಲರೂ ಬೆಂಬಲ ನೀಡಬೇಕು ಎಂಬುದು ನೆರೆದವರ ಒಕ್ಕೊರಲ ಧ್ವನಿಯಾಗಿತ್ತು.


● ಸಾರಾ ಅಬೂಬಕ್ಕರ್

▶▶ 2

ಜೀವಭಿಕ್ಷೆ ಪಡೆಯುತ್ತಾ ಎರಡನೇ ದರ್ಜೆ ಪ್ರಜೆಗಳನ್ನಾಗುವಂತೆ ಮಾಡುತ್ತದೆ. ಇದನ್ನೇ ಕರುಣೆ ಮತ್ತು ಮಾನವೀಯತೆ ಎನ್ನುವುದಾದರೆ ಅದರ ಅರ್ಥವನ್ನೇ ಬದಲಿಸಬೇಕಾಗುತ್ತದೆ.

ಆಧುನಿಕತೆಯ ತಾತ್ವಿಕತೆಯಿಂದ ಪ್ರೇರಣೆ ಪಡೆದ ಆಧುನಿಕ ನ್ಯಾಯಸಂಹಿತೆ ಶುಷ್ಕ ಮತ್ತು ಕೆಲವೊಮ್ಮೆ ದುಬಾರಿ ಸಾಕ್ಷಿ ಪುರಾವೆಗಳನ್ನಷ್ಟೆ ಆಧರಿಸುತ್ತದೆ. ಹಾಗೂ ಆದ್ದರಿಂದಲೇ ಆಧುನಿಕ ನ್ಯಾಯಾಲಯ ಬಹಳಷ್ಟು ಬಾರಿ ಅನ್ಯಾಯ ಮತ್ತು ಅಮಾನವೀಯತೆಯನ್ನೇ ಮಾನ್ಯ ಮಾಡುತ್ತದೆ. ಇದಕ್ಕೆ "ನ್ಯಾಯಾಂಗವು ಕಾಲದೇಶಗಳ ಪೂರ್ವಗ್ರಹಕ್ಕೆ ಪಕ್ಕಾಗಿರುತ್ತವೆ ಎಂಬ ಒರಟು ಕೂಗಿ"ನಲ್ಲಿರುವ ಸತ್ಯಾಂಶವನ್ನು ನಂದಿಯವರೂ ನಿರಾಕರಿಸುವುದಿಲ್ಲ. ನ್ಯಾಯದಾನ ಪ್ರಕ್ರಿಯೆಯಲ್ಲಿರುವ ಮೂಲ ಸಮಸ್ಯೆ ಇದು. ಆಧುನಿಕ ನ್ಯಾಯಸಂಹಿತೆಯಲ್ಲಿರುವ ಈ ಮೂಲಭೂತ ಲೋಪವು ಜನರ ನಂಬುಗೆಯನ್ನು ಮಾನದಂಡವಾಗಿ ಸ್ವೀಕರಿಸುವುದರಿಂದ ಬಗೆಹರಿಯುವುದೇ? ಹಾಗೆ ನೋಡಿದರೆ ಸಂವಿಧಾನಬದ್ಧತೆಯ ಲಕ್ಷಣರೇಖೆ ಮತ್ತು ಸಾಕ್ಷಿ ಪುರಾವೆಗಳ ಕಾವಲೂ ಇಲ್ಲದೆ ನೀಡುವ ನ್ಯಾಯದಾನ ಹೇಗೆ ಪ್ರಬಲರ ನಂಬುಗೆಯ ಪರವಾಗಿಯೇ ಇರುತ್ತದೆ ಎಂಬುದಕ್ಕೆ ಈ ತೀರ್ಪೇ ಒಂದು ನಿದರ್ಶನವಲ್ಲವೇ?

ನಂಬಿಕೆಗಳು, ಕುರುಡು ನಂಬಿಕೆಗಳು ಮತ್ತು ಅಶೀಶ್ ನಂದಿಗಳು!



ಈ ತೀರ್ಪನ್ನು ಸ್ವಾಗತಿಸಲು ಆಶೀಶ್ ನಂದಿಯವರು ಮುಂದಿಡುವ ಮತ್ತೊಂದು ಪ್ರಧಾನ ಕಾರಣ ಅದು ತಮ್ಮ ವ್ಯಾಜ್ಯವನ್ನು ಬಗೆಹರಿಸಿಕೊಳ್ಳಲು ಸ್ಥಳೀಯರಿಗೇ ಅವಕಾಶ ನೀಡಿರುವುದು. ಒಂದು ಸಮಾನ ಸ್ಥಾಯಿಗಳ ನಡುವೆ ಮತ್ತು ಪ್ರಭುತ್ವಶಕ್ತಿ ಹಾಗೂ ಸಾಮಾಜಿಕ ಬಲಗಳು ಒಂದು ಅಭಿಪ್ರಾಯದ ಬೆನ್ನ ಹಿಂದೆ ಇಲ್ಲದ ಸಂದರ್ಭದಲ್ಲಿ ಸ್ಥಳೀಯರೇ ತಮ್ಮ ಸಮಸ್ಯೆಗಳಿಗೆ ಅತ್ಯುತ್ತಮ ಪರಿಹಾರ ಕಂಡುಕೊಳ್ಳಬಹುದು. ಆದರೆ ಅಸಮಾನ ಅಧಿಕಾರ ಸಮೀಕರಣವಿರುವಂತ ಮತ್ತು ಶಕ್ತಿಬಲಗಳು ಪಾರಂಪರಿಕ ಉಚ್ಚ ಸಮುದಾಯಗಳ ಪರವಾಗಿಯೇ ಇರುವಂತ ಸ್ಥಳಿಯರಿಗೆ ನ್ಯಾಯಹಂಚಿಕೆ ಬಿಟ್ಟುಕೊಡುವುದೂ ಒಂದೇ, ಆ ಪ್ರದೇಶದಲ್ಲಿನ ಪ್ರಬಲರನ್ನು ನ್ಯಾಯಿಕ ಬಲದಿಂದಲೂ ಸಬಲೀಕರಿಸುವುದೂ ಒಂದೇ! ಉದಾಹರಣೆಗೆ ಖೈರ್ಲಾಂಜಿ, ಕಂಬಾಲಪಲ್ಲಿಯಂಥ ಜಾತಿ ದೌರ್ಜನ್ಯಗಳು ಸಂಭವಿಸಿದ ಕಡೆ ಸ್ಥಳೀಯ ಜನರಿಗೆ ನ್ಯಾಯದಾನದ ಅಧಿಕಾರವನ್ನು ಕೊಡುವುದರ ಪರಿಣಾಮವನ್ನು ಯೋಚಿಸಿ. ಜಾತಿ ಕ್ರೌರ್ಯದ ಬಲಿಪಶುಗಳಿಗೆ ಆಧುನಿಕ ನ್ಯಾಯಸಂಹಿತೆಯೂ ನ್ಯಾಯ ಒದಗಿಸಿಲ್ಲ ಎನ್ನುವುದು ನಿಜವೇ ಆದರೂ ಸ್ಥಳೀಯ ಜನರಿಗೆ ನ್ಯಾಯದಾನದ ಅಧಿಕಾರ ಕೊಡುವುದರಿಂದ ನ್ಯಾಯದ ಬದಲು ಅನ್ಯಾಯಕ್ಕೆ ಮಣೆಹಾಕಿದಂತಾಗುತ್ತದಷ್ಟೆ. ಉತ್ತರ ಭಾರತದ ಸ್ಥಳೀಯ ಜಾತಿ ನ್ಯಾಯಾಲಯಗಳಾದ ಖಾಪ್ ಪಂಚಾಯ್ತಿಗಳು ವರ್ಗ, ಲಿಂಗಾಧಾರಿತ ಅನ್ಯಾಯಗಳನ್ನು ಬಗೆಹರಿಸುವಾಗ ಅನುಸರಿಸಿರುವುದು ಪ್ರಬಲರ ಪರವಾದ ಮಾನದಂಡಗಳನ್ನೇ ಅಲ್ಲವೇ?

ಇಷ್ಟಕ್ಕೂ ಈ ತೀರ್ಪಿನಲ್ಲಿ ನಿಜಕ್ಕೂ ಪರಿಗಣಿತವಾಗಿರುವುದು "ಜನರ" ನಂಬುಗೆಯೇ? ವಾಸ್ತವವಾಗಿ ಬಾಬ್ರಿ ಮಸೀದಿ ಇದ್ದ ಜಾಗವೇ ರಾಮನ ಜನ್ಮಸ್ಥಾನ ಎಂಬುದು ಈ ದೇಶದ ಎಲ್ಲಾ ಜನರ ನಂಬುಗೆಯೇ? ರಾಮದೇವನೆಂದು ಆರಾಧಿಸದ ಹಿಂದೂಗಳು ಮತ್ತು ಇತರ ಧರ್ಮೀಯರೇ ಈ ದೇಶದಲ್ಲಿ ಬಹುಸಂಖ್ಯಾತರು. ರಾಮ ದೇವನೆಂದು ನಂಬುವವರೂ ಸಹ ಆತ ಬಾಬ್ರಿ ಮಸೀದಿಯಿದ್ದ ಜಾಗದಲ್ಲಿ ಹುಟ್ಟಿದ್ದು ಎಂದೇನೂ ನಂಬಿಕೊಂಡಿರಲಿಲ್ಲ. ಅದು ಜನರ ನಂಬುಗೆಯ ಭಾಗವಾಗಿದ್ದೇ ಬಲಪಂಥೀಯ ರಾಜಕಾರಣದಿಂದಲ್ಲವೇ? ನ್ಯಾಯಮೂರ್ತಿ ಅಗರ್‌ವಾಲ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ರಾಮ ಇಲ್ಲಿ ಜನಿಸಿದ್ದ ಎಂಬುದು ಹಿಂದೂಗಳ ನಂಬಿಕೆಯ ಭಾಗವಾದ್ದರಿಂದ ಅದು ಹಿಂದೂ ಧರ್ಮದ ಭಾಗವೂ ಆಗಿಬಿಡುತ್ತದೆ. ಆದ್ದರಿಂದ ಆರ್ಟಿಕಲ್ 25ರ ಪ್ರಕಾರ ಇಲ್ಲಿ ದೇವಸ್ಥಾನದ ನಿರ್ಮಾಣ ಅವರ ಧಾರ್ಮಿಕ ಹಕ್ಕಿನ ಭಾಗವೂ ಆಗಿಬಿಡುತ್ತದೆ" ಎಂದು ತೀರ್ಪಿತ್ತಿದ್ದಾರೆ. ಹೀಗೆ ಈ ತೀರ್ಪು "ನಂಬುಗೆ"ಯನ್ನು ಕೇವಲ ವ್ಯಕ್ತಿಗಳ-ಸಮೂಹದ ಭಾವಲೋಕದ ಬದ್ಧತೆಯನ್ನಾಗಿ ಮಾತ್ರ ಉಳಿಸದೆ ಅದನ್ನು ಸ್ಪರ್ಧಾತ್ಮಕ ಹಕ್ಕಿನ ರಾಜಕಾರಣದಲ್ಲಿ ಬಲಪಂಥೀಯರ ಪ್ರಬಲ ಅಸ್ತ್ರವನ್ನಾಗಿಯೇ ಮಾಡಿಬಿಟ್ಟಿದೆ.

ಇನ್ನು ಈ ರೀತಿಯಲ್ಲಿ ಮ್ಯಾನಿಪುಲೇಟ್ ಮಾಡಬಲ್ಲ ನಂಬುಗೆಯೇ ನ್ಯಾಯದಾನದ ಮಾನದಂಡವಾಗಿ ಬಿಡುವುದರ ಪರಿಣಾಮವೇನು? ಈಗಾಗಲೇ ಸಂಘಪರಿವಾರ ಇನ್ನೂ 2000 ಮಸೀದಿ ಹಾಗೂ ಚರ್ಚುಗಳಲ್ಲಿ ತಮ್ಮ ದೈವ ಹುಟ್ಟಿದೆಯೆಂಬುದು ತಮ್ಮ ನಂಬುಗೆಯೆಂಬ ವಾದ ಮಂಡಿಸಿದ್ದಾರೆ. ಆ ನಂಬುಗೆಗಳನ್ನು ಯಾವ ಆಧಾರದಲ್ಲಿ ಪುರಸ್ಕರಿಸಬೇಕು? ಅಥವಾ ತಿರಸ್ಕರಿಸಬೇಕು? ಅದರ ಮಾನದಂಡಗಳು ವಸ್ತುನಿಷ್ಠವಾಗಿರಬೇಕೋ? "ನಂಬುಗೆ" ನಿಷ್ಠವಾಗಿರಬೇಕೊ?

ಜನರ ನಂಬಿಗೆಯ ಲೋಕದ ಬಗ್ಗೆ ನಂದಿಯವರ ವಿಚಾರವನ್ನು ಸಂಪೂರ್ಣವಾಗಿ ಒಪ್ಪಿಕೊಂಡರೂ ಅಲಹಾಬಾದ್ ಕೋರ್ಟಿನ ತೀರ್ಪನ್ನು ಜನರ ನಂಬುಗೆಯನ್ನು ಮಾನದಂಡವಾಗಿ ಸ್ವೀಕರಿಸಿದ ಅಥವಾ ಕರುಣಾಮಯಿ ಲ್ಯಾಂಡ್‌ಮಾರ್ಕ್ ತೀರ್ಪೆಂದು ಭಾವಿಸಲು ಸಾಧ್ಯವಿಲ್ಲ. ಇದು ನಂದಿಯವರಿಗೆ ಅರ್ಥವಾಗದಂಥ ನಿಗೂಢವೂ ಅಲ್ಲ.

ನಂಬುಗೆಗಳು ಸದಾ ಪರಾಧೀನವೂ ಅಲ್ಲ, ಸದಾ ಸ್ವತಂತ್ರವೂ ಅಲ್ಲ. ರಾಮಜನ್ಮಭೂಮಿ ವಿವಾದ, ಗುಜರಾತ್ ನರಮೇಧ ಮತ್ತು ಆ ನಂತರವೂ ಗುಜರಾತಿನ ಜನರು ನರೇಂದ್ರ ಮೋದಿಯನ್ನು ಆಯ್ಕೆ ಮಾಡಿದ್ದು ಇವೆಲ್ಲವೂ ಜನರ ನಂಬುಗೆಯ ಸದಾ ನ್ಯಾಯ ಮತ್ತು ಸತ್ಯದ ಪರವಾಗಿಯೇನೂ ಇರುವುದಿಲ್ಲ ಎಂಬುದನ್ನೂ ಮತ್ತವು ಬಾಹ್ಯ ಜಗತ್ತಿನ ಪ್ರಭಾವಕ್ಕೆ ಪಕ್ಕಾಗಿರುತ್ತದೆಂಬುದನ್ನು ಸೂಚಿಸುತ್ತದೆ. "ಇಂದು ಅಂದಿನಂತೆ ಬಹುಸಂಖ್ಯಾತ ಹಿಂದೂಗಳು ಮಸೀದಿ ನಾಶ ತಪ್ಪು ಎನ್ನುವುದಿಲ್ಲ" ಎಂದು ನಂದಿಯವರು ಒಪ್ಪಿಕೊಳ್ಳುವಾಗ ಅವರು ಸೂಚಿಸುತ್ತಿರುವುದು ಇದನ್ನೇ ಅಲ್ಲವೇನು? ಅದನ್ನು ಜನರ False Consciousness ಎಂದು ಬಿಡುವುದು ಮಾರ್ಕ್ಸ್‌ವಾದಿಗಳ ಸಿದ್ಧಾಂತ ಕುರುಡುತನ ಎಂದು ನಂದಿಯವರೇ ಜರೆಯುತ್ತಾರೆ. ಹಾಗಿದ್ದಲ್ಲಿ ಜನರ ನಂಬುಗೆಗಳಲ್ಲಿ ನ್ಯಾಯಯುತವಾದದ್ದು ಮತ್ತು ಅನ್ಯಾಯಯುತವಾದ ಮೌಲ್ಯಗಳೆರಡೂ ವರ್ತಮಾನದ ಬದುಕಿನಲ್ಲಿ ಸದಾ ಜೀವಂತ ಸಂಘರ್ಷದಲ್ಲಿರುತ್ತದೆ. ಹೀಗಾಗಿ ಜನರ ನಂಬುಗೆಗಳು ಯಾವತ್ತೂ ಕರುಣೆ ಮತ್ತು ಮಾನವೀಯತೆಗಳ ರಿಪಾಸಿಟರಿಯಾಗಿರುತ್ತದೆ ಎಂಬುದು ನಂಬುಗೆಯಲ್ಲ, ಕುರುಡು ನಂಬಿಕೆಯಷ್ಟೆ.

ಜನರ ನಂಬುಗೆ ಗತದಲ್ಲಿ ಬೇರುಬಿಟ್ಟಿದ್ದರೂ ವರ್ತಮಾನದಲ್ಲಿ ಹೊಸ ರೂಪದಲ್ಲಿ ಪುನರುಜ್ಜೀವಗೊಳ್ಳುತ್ತಿರುತ್ತದೆ. ಚಲನಶೀಲವಾಗಿರುತ್ತದೆ. ತನ್ನದೇ ಜೀವನಾನುಭವ, ಹಿತಾಸಕ್ತಿ, ಬಾಹ್ಯ ಪರಿಸರ ಇವುಗಳ ನಡುವಿನ ಜೀವಂತ ಸಂಘರ್ಷ ಮತ್ತು ಅನುಸಂಧಾನಗಳಲ್ಲಿ ಎರಕಗೊಳ್ಳುತ್ತಿರುತ್ತದೆ. ಹೀಗಾಗಿ ವರ್ತಮಾನದ ಬದುಕಿನಲ್ಲಿ ನ್ಯಾಯಪ್ರಜ್ಞೆಯನ್ನು ಉಳಿಸುವ ಬೆಳೆಸುವ ಪ್ರಕ್ರಿಯೆಯೇ ಜನರ ನಂಬುಗೆಗಳಲ್ಲಿ ಅಡಕವಾಗಿರುವ ನ್ಯಾಯ, ಕರುಣೆ ಮತ್ತು ಮಾನವೀಯ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿರುತ್ತದೆ.

ಇಂದು ಬಾಬಾಬುಡನ್‌ಗಿರಿಯಲ್ಲಿ ಕರುಣೆ ಹಾಗೂ ಮಾನವೀಯತೆಯನ್ನು ಪ್ರತಿಪಾದಿಸಿದ ಸೂಫೀ-ನಾಥ ಸಂಸ್ಕೃತಿಯ ಮಿಲನದ ಆಧ್ಯಾತ್ಮವನ್ನು ಕೇಸರೀಕರಿಸುವ ಪ್ರಯತ್ನವನ್ನು ಹಿಂದೂತ್ವವಾದಿಗಳು ನಡೆಸುತ್ತಿದ್ದಾರೆ. ಅದನ್ನು ವಿರೋಧಿಸುತ್ತಾ ಕಳೆದ ಹತ್ತು ವರ್ಷದಿಂದ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹೋರಾಟ ನಡೆಸುತ್ತಿದೆ. ಇದೂ ಆಧುನಿಕತೆಯ ಹೋರಾಟವೋ? ಜನರ ನಂಬುಗೆಯನ್ನು ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟವೋ? ನನ್ನ ಪ್ರಕಾರ ಅದು ಏಕಕಾಲದಲ್ಲಿ ಗತದ ಜನಪದರ ಜನತಂತ್ರವನ್ನು ಉಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಆಧುನಿಕ ಜನತಂತ್ರದ ತಳಹದಿಯನ್ನು ಇನ್ನಷ್ಟು ಆಳಗೊಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟವೇ ಆಗಿದೆ. ಜನರ ನಂಬುಗೆಯಲ್ಲಿರುವ ಕರುಣೆ ಮತ್ತು ಮಾನವೀಯತೆಗಳನ್ನು ಉದ್ದೀಪನಗೊಳಿಸಿ ಅದನ್ನು ಮಾನ್ಯ ಮಾಡುವಷ್ಟರಮಟ್ಟಿಗೆ ಆಧುನಿಕ ಪ್ರಜಾತಂತ್ರವನ್ನು ಪ್ರಬುದ್ಧಗೊಳಿಸುವ ಹೋರಾಟವಾಗಿದೆ. ಸಂಘರ್ಷ ಹಾಗೂ ಅನುಸಂಧಾನಗಳ ಮೂಲಕ ಹೊಸಬಗೆಯ ಆಧುನಿಕತೆಯ ವ್ಯಾಖ್ಯಾನವನ್ನು ಹುಟ್ಟುಹಾಕಬಲ್ಲ ಸಾಧ್ಯತೆಯಾಗಿದೆ.


ನಂದಿಯವರು ಕೇವಲ ಉಗ್ರ ಸೆಕ್ಯುಲರಿಸಂ ಅನ್ನು ಮಾತ್ರ ಆಧುನಿಕತೆಯ ಏಕೈಕ ಮಾದರಿಯೆಂದು ಭಾವಿಸುವುದರಿಂದಲೇ ಇಂಥ ಕ್ರೌರ್ಯರಹಿತ, ನೈಜ ಪ್ರಜಾತಾಂತ್ರಿಕ ಆಧುನಿಕತೆಯ ಸಾಧ್ಯತೆಗಳ ಕಡೆಗೆ ಕುರುಡಾಗಿದ್ದಾರೆ. ಅಂಬೇಡ್ಕರ್, ಫುಲೆ ಇವರೆಲ್ಲರೂ ಪ್ರಯತ್ನಿಸಿದ್ದು ಇಂಥಾ ಆಧುನಿಕತೆಗೇ! ಅಂಥಾ ಸೈದ್ಧಾಂತಿಕ ಪ್ರಸ್ಥಾನ ಸಾಧ್ಯವಾಗಬೇಕೆಂದರೆ ಆಧುನಿಕತೆಯ ಆಚಾರ್ಯರೂ ಮತ್ತು ಆಶಿಶ್ ನಂದಿಯವರು ಇಬ್ಬರೂ ದ್ವೈಮಾನಿಕತೆಗಳ ಸ್ವಯಂಕೃತ ದ್ವಂದ್ವಗಳಿಂದ ಹೊರಬರಬೇಕು. ಮೊದಲು ತಾವು ತಲೆಕೆಳಗಾಗಿ ಜೋತುಬಿದ್ದಿರುವ ಅಹಂಕಾರದ ಅಶ್ವತ್ಥಮರಗಳಿಂದ ಕೆಳಗಿಳಿಯಬೇಕು.. ಏಕೆಂದರೆ ಚಲನಶೀಲವಲ್ಲದ, ವಾಸ್ತವಕ್ಕೆ ಕುರುಡಾದ ಸಿದ್ಧಾಂತ ಕೊಳೆಯತೊಡಗುತ್ತದೆ. ಅಡಿಗರು ಒಂದು ಕಡೆ ಹೇಳುವಂತೆ "ಕೊಳೆಯತೊಡಗಿದರೆ ಒಳ್ಳೆಯದು, ಕೆಟ್ಟದ್ದು ಎಲ್ಲವೂ ಒಂದೇ.. ಬರೀ ದುರ್ನಾತ!" ●

ಕಾಮನಬಿಲ್ಲು ಕೇಸರಿಯಾಗುತ್ತಿರುವ ಬಗೆಯನ್ನು ಬಣ್ಣಿಸುವ ಕೃತಿ

ಬಹುಸಂಸ್ಕೃತಿಗಳ, ಬಹುಭಾಷೆಗಳ, ಬಹುಧರ್ಮಗಳ ನೆಲೆವೀಡಾದ ಕರಾವಳಿ ಕರ್ನಾಟಕ, 'ತುಳುನಾಡು', ಹಿಂದೂತ್ವದ ಏಕರೂಪಿ ಸಂಸ್ಕೃತಿಯ ಆಡುಂಬೊಲವಾದದ್ದು ಹೇಗೆ? ಪರಸ್ಪರ ಗೌರವ ಮತ್ತು ಸೌಹಾರ್ದತೆಯಿಂದ ಬದುಕುತ್ತಾ ಕರ್ನಾಟಕಕ್ಕೆ ವಿಶಿಷ್ಟವಾದ 'ತುಳುನಾಡ'ನ್ನು ರೂಪಿಸಿದ್ದ ಈ ಪ್ರದೇಶ ಇಡೀ ಕರ್ನಾಟಕದ ಸೌಹಾರ್ದ ಪರಂಪರೆಗೇ ಸವಾಲು ಹಾಕುವಂತೆ ಹಿಂದೂತ್ವ ಭಯೋತ್ಪಾದನೆಯ ಕೇಂದ್ರವಾಗಿದ್ದು ಹೇಗೆ? ವಿವಿಧ ಧರ್ಮೀಯರು ಕೊಡು-ಕೊಳೆ ಮಾಡುತ್ತಾ ಬದುಕುವುದಿರಲಿ, ಪರಸ್ಪರ ಮಾತನಾಡುವುದೇ ಅಪರಾಧ ಎಂಬಂತೆ ಬದಲಾದದ್ದು ಹೇಗೆ? ಇದೇ ಇನ್ನಿತ್ಯಾದಿ ಪ್ರಶ್ನೆಗಳು ಜನತೆಯನ್ನು ಮತ್ತು ವಿದ್ವಾಂಸರನ್ನು ಬಹಳ ವರ್ಷಗಳಿಂದ ಕಾಡುತ್ತಲೇ ಬಂದಿದೆ. ಇದಕ್ಕೆ ಉತ್ತರ ಹುಡುಕುವ ಪ್ರಯತ್ನಗಳು ಸಹ ಹಲವು ವಿದ್ವಾಂಸರಿಂದ ಮತ್ತು ಹೋರಾಟ ನಿರತ ಸಂಘಟನೆಗಳಿಂದ ನಡೆದಿದೆ.

ಅಂಥ ಮತ್ತೊಂದು ಪ್ರಯತ್ನದ ಭಾಗವಾಗಿಯೇ 'ಕಡಲತಡಿಯ ತಲ್ಲಣ-ಕರಾವಳಿಯ ಬಹುಸಂಸ್ಕೃತಿ ಕುರಿತಾದ ಲೇಖನಗಳು' ಎಂಬ ಈ ಪುಸ್ತಕವೂ ರೂಪುಗೊಂಡಿದೆ. ಇದು ಮೇಲಿನ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿ ಹುಡುಕಾಟದಲ್ಲಿ ತೊಡಗಿದ್ದವರ ಅಭಿಪ್ರಾಯಗಳ ಸಂಗ್ರಹವೆಂದರೂ ನಡೆಯುತ್ತದೆ. ಇದರಲ್ಲಿ ೩೦ಕ್ಕೂ ಹೆಚ್ಚು ಲೇಖನಗಳು, ಬೊಳುವಾರರ 'ಒಂದು ಗೋಡೆಯ ತುಂಡು' ಕತೆ ಮತ್ತು ಈ ಕಾಲದ ತಲ್ಲಣವನ್ನು ಹಿಡಿದಿಡುವ ಕವನಗಳು ಇವೆ. ಈ ಸಂಗ್ರಹದ ಸಂಪಾದಕರಾದ ಉಷಾ ಕಟ್ಟೆಮನೆ ಮತ್ತು ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಪ್ರಸ್ತಾವನೆಯಲ್ಲಿ ಹೇಳುವಂತೆ "ತುಳುನಾಡಿನ ಕ್ರಿಯಾಶೀಲ ಮನಸ್ಸುಗಳು ಇತ್ತೀಚೆಗೆ ಸಂಭವಿಸುತ್ತಿರುವ ಘಟನೆಗಳಿಗೆ ಹೇಗೆ ಪ್ರತಿಕ್ರಿಯಿಸಿವೆ ಮತ್ತು ಇಲ್ಲಿ ಬಹುಸಂಸ್ಕೃತಿಯ ನೆಲೆಗಳು ಹೇಗೆ ವಿಸ್ತಾರವಾಗಿ ಮತ್ತು ಆಳವಾಗಿ ನೆಲೆಯೂರಿದೆ ಎಂಬುದನ್ನು ದಾಖಲಿಸುವ ಪ್ರಯತ್ನವಿದು." ಹೀಗಾಗಿ ಕರಾವಳಿ ಕರ್ನಾಟಕದ ಮಾತ್ರವಲ್ಲ, ಹಿಂದೂತ್ವ ರಾಜಕಾರಣದಿಂದ ಕಂಗೆಡುತ್ತಿರುವ ಒಟ್ಟಾರೆ ಕರ್ನಾಟಕದ ಭೂತ, ವರ್ತಮಾನ ಮತ್ತು ಭವಿಷ್ಯವನ್ನು ಅರ್ಥಮಾಡಿಕೊಳ್ಳಲು ಈ ಪುಸ್ತಕ ಒಂದು ಒಳ್ಳೆಯ ಕೈಪಿಡಿ ಎಂದರೂ ತಪ್ಪಿಲ್ಲ.

ಪುಸ್ತಕದಲ್ಲಿರುವ ಖ್ಯಾತ ವಿದ್ವಾಂಸರಾದ ಅಮೃತ ಸೋಮೇಶ್ವರರ ಲೇಖನವು ಕರಾವಳಿ ಕರ್ನಾಟಕದ ಜನಜೀವನ ಮತ್ತು ಸಂಸ್ಕೃತಿ ಪ್ರಧಾನವಾಗಿ ಅವೈದಿಕ ಜೈನ, ಬುದ್ಧ ಮತ್ತಿತರ ಶ್ರವಣ ಸಂಸ್ಕೃತಿ ಮತ್ತು ಧರ್ಮಗಳ ಗಾಢಪ್ರಭಾವಕ್ಕೆ ಒಳಗಾಗಿದೆಯೆಂಬುದನ್ನು ವಿವರಿಸುತ್ತದೆ. ಎಸ್.ಡಿ.ಶೆಟ್ಟಿ ಮತ್ತು ಮರಿಯಪ್ಪ ಭಟ್ಟರ ಲೇಖನಗಳು ತುಳುನಾಡು ಹೇಗೆ ಬಹುಭಾಷಾ ಮತ್ತು ಬಹುಸಂಸ್ಕೃತಿಗಳ ನೆಲೆವೀಡಾಗಿತ್ತು ಎಂದು ವಿವರಿಸುತ್ತವೆ. ಜೊತೆಗೆ ಇಂಥಾ ಪ್ರದೇಶದಲ್ಲಿ ನಿಧಾನವಾಗಿ ಆದರೆ ದೃಢವಾಗಿ ಹೇಗೆ ವೈದಿಕ ಧರ್ಮಗಳು ಬೇರುಬಿಟ್ಟವು ಎಂಬುದನ್ನು ಆ ಲೇಖನಗಳು ವಿವರಿಸುತ್ತವಾದರೂ ಈ ಪರಿವರ್ತನೆ ಶಾಂತಿಯುತವಾಗಿ ನಡೆಯಿತೆಂಬ ಮರಿಯಪ್ಪ ಭಟ್ಟರ ವಾದ ಒಪ್ಪಲು ಕಷ್ಟ. ಉಷಾ ಕಟ್ಟೆಮನೆ ಹಾಗೂ ಇನ್ನಿತರರ ಲೇಖನಗಳು ತುಳುನಾಡಿಗೆ ವಿಶಿಷ್ಟವಾದ ಭೂತಾರಾಧನೆಯು ಹೇಗೆ ಒಂದು ರೀತಿಯಲ್ಲಿ ವೈದಿಕ ದಮನದ ವಿರುದ್ಧ ಶೂದ್ರ ಪರಂಪರೆಗಳ ಜೀವಂತ ಬಂಡಾಯವಾಗಿತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಅಲ್ಲದೆ ಆ ಭೂತಗಳ ಪಟ್ಟಿಯಲ್ಲಿ ಅಲಿ ಭೂತದಂತ ಮುಸ್ಲಿಮ್ ಭೂತಗಳು ಯಾವುದೇ ಧಾರ್ಮಿಕ ಭಿಡೆಯಿಲ್ಲದೆ ಸೇರ್ಪಡೆಯಾಗಿರುವುದು ಸೌಹಾರ್ದ ಬದುಕೆಂಬುದು ಹೇಗೆ ತುಳುನಾಡಿನ ಅಂತರ್ಗತ ಸಂಸ್ಕೃತಿಯೇ ಆಗಿತ್ತೆಂಬುದನ್ನು ಪರಿಚಯಿಸುತ್ತಾರೆ. ಇದರ ಜೊತೆಗೆ ಡಾ. ಗಾಯತ್ರಿ ನಾವಡರ ತುಳುನಾಡಿನ ಪಾಡ್ದನಗಳ ಸ್ತ್ರೀವಾದಿ ವಿವರಣೆ ಹೇಗೆ ಕರಾವಳಿಯ ಸ್ತ್ರೀಯರು ಮೊದಲಿಂದಲೂ ಸ್ವಾತಂತ್ರ ಪ್ರಿಯರಾಗಿದ್ದು ಊಳಿಗಮಾನ್ಯ ಪುರುಷಾಧಿಪತ್ಯವನ್ನು ವಿರೋಧಿಸುತ್ತಾ ಬಂದಿದ್ದರೆಂಬುದನ್ನು ದಾಖಲಿಸುತ್ತದೆ. ಬಿ.ಎಂ ಇಚ್ಲಂಗೋಡ್‌ರ ಲೇಖನವು ಹೇಗೆ ಕರಾವಳಿಯ ಬ್ಯಾರಿ ಮುಸ್ಲಿಮರು ತುಳುನಾಡಿನ ಅನನ್ಯತೆಯ ಭಾಗವೇ ಆಗಿದ್ದು ಆ ಪ್ರದೇಶದ ಸಂಸ್ಕೃತಿ ಮತ್ತು ಧರ್ಮಗಳಿಗೆ ಕೊಡುಗೆ ಕೊಟ್ಟಿದ್ದಾರೆ ಎಂಬುದನ್ನು ದಾಖಲಿಸುತ್ತದೆ. ಹೀಗೆ ಈ ಲೇಖನಗಳು ಕರಾವಳಿಯ ಶ್ರೀಮಂತ ಬಹುಸಂಸ್ಕೃತಿಯ ಪರಿಚಯವನ್ನು ಮಾಡಿಕೊಟ್ಟು ಹಿಂದೂತ್ವದ ದಾಳಿಯಿಂದ ನಾವು ಕಳೆದುಕೊಳ್ಳುತ್ತಿರುವುದೇನು ಎಂಬುದನ್ನು ಅರ್ಥಪಡಿಸುತ್ತವೆ.



ಇದಕ್ಕೆ ಪೂರಕವಾಗಿ ಫಕೀರ್ ಮಹ್ಮದ್ ಕಟ್ಪಾಡಿ, ಯು.ಆರ್. ಅನಂತಮೂರ್ತಿ, ಎಸ್. ಆರ್. ವಿಜಯಶಂಕರರು ತಾವು ಬಾಲ್ಯದಲ್ಲಿ ಕಂಡ ಕರಾವಳಿಯ ನೆನಪುಗಳು ದಾಖಲಿಸಿದ್ದು ಅವುಗಳು ಕರಾವಳಿ ಕರ್ನಾಟಕದ ಶ್ರೀಮಂತ, ಮಾನವೀಯ, ಸೌಹಾರ್ದ ಸಂಸ್ಕೃತಿಯನ್ನು ಹಲವು ಪದರಗಳಲ್ಲಿ ನಮ್ಮೆದುರು ಬಿಚ್ಚಿಡುತ್ತವೆ. ಜನರು ತಮ್ಮ ಬದುಕಿನಿಂದ ಕಂಡುಕೊಂಡ ಮಾನವೀಯತೆಯ ನೆಲೆಗಳು ಹೇಗೆ ಸಾಂಸ್ಥಿಕ ಧರ್ಮದ ಗೋಡೆಗಳನ್ನು ದಾಟಿ ಸಹಜ ಮನುಷ್ಯ ಪ್ರೀತಿಯನ್ನು ಹುಟ್ಟುಹಾಕುತ್ತಿದ್ದವು ಎಂಬುದಕ್ಕೆ ಇವೆಲ್ಲಾ ಸಾಕ್ಷಿಗಳಾಗಿವೆ. ಹಾಗೆಯೇ ಬೊಳುವಾರು ಮೊಹಮ್ಮದ್ ಕುಂಞರವರ 'ಒಂದು ತುಂಡು ಗೋಡೆ' ಕಥೆ ಏಕಕಾಲದಲ್ಲಿ ಲೌಕಿಕ ಮನುಷ್ಯರಲ್ಲೂ ಇರುವ ನೈತಿಕ ಪ್ರಜ್ಞೆಗಿಂತ ಮಿಗಿಲಾದ ಧರ್ಮವಿಲ್ಲ ಎಂದು ಹೇಳುತ್ತಲೇ ಹಿಂದೂತ್ವದ ಬಿರುಗಾಳಿ ಕರಾವಳಿಯಲ್ಲಿ ಮೆತ್ತಗೆ ತರುತ್ತಿದ್ದ ಬದಲಾವಣೆಗಳನ್ನು ಸಹ ವಿಷಾದದಿಂದಲೇ ದಾಖಲಿಸುತ್ತದೆ. ಕರಾವಳಿ ಕರ್ನಾಟಕದ ಸಾಮಾಜಿಕ ಸಂರಚನೆಯಲ್ಲಿ ಬೀಡಿ ಕೈಗಾರಿಕೆ, ಗೋಡಂಬಿ ಮತ್ತು ಹೆಂಚಿನ ಕಾರ್ಖಾನೆಗಳಂಥ ಆಧುನಿಕ ಕೈಗಾರಿಕೆಗಳು ಮತ್ತು ದೇವರಾಜ್ ಅರಸರ ಭೂಸುಧಾರಣೆ ಕಾರ್ಯಕ್ರಮಗಳು ಯಾವ ರೀತಿಯ ಬದಲಾವಣೆ... ತಂದವೆಂಬುದನ್ನು ಹೆಚ್. ನಾಗವೇಣಿಯವರ ... ಮನೋಜ್ಞವಾಗಿ ಕಟ್ಟಿಕೊಡುತ್ತದೆ. ಈ ಕ್ರಮಗಳು ... ಶೂದ್ರ ಬಿಲ್ಲವ ಮತ್ತು ರೈತ ಕೂಲಿ ದಲಿತರ ... ಬ್ರಾಹ್ಮಣ ಮತ್ತು ಭಂಟ ಭೂಮಾಲಿಕರ ಊಳಿಗ... ಹಿಡಿತವನ್ನು ಕಡಿತಗೊಳಿಸಿದ್ದಲ್ಲದೆ ರಾಜಕಾರಣದಲ್ಲೂ ... ಸಂಖ್ಯೆಯಲ್ಲಿ ಶೂದ್ರರ ಪ್ರವೇಶಕ್ಕೆ ಅವಕಾಶ ಒದಗಿ...

ಈ ಕಾಲಘಟ್ಟದ ನಂತರದ ಬೆಳವಣಿಗೆಗಳೇ ಕ... ಕರ್ನಾಟಕದಲ್ಲಿ ಹಿಂದೂತ್ವಕ್ಕೆ ಬಲವಾದ ಅಸ್ತಿಭಾ... ಹಾಕಿಕೊಟ್ಟಿತೆಂದು ಹಿರಿಯ ವಿದ್ವಾಂಸರು ಮತ್ತು... ಕರ್ತರೂ ಆದ ಡಾ. ಮುಜಾಫರ್ ಅಸ್ಸಾದಿ, ದ... ಅಮೀನ್‌ಮಟ್ಟು, ಜಿ.ಎನ್. ಮೋಹನ್, ಶಶಿಧರ್ ... ಭಾಸ್ಕರ್ ಹೆಗಡೆ ಹಾಗೂ ಇನ್ನಿತರರು ತಮ್ಮ ಲೇಖನ... ಸ್ಪಷ್ಟಪಡಿಸುತ್ತಾರೆ. 90ರ ದಶಕದಲ್ಲಿ ಜಾಗತೀಕರಣದ ... ಸಿಲುಕಿ ಬೀಡಿ ಕೈಗಾರಿಕೆ, ಹೆಂಚಿನ ಕೈಗಾರಿಕೆ ... ಇನ್ನಿತರ ಹಳೆಯ ಉದ್ಯಮಗಳು ಕುಸಿದವು. ಅದೇ ಸ... ದಲ್ಲಿ ಸರ್ಕಾರಿ ಕ್ಷೇತ್ರವೂ ಉದ್ಯೋಗವನ್ನು ಒದ... ಶಕ್ತಿಯನ್ನು ಕಳೆದುಕೊಂಡಿತ್ತು, ಹೀಗಾಗಿ ಅಪಾರ ಪ್ರಮ... ನಿರುದ್ಯೋಗಿ ಯುವಕರು ದಕ್ಷಿಣ ಕನ್ನಡದ ಬೀದಿ... ತುಂಬಿಕೊಂಡಾಗ ಅವರ ಕಿವಿಗೆ ಬಿದ್ದದ್ದು ಹಿಂದು... ಘೋಷಣೆಗಳು. ಇದಲ್ಲದೆ ಕರಾವಳಿಯಲ್ಲಿ ಮು... ಮತ್ತು ಹಿಂದೂ ಮೇಲ್ಜಾತಿ ವ್ಯಾಪಾರಿಗಳ ನ... ಸಹಜವಾಗಿಯೇ ಇದ್ದ ವೃತ್ತಿ ವೈಷಮ್ಯಗಳನ್ನೂ ... ಹಿಂದೂತ್ವವಾದಿಗಳು ತಮ್ಮ 'ದ್ವೇಷದ' ರಾಜಕಾರ... ಬಿತ್ತಲು ಯಶಸ್ವಿಯಾಗಿ ಬಳಸಿಕೊಂಡಿದ್ದನ್ನು ಈ ವಿದ್ವಾ... ದಾಖಲಿಸುತ್ತಾರೆ. ನಂತರ ನಡೆದಿರುವ ಇತಿಹಾಸ ... ಕಣ್ಣಮುಂದಿದೆ. ಇದು ಬೆಳೆದು ಹೇಗೆ ಕರಾವಳಿಯ... ಜೀವನವೂ ನರಕಪ್ರಾಯವಾಗಿದೆ ಎಂಬುದಕ್ಕೆ ಗು... ಬಿಳಿಮಲೆಯವರ ಲೇಖನ ಸಾಕ್ಷಿ ಒದಗಿಸುತ್ತದೆ.

ಇವೆಲ್ಲವನ್ನೂ ಒಂದು ಸ್ಪಷ್ಟ ಸೈದ್ಧಾಂತಿಕ ಬೆ... ಅರ್ಥಮಾಡಿಕೊಳ್ಳಲು ಮತ್ತು ಸೌಹಾರ್ದ ರಾಜಕಾರ... ಪರಿಣಾಮಕಾರಿಯಾಗಿ ಬೆಳೆಸಲು ಬೇಕಾದ ಸೂ... ಒಳನೋಟಗಳನ್ನು ಡಾ.ಜಿ. ರಾಮಕೃಷ್ಣ ಕೆ.ವಿ.ತಿರುಮ... ಡಿ.ಎಸ್. ನಾಗಭೂಷಣ ಮತ್ತು ಸಾರಾ ಅಬೂಬ... ಅವರ ಲೇಖನಗಳು ಒದಗಿಸುತ್ತವೆ.

ಒಟ್ಟಿನಲ್ಲಿ ಕರಾವಳಿ ಕರ್ನಾಟಕದ ಕೋಮುವ... ಕರಣದ ಸಾಮಾಜಿಕ, ರಾಜಕೀಯ ಮತ್ತು ಆ... ನೆಲೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅ... ಬದಲಿಸಲು ಬೇಕಾದ ಒಳನೋಟವನ್ನು ಪಡೆದುಕೊ... ಈ ಸಣ್ಣ ಪುಸ್ತಕ ದೊಡ್ಡ (216) ರೀತಿಯಲ್ಲಿ ಸಹಾ... ಬರುತ್ತದೆ ಎಂಬುದರಲ್ಲಿ ಸಂಶಯವಿಲ್ಲ, ಕರ್ನಾಟಕದ ... ಮತ್ತು ಅದರ ಭವಿಷ್ಯದ ಬಗ್ಗೆ ಕಾಳಜಿ ಇರುವ ಎ... ಓದಲೇ ಬೇಕಾದ ಪುಸ್ತಕವಿದು.

• ಶಿವಸುಂದ...



ತಂಗಿ ನೀಲು

ನಿನ್ನ ಮರಣದ ವಾರ್ತೆ
ಕಿವಿಗೆ ಬಿದ್ದಾಗ ಹಸಿದ ಹೊಟ್ಟೆಯ ಹೊತ್ತು
ಸತುವಿಲ್ಲದ ಕಾಲುಗಳಲ್ಲಿ ನಡೆಯುತ್ತಿದ್ದೆ
ಮನುಷ್ಯರೆಲ್ಲರೂ ಮಂದಿರ, ಮಸೀದಿಗೆ ಎಡೆ ಹಿಡಿದು ಹೊರಟಿದ್ದರು

ಕೆಂಡದಾ ಮ್ಯಾಲೆ ಚಕ್ಕೆಗಳ ಎಣಿಸುತ ಮಲಗಿದ್ದವಳಿಗೆ
ಉರಗದ ನಾಲಿಗೆ ಬಡಿಯಿತೇ
ಬೂಜುಗಟ್ಟಿದ ಚರ್ಮ ಕಿತ್ತುಕೊಳ್ಳುತ್ತಲೇ
ಉಂಗುಟ ಹರಿದ ಚಪ್ಪಲಿಗೆ
ಹೊಟ್ಟೆಯ ಸಿಟ್ಟು ಚಿಮ್ಮುತ್ತದೆ
ನಿನ್ನ ನೆನೆದಾಗಲೆಲ್ಲಾ ನೆನೆಯುತ್ತಲೆ ಹೋಗುತ್ತೇನೆ

ಅವ್ವನ ಮುರಿದ ಪೆಟಾರಿಯಲಿ ಮುಚ್ಚಿಟ್ಟ ಅಂಕಪಟ್ಟಿಗಳು
ಗೆದ್ದಲಗಳಿಗೆ ದಿನದೂಟ
ಹಣೆಗಚ್ಚಿಕೊಂಡು ತಿರುಗಿದರೆ ಕಸದ ಬುಟ್ಟಿಯೆಡೆಗೆ ತೋರುಬೆರಳು
ತೂತುಬಿದ್ದ ಬೊಕುಣದಲಿ ಗಾಂಧಿತಾತ ನಗುತ್ತಾನೆಯೇ?
ನಿನಗೆ ಲಂಗ ಕೊಳ್ಳಲು ಆಕಾಶ ನೋಡಿದ ನಾನು ಶಾಪ ಹಾಕಿಕೊಂಡೆ

ಹಿಂಗಾರು ಮಳೆಗೆ ಗುಡಿಸಲು ತುಂಬ ಸಾವಿರ ನಲ್ಲಿಯ ಆರ್ಭಟ
ತೊಯ್ದು ಬಟ್ಟೆಯಲಿ ನಿಂತ ಮುದ್ದು ಭಾವಚಿತ್ರ ಹಸಿಯಾಗಿದೆ
ಜಗಲಿ ಮ್ಯಾಲಿನ ಮೂರೂ ಫೋಟೋ ಕಟ್ಟುಗಳು ಹೊಗೆಯಾಗಿವೆ
ಅಪ್ಪ ಚುಟ್ಟಾ ಸೇದುತ್ತಲೆ ನಿನ್ನ ಆತ್ಮದ ಕುಲಾವಿ ನೇವರಿಸುತ್ತಿದ್ದಾನೆ
ಹಂಚಿಟ್ಟ ಅವ್ವ ಧ್ಯಾನದಲಿ ರೊಟ್ಟಿಯ ಬದಲು ಕೈಯಿಟ್ಟಿದ್ದಾಳೆ

ಸಾವಿರ ಚೇಳು, ಉರಗ ಕಚ್ಚಿದರೂ
ಪಾಪಿ ಬದುಕಿದ್ದೇನೆ ಕೊನೆಯ ಮುಖ ನೋಡದೆ,
ನಾಲಿಗೆ ಹರಿದ, ಸೀಳು ಮೂಗಿನ, ಗಾಳಿಗೆ ತೇಲುವ ಮನುಷ್ಯರೇ ಬೇಕು
ಜಗದ ಅಪಮಾನಗಳನ್ನು ಹೊತ್ತು ತಿರುಗಲು

ನಿನ್ನ ಚೆಲುವಿಗೆ ಬೆಂಕಿ ಹಚ್ಚಿದ ಖೂಳರು
ನನ್ನ ಮೂರು ಜನುಮದ ಯಜಮಾನರು
ಸೆಟೆದ ನಾಲಿಗೆ ಮಾತೆತ್ತಿದರೆ ತಿರುಗು ಯಂತ್ರಕೆ
ಲಕ್ಷ ತುಕಡಿಗಳು
ನಾನು ಮಾತನಾಡುವ ಮೂಖ, ನೋಡುವ ಕು...
ಕೇಳುವ ಕಿವುಡ

ಮಹಲುಗಳ ಓಟಕೆ ಜೋಪಡಿ ಪಟ್ಟಿಗಳು ನರಳಿವ...
ನಿನ್ನೆ ಕುಳಿತು ಉಂಡ ಜಾಗೆಯಲಿ ಪಿಲ್ಲರ್‌ಗಳೆದ್ದಿವೆ
ಬದುಕು ಕಪ್ಪೆ ಆಟ
ನಿದ್ದೆಗಳನು ಬಡದು ರೋಲರ್‌ಗಳ ಸದ್ದು

ಜೀವ ಹಿಂಡುವ ಲೋಕಕೆ ಬಂದ ತಂಗಿ ಕ್ಷಮೆಯಿ...
ಸುಡುವ ಕಡಾಯಿಯಲಿ ಬಿದ್ದ ಕೈಗೆ ಸ್ಪರ್ಶ ಜ್ಞಾನವಿ...
ನಾಲ್ಕೆ ನಾಲ್ಕು ಹನಿ ಹನಿಸುವ ಶಕ್ತಿ ಕಣ್ಣುಗಳಿಗೆ
ಕಬರಸ್ತಾನ, ಸುಡುಗಾಡು ಸುತ್ತುತ್ತಲಿದ್ದೇನೆ
ಬೂದಿಯಾದರೂ ಸಿಕ್ಕೀತು ಎದೆಗಪ್ಪಿಕೊಳ್ಳಲೆಂದು

ಬಯಲ ಮೂರು ಹೊಲೆಗುಂಡುಗಳು
ಸುರಿದ ಬಿಸಿಲಿಗೆ
ಅನ್ನ ಬೇಯುತ್ತಿದೆ
ಗುಂಪಲ್ಲಿ ಊರ ಜಾತ್ರೆಯ ಸಡಗರ
ಬಾಯಿಗೆ ಇಷ್ಟಿಷ್ಟು ತುತ್ತಿನ ಸರಬರಾಜು
ಸಿಲ್ವರ್ ತಾಟಿಡಿದ ಹರಿದ ಲಂಗದ ತಂಗಿ ಮತ್ತೆ ಕಂ...

ದಾರಿ ಹೋಕರು ಬರುವ ಮುಂಚೆ
ದೂರ ಸಾಗಬೇಕಾಗಿದೆ
ತಂಗಿಗೊಂದು ಹೊಸ ಲಂಗ ತರಲು
ಮೈ ಉರಿಗೊಳಿಸಬೇಕಾಗಿದೆ ಕಾವಲಾಗಲು...

• ಬಸವರಾಜ ಹಳ್ಳಿ, ಹಸಮಕ...

ಸ್ವಾಮಿಗಳೂ ಕೆಟ್ಟು ಕೈರ ಹಿಡುದೋದ್ರು ಕಂಡ್ರ

"ಎಡೂರಪ್ಪನ್ನ ಉಳಿಸಿಗಳಕ್ಕೆ ಮಠಾಧಿಪತಿಗಳ್ಯಲ್ಲ ...ಗೆ ಬಂದವ್ರುರೆ ಕಣ ಮಾವ" ಎಂದು ಉಗ್ರಿ ನಗಾಡಿದ.

"ಅಂಗರೆ ಮಠಾಧಿಪತಿಗಳ್ಯಲ್ಲ ಬೀದಿಗೆ ಬಂದುಬುಟ್ರಿ?" ...ದು ಕಾಳಮಾವ ಅಚ್ಚರಿಗೊಂಡ.

"ಊ ಕಣಮಾವ, ಪಾಪ ಯಲ್ಲ ಬಂದು ಬೆಂಗಳೂರು ...ಪಾಲತ್ರ ಕುಂತಿದ್ದವಂತೆ. ಅವನೋಡಿ ಇಡೀ ಬೆಂಗಳೂರು ನಗಾಡಿದರಂತೆ."

"ಅದ್ಯಾಕ್ ನಗಾಡಿದುರ್ಲ?" ಎಂದಳು ಜುಮ್ಮಿ.

...ಯ ಲು ಸೀ ಮೆ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಅದ್ಯಾಕೆ ಅಂದ್ರೇನೇಳನ. ಸಾಮಾನ್ಯವಾಗಿ ಅಂತ ...ಮಿಗಳ ನೋಡಿದೇಟಿಗೆ ನಗುಬತ್ತದೆ ಕಣೆ. ಅಂತವ್ಯಲ್ಲ ...ಾಗಿ ಬೆಂಗಳೂರು ಟೌನಾಲತ್ರ ಕುತಗಂಡು ...ೂರಪ್ಪನಿಗೆ ಜಯವಾಗಲಿ ಅಂದ್ರೆ ಯಾರಿಗೆ ನಗಬರದಿಲ್ಲ ...ು?" ಎಂದ ಉಗ್ರಿ.

"ಸ್ವಾಮಿಗಳ್ಯಲ್ಲ ಬೀದಿಗೆ ಬಂದು ಅವ್ರುನ್ನ ಸಪೋರ್ಟು ...ತ್ತರೆ ಅಂದ್ರೆ ಎಡೂರಪ್ಪನ ಕಡೆ ನ್ಯಾಯ ಇರಬಹುದು ...ೃ" ಎಂದ ಕಾಳಮಾವ.

"ಥೂ, ಥೂ, ಇದೇನು ಮಾವ ಹಿಂಗಂತಿ ನೀನು. ಎಡೂರಪ್ಪ ಇದುವರೆಗೂ ಯಾವ ಮುಖ್ಯಮಂತ್ರಿನೂ ...ಡದೆಯಿರೋವಷ್ಟು ತಪ್ಪು ಮಾಡ್ಯವುನಂತೆ. ಅದೂಅಲ್ದೆ ...ು, ತನ್ನ ಮಕ್ಕಳು, ಜ್ವತೆಲುಟ್ಟಿದೋರು, ಇವುರ್ಯಲ್ಲ ...ಮವಾಗಿ ಮಾಡಿಕಂಡ ಆಸ್ತಿಯ ಸರಕಾರಕ್ಕೆ ವಾಪಸ್ ...ಟ್ಟವುನೆ ಅಂದ್ರೆ ತಪ್ಪು ಮಾಡಿದ್ದು ಸಾಭೀತಾಯ್ತಲ್ಲ?"

"ಅಂಗರೆ ವಾಪಸು ಕೊಟುಬುಟ್ನೆ?"

"ಊ ಕಣಮಾವ. ದಕ್ಕಿಸಿಗಳಕ್ಕಾಗದೆ ವಾಪಸ್‌ಕೊಟ್ಟು ...ಷ್ಟ ಮುಂದೆ ಹಿಂಗೆ ಮಾಡದಿಲ್ಲ ಅಂದವುನೆ."

"ಅಂಗರೆ ತೆಪ್ಪು ಮಾಡಿರದು ಸಾಬೀತಾಯ್ತಲ್ಲಾ."

"ಊ ಕಣ ಮಾವ."

"ಅದೂ ಈ ಸ್ವಾಮಿಗಳಿಗೆ ಗೊತ್ತಾಗಿಲವೆ?"

"ಗೊತ್ತಾಗಿದ್ದತೊ ಇಲವ್ರೊ, ಅಂತೂ ಈ ಸ್ವಾಮಿಗಳ್ಯಲ್ಲ ...ಮುಂಡೆತ್ತವ್ರು. ಬುದ್ಧಿ ಇಲ್ದವ್ರೊ ಅಥವಾ ಜಾತಿವಾದಿಗಳು ...ದು ಸಾಬೀತಾಯ್ತು."

"ಅಲ್ಲ, ಸ್ವಾಮಿಗಳ್ಯಲ್ಲ ರಾಜಕೀಯ ಮಾಡಂಗಾದರಲ್ಲಾ ...ಕೇನೇಳನಾ" ಎಂದ ಸೀರ.

"ಮುಂದಿನ ಚುನಾವಣೆಲಿ ತಿಕೆಟ್ ತಗಂಡು ...ೀನಿವುಕೆ?" ಎಂದ ಕಾಳಮಾವ.

"ಜನ ಓಟು ಮಾಡಬೇಕಲ್ಲ ಮಾವ? ಅದರಲ್ಲು ವಳ್ಳೆ ಲಿಂಗಾಯಿತ್ರು ಒಂದು ಓಟುನೂ ಕೊಡದಿಲ್ಲ, ಕ್ಯಟ್ಟ ಲಿಂಗಾಯಿತ್ರು ಒಸಿ ಕೊಡ್ತರೆ."

"ವಳ್ಳೆ ಲಿಂಗಾಯಿತ್ರು, ಕೆಟ್ಟ ಲಿಂಗಾಯಿತ್ರು ಅಂತ್ಲೂ ಇದ್ದರೇನ್ಲ?" ಎಂದಳು ಜುಮ್ಮಿ.

"ಊ ಕಣೆ. ಅದೊಂದು ಜಾತಿಲೆ ಏನು, ಯಲ್ಲಾ ಜಾತಿಲೂ ಕ್ಯಟ್ಟೋರು, ವಳ್ಯರು ಅಂತ ಯರಡು ಜಾತಿ ಅವೆ. ಅಂಗೆ ಲಿಂಗಾಯಿತ ಸ್ವಾಮಿಗಳಲ್ಲುವೆ. ವಳ್ಳೆ ಸ್ವಾಮಿಗಳವೆ. ಅವ್ಯಲ್ಲ ಮರಿಯಾದಿಯಾಗಿ ಸುಮ್ಮನವುರೆ. ಈ ಕ್ಯಟ್ಟ ಸ್ವಾಮಿಗಳೇನವುರಲ್ಲಾ ಅವುರ್ಯಲ್ಲ ಬೀದಿಗೆ ಬಂದು ಎಡೂರಪ್ಪನಿಗೆ ಸಪೋರ್ಟು ಮಾಡ್ತಾಯಿರದೂ ಅಲ್ದೆ ಹೇಳಿಕೆನೂ ಕೊಡ್ತ ಕುಂತವೆ."

"ಕ್ಯಟ್ಟ ಸ್ವಾಮಿಗಳು ಅಂತ ಯಂಗೇಳ್ತಿ?"

"ಎಡೂರಪ್ಪನಂತೋನ್ನ ಸಪೋರ್ಟು ಮಾಡೋರ್ಯಲ್ಲ ಕ್ಯಟ್ಟ ಜನಗಳು, ಜಾತಿವಾದಿಗಳು ಕಣೆ."

"ಅಂಗರೆಡೂರಪ್ಪ ಯಾವ ವಳ್ಳೆ ಕ್ಯಲಸನೂ ಮಾಡಿಲವೇನ್ಲ? ಸರಾಪು ನಿಲ್ಸಿ ನಮ್ಮೂರೆಂಗಸ್ಯರಲ್ಲ ನೆಮ್ಮದಿಯಾಗಿ ನಿದ್ದೆ ಮಾಡಂಗೆ ಮಾಡ್ಯವುನೆ. ಯಲ್ಲಾರು ಹೆಣ್ಣಮಕ್ಕಳು ಯಾಕುಟ್ಟಿದೊ ಅನ್ನದಂಗೆ ಅವುಕೆ ಮದುವಿಗೆ ದುಡ್ಡ ಬರಂಗೆ ಮಾಡ್ಯವುನೆ. ನಾಕು ಪರಸೆಂಟಿನಂಗೆ ಬ್ಯಾಂಕು ಸಾಲ ಕೊಡಂಗೆ ಮಾಡ್ಯವುನೆ. ಈಗ ಸೀರೆ ಕೊಡ್ತಾ ಅವುನೆ. ಇವ್ಯಲ್ಲ ನಿಮ್ಮ ಕಣ್ಣಿಗೆ ಕಾಣದಿಲವೇನ್ಲ?" ಎಂದಳು ಜುಮ್ಮಿ.

"ದೇವರಾಣೆ ನೀನು ಯಾವುದಾರ ಮಠಕ್ಕೆ ಸ್ವಾಮಿ ಆಗಬೇಕಿತ್ತು ಕಣೆ. ನೀನು ಮಾತಾಡಿದ ಮ್ಯಾಲೆ ಸ್ವಾಮಿಗಳ್ಯಲ್ಲ ಯಾವ ತರ ಯೋಚನೆ ಮಾಡ್ತರೆ ಅಂತ ಈಗ್ಗಳಿತು. ನೀನು ಸುಮ್ಮನೋಗಿ ಕ್ವಳಕ ಮಠದ ಸ್ವಾಮಿ ಜ್ವತೆ ಸೇರಿಕಳೆ ಅತ್ತಗೆ" ಎಂದ ಉಗ್ರಿ.

"ಕ್ವಳಕ ಮಠ ಯಾಕೊ? ಚುಂಚನಗಿರಿಗೆ ಹೋಗಿ ಸೇರಿಕಳ್ಳೆಳು" ಎಂದುಕೊಂಡು ವಾಟಿಸ್ಸೆ ಹಾಜರಾದ.

"ನಮ್ಮ ಚುಂಚನಗಿರಿ ಸ್ವಾಮಿ ಏನೂ ಅಂದಿಲವೆ?" ಎಂದ ಕಾಳಮಾವ.

"ಚುಂಚನಗಿರಿ ಸ್ವಾಮಿ ಇಂತ ಟೇಮಲ್ಲಿ ಮಾತಾಡದಿಲ್ಲ ದ್ವಡಪ್ಪ, ಯಾವುದೆ ಸರಕಾರ ಬಂದ್ರೂ ಮುಕ್ಯಮಂತ್ರಿ ಕರದು ಕ್ಯಲಸ ಮಾಡಿಸಿಗತ್ತರವುವರೆ ಅವುರು ಯಾವಾಗ್ಲೂ ರೂಲಿಂಗ್ ಪಾರ್ಟಿ ಸ್ವಾಮಿ ಗೊತ್ತಾ?"

"ಅದೇನೋ ನಿಜ ಬುಡು'?

"ನಿಜ ಏನು, ಅವ್ರುರ ನಡವಳಿಕೆ ದಾಖಲೆನೆ ಹೇಳ್ತದೆ ದ್ವಡಪ. ವಿರೋಧ ಪಕ್ಷದೋರಿಂದ ಏನೂ ಪ್ರಯೋಜನ ಇಲ್ಲ, ಅದೇ ಆಡಳಿತ ಪಕ್ಷದೋರಾದ್ರೆ ಹೇಳಿದರೆ ಕ್ಯಲಸ ಮಾಡಿಕೊಡ್ತರೆ ಗೊತ್ತೆ?"

"ಅಂಗರೀಗ ಎಡೂರಪ್ಪನ ಪರ ಅವುರೆ ಅಂದಂಗಾಯ್ತು?" ಎಂದ ಉಗ್ರಿ.

"ಎಡೂರಪ್ಪನ ಪರ ಬಯಿರಂಗವಾಗಿ ಹೇಳಿಕೆ ಕೊಟ್ರೆ, ದ್ಯಾವೇಗೌಡ್ರು ಏಳನೆ ಮನೆಲಿ ಕಾಣಿಸಿಗಂಡು ಹಕನಾಯಿಸಿಗತ್ತರೆ ಕಣೊ. ಅದ್ಕೆ ಮುಗುಮ್ಮಾಗ್ಯವುರೆ. ಆದ್ರು ಮಠಕ್ಕೆ ದುಡ್ಡು ಕೊಡೊ ಯದ್ದಿ ಕಂಡರೆ ಯಾವ ಸ್ವಾಮಿಗೆ ಇಷ್ಟ ಇಲ್ಲ ಯೇಳು."

"ಅಂಗರೆ ಈಗ ಬೀದಿಗೆ ಬಂದಿರೊ ಸ್ವಾಮಿಗಳ್ಯಲ್ಲ ಎಡೂರಪ್ಪಂತ ದುಡ್ಡು ತಗಂಡಿದ್ದರೇನ್ಲ?" ಎಂದ ಸೀರ.

"ಕೆಲವುರು ತಗಂಡವುರೆ, ಕೆಲವುರು ಎಡೂರಪ್ಪ ಉಳಕಂಡ ಮ್ಯಾಲೆ ಫೋನ್ ಮಾಡಿ, 'ನಾವು ಬಾಳ ಹೋರಾಟ ಮಾಡಿ ಉಳಿಸಿಗಂಡೊ' ಅಂತ ಯಾಚಕ ದನಿಲಿ ಹೇಳ್ತವೆ. ಆಗ ಎಡೂರಪ್ಪ ಏನಾರ ಸಹಾಯ ಮಾಡ್ತನೆ."

"ಅಂತೂ ಇವುರೂ ಪಾರ್ಟಿ ಕಾರ್ಯಕರ್ತರಂಗಾದ್ರು."

"ಊ ಮತ್ತೆ ಕಳೆದ ಚುನಾವಣೆಲಿ ಇವುರು ಎಡೂರಪ್ಪನ ಪಾರ್ಟಿಗೆ ಓಟು ಕೇಳಿರೊ ಜನ. ನೋಡಾ ಚಿಕ್ಕಮಗಳೂರಲ್ಲಿ ಸಿ.ಟಿ.ರವಿ ಅನ್ನೋನ ಪರ ಸ್ವಾಮಿಗಳು ಓಟು ಕೇಳಿದ್ದೊ ಅಂದ್ರೆ, ಇನ್ನು ಎಡೂರಪ್ಪನ ಪರ ಕೇಳದಿಲವೆ?" ಎಂದ ವಾಟಿಸ್ಸೆ.

ಅವುನ ಮಕ್ಕಳ ಕಾತೆಗೆ ದುಡ್ಡು ಬಂದದೆ. ಶಿಕಾರಿಪುರ, ಶಿವಮೊಗ್ಗ, ಬೆಂಗಳೂರಿಂದ ಹಿಡದು ಮೈಸೂರುಗಂಟ ಸರಕಾರಿ ಜಮೀನ ಕೊಂಡವುನಂತೆ. ಅವುನ ಮಂತ್ರಿಗಳ್ಯಲ್ಲ ಅದೇ ಕ್ಯಲಸ ಮಾಡಿದ್ರು ಕೇಳದಿಲವಂತೆ. ಇಂಥ ಮುಖ್ಯಮಂತ್ರಿ ಸಪೋರ್ಟಗೆ ಬರೋ ಸ್ವಾಮಿಗಳು ರಿಯಲಿ ಥರ್ಡ್‌ರೇಟ್ ಸ್ವಾಮಿಗಳು ಕಣೊ ಉಗ್ರಿ."

"ಅದಂಗಲ್ಲ ಕಣೊ. ಒಂದು ಜನಾಂಗದ ಸ್ವಾಮಿ ಅಂದ ಮ್ಯಾಲೆ ಅವುರು ಆ ಜನಾಂಗದ ಪ್ರತಿನಿಧಿ. ಅವ್ರುನೇಟೆ ಮಾಡಿದ್ರು ಲಿಂಗಾಯತ ಸ್ವಾಮಿ ಲಿಂಗಾಯಿತ್ರೂನೆ. ಒಕ್ಕಲಿಗರೋನು ಒಕ್ಕಲಿಗರ ಸ್ವಾಮಿ. ಕುರುಬರೇ ಕುರುಬಸ್ವಾಮಿ ಆಯ್ತನೆ. ಅಂಗಾದವು ಅವರ ಜಾತಿಯೋನು ಮುಖ್ಯಮಂತ್ರಿಯಾದಾಗ ಹಿಂಗಾಡ್ತವೆ."

"ಸ್ವಾಮಿಯಾದೋನು ಅದನ್ಯಲ್ಲ ಮೀರಬೇಕಲವೇನೊ?"

"ಮೀರಬೇಕು ಸರಿಯಪ್ಪ ಅವರ ಹುಟ್ಟಾಣಕೆನೆ ಅಂಗಿದ್ರೆ ಏನು ಮಾಡೀ?"

"ನಿಜ ಕಣೊ. ಅದಕ್ಯಲ್ಲ ಓದು, ತಿಳುವಳಿಕೆ, ಬುದ್ದಿ ಶಕ್ತಿ ಬೇಕು. ಕಂತ್ರಿಗಳನ್ನಲ್ಲ ಸ್ವಾಮಿ ಮಾಡಿದ್ರೆ ಅವು ಎಡೂರಪ್ಪನಿಂದೆ ಹೋಗದೆ ಇನ್ನೇನು ಮಾಡ್ತವೆ. ಯಲ್ಲಾ



"ಅಂತೂ ಸ್ವಾಮಿಗಳು ಹಾಳುಬಿದ್ದೋದರು ಅನ್ನು."

"ಊ ದ್ವಡಪ್ಪ, ಕೆಟ್ಟ ಕೆರ ಹಿಡದೋದ್ರು. ಇಂಥೋರಿಂದ ಪಾಪ ವಳ್ಳೆ ಸ್ವಾಮಿಗಳಿಗೆ ಬ್ಯಲೆಯಿಲ್ದಂಗಾಯ್ತಾ ಅದೆ."

"ಸ್ವಾಮಿಗಳ ನಡವಳಕೆ ಸರಿಯಾಗ್ಯದೆ ಕಣೊ" ಎಂದ ಉಗ್ರಿ.


"ಅದ್ಯಂಗೊ? ಎಡೂರಪ್ಪ ಮಕ್ಕಳು, ಮರಿಗೆ, ಅಕ್ಕ ತಂಗಿರಿಗೆ, ಮನೆಗ್ಯಲ್ಲ ಭೂಮಿಕೊಟ್ಟವುನೆ. ಗಣಿ ಮಾಲೀಕರಿಂದ ಸ್ವಾಮಿಗಳೂ ನಮ್ಮ ನಿಡುಮಾಮಿಡಿ, ಗದುಗಿನ ತೋಂಟದಾರಿ, ಬೆಳಗಾಂ ಸ್ವಾಮಿ, ಚಿತ್ರದುರ್ಗ ಮುರುಘಾ ಶರಣರಂಗಿದ್ರೆ ಎಷ್ಟು ಚೆನ್ನಾಗಿರದು?"

"ಮುರುಗಾ ಶರಣ್ರು ಎಡೂರಪ್ಪನಿಗೆ ಸಪೋರ್ಟು ಮಾಡಿದ್ದರಂತೆ?"


"ಸುಳ್ಳು ಕಣೊ. ಅವುರೇನೇಳ್ಯವುರೆ ಅಂದ್ರೇ, ಜನ ಪ್ರತಿನಿಧಿಗಳು ಸೇರಿ ತೀರಮಾನ ಮಾಡಿ, ಹೈಕಮಾಂಡಿಗೆ ಯಾಕೋಯ್ತಿರಿ ಅಂದವುರೆ. ಆ ಮಾತು ಹಿಂಗೆ ತಿರಿಕಂಡದೆ. ●

ಶೆರಿಡಾನ್ ತಮಾಷೆ

ಶೆರಿಡಾನ್ ಪ್ರಸಿದ್ಧ ನಾಟಕಕಾರ. ಶೇಕ್ಸ್‌ಪಿಯರ್ ಆದಮೇಲೆ ಕೆಲವು ನೋಡತಕ್ಕಂಥ ನಾಟಕಗಳನ್ನು ಬಿಟ್ಟರೆ ...ದಿನೆಂಟನೇ ಶತಮಾನದಲ್ಲಿ ನಿಜವಾಗಿ ರಂಗಭೂಮಿಗೆ ಅರ್ಥ ತಂದವನು ಶೆರಿಡಾನ್. ಈತ ರಾಜಕಾರಣಿ, ...ಾತುಗಾರ, ಹಾಸ್ಯ ನಾಟಕಕಾರ. ಇವನ 'ರೈವಲ್ಸ್' ಮತ್ತು 'ಸ್ಕೂಲ್ ಫಾರ್ ಸ್ಕ್ಯಾಂಡಲ್' ಎಂಬ ಎರಡು ...ಟಕಗಳು ಕಳೆದ ಇನ್ನೂರೈವತ್ತು ವರ್ಷದಿಂದ ಅನೇಕ ತಲೆಮಾರುಗಳ ಜನರನ್ನು ನಗಿಸಿವೆ. ಯಶಸ್ವೀ ಪ್ರದರ್ಶನ ...ಡಿವೆ. ಶೆರಿಡಾನ್‌ನ ಖ್ಯಾತಿ ಮತ್ತು ಪ್ರತಿಭೆಯೇ ಅನೇಕರಲ್ಲಿ ಅಸೂಯೆ ಹುಟ್ಟಿಸುತ್ತಿತ್ತು. ಶೆರಿಡಾನ್‌ನ ಸಮಕಾಲೀನನಾಗಿದ್ದ ...ಬರ್‌ಲ್ಯಾಂಡ್ ಎಂಬುವವನು ದುರಂತ ನಾಟಕ ಬರೆಯುತ್ತಿದ್ದ. ಈತನ ಒಂದು ನಾಟಕವೂ ಇಪ್ಪತ್ತನೇ ...ಮಾನದವರೆಗೆ ಬದುಕಿ ಬಂದಿಲ್ಲವಾದರೂ ಹದಿನೆಂಟನೇ ಶತಮಾನದಲ್ಲಿ ಈತ ಸ್ವಲ್ಪ ಹೆಸರು ಮಾಡಿದ್ದ. ಇವನು ...ಡಾನ್‌ನನ್ನು ಕಂಡರೆ ಬೆಂಕಿಯಾಗುತ್ತಿದ್ದ. ಒಂದು ರಾತ್ರಿ ಈತನ ಇಬ್ಬರು ಹೆಣ್ಣುಮಕ್ಕಳು ಶೆರಿಡಾನ್‌ನ ತಮಾಷೆ ...ಟಕಕ್ಕೆ ತಮ್ಮನ್ನು ಕರೆದೊಯ್ಯಲು ತಂದೆಯನ್ನು ಕೇಳಿದರು. 'ಕೆಟ್ಟದಾಗಿರುತ್ತದೆ' ಎಂದು ಕಂಬರ್‌ಲ್ಯಾಂಡ್ ಎಷ್ಟು ಹೇಳಿದರೂ ಆ ಹೆಣ್ಣುಮಕ್ಕಳು ಕೇಳಲಿಲ್ಲ, ಅವರನ್ನು ಕರೆದೊಯ್ಯಲೇ ಬೇಕಾಯಿತು. ನಾಟಕ ಶುರುವಾಯಿತು. ತಮಾಷೆ ಅದ್ಭುತವಾಗಿತ್ತು, ಕಂಬರ್‌ಲ್ಯಾಂಡ್‌ನ ಇಬ್ಬರು ಮಕ್ಕಳೂ ಎಲ್ಲರೊಂದಿಗೆ ನಕ್ಕು ಆನಂದಿಸತೊಡಗಿದರು. ಕಂಬರ್‌ಲ್ಯಾಂಡ್ ಅವರನ್ನು ಗದರಿಸಿ, "ಅದರಲ್ಲಿ ಏನಿದೆ ಅಂತ ನಗ್ತೀರಿ? ಕಚಡಾ ನಾಟಕ!" ಎಂದು ಅವರನ್ನು ಚಿವುಟಿ, ಹೊಡೆದು ಸುಮ್ಮನಾಗಿಸುತ್ತಿದ್ದ. ಕಂಬರ್‌ಲ್ಯಾಂಡ್ ಹೀಗೆ ವರ್ತಿಸಿದ್ದನ್ನು ಕಂಡವರು ಮರುದಿನ ಶೆರಿಡಾನ್‌ಗೆ ಹೇಳಿದರು. ಅದಕ್ಕೆ ಅವನು ಹೇಳಿದ, "ಆತ ಎಂಥ ಕೆಟ್ಟ ಮನುಷ್ಯ ನೋಡಿ! ಮೊನ್ನೆ ನಾನು ಅವನ ದುರಂತ ನಾಟಕಕ್ಕೆ ಹೋಗಿದ್ದೆ - ಮೊದಲಿಂದ ಕೊನೇವರೆಗೆ ನಾನು ನಗುತ್ತಾ ಕೂತಿದ್ದೆ!" ಎಂದು ಹೇಳಿದ.



ಈ ಚುಟುಕ ಕೂಡ ಎಷ್ಟು ಚೆನ್ನಾಗಿದೆಯೆಂದರೆ ಶೆರಿಡಾನ್‌ನ ವ್ಯಕ್ತಿತ್ವ ಮತ್ತು ನಾಟಕಗಳೊಂದಿಗೆ ಇದು ಇನ್ನೂರೈವತ್ತು ವರ್ಷ ಪ್ರಯಾಣಿಸಿ ನಮ್ಮನ್ನು ತಲುಪಿದೆ!




ವೈದ್ಯ ಮತ್ತು ವಕೀಲ

ಮೊನ್ನೆ ನಾನು ಯಥಾಪ್ರಕಾರ ಗಂಭೀರವಾಗಿ ಗಾಂಧೀಜಿಯ ಬಗ್ಗೆ ಮಾತಾಡುತ್ತ "ಗಾಂಧೀಜಿ ವಕೀಲರು ಮತ್ತು ವೈದ್ಯರನ್ನು ಇಷ್ಟಪಡ್ತಿರಲಿಲ್ಲ" ಅಂದೆ.

ಅದಕ್ಕೆ ಅವರು "ಯಾಕೆ?" ಅಂದರು.

ನಾನು ಗಾಂಧೀಜಿ ನೀಡಿರುವ ಕಾರಣಗಳನ್ನು ನೀಡಿ ಅವರು ರೈಲನ್ನು ಕೂಡ ಇಷ್ಟಪಡ್ತಿರಲಿಲ್ಲ, ರೈಲು ಕೆಟ್ಟ ರೋಗ, ಸುದ್ದಿ ಆಧುನಿಕತೆ ಎಲ್ಲವನ್ನೂ ತಂದು ಗ್ರಾಮಜೀವನವನ್ನು ಹಾಳುಮಾಡ್ತದೆ ಎಂದು ಗಾಂಧೀಜಿ ನಂಬಿದ್ದರು ಅಂದೆ.



ಅವರು ನಕ್ಕು ಹೇಳಿದರು: "ರೈಲಿನ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ವಕೀಲರು ಮತ್ತು ವೈದ್ಯರ ಬಗ್ಗೆ ನಮ್ಮಲ್ಲಿ ಬಹುಕಾಲದಿಂದ ನಾಣ್ನುಡಿ ಇದೆ... ಏನೆಂದರೆ, ವೈದ್ಯನನ್ನು ನಂಬಿದರೆ ಆರು ಅಡಿ ಕೆಳಕ್ಕೆ ಹೋಗ್ತೀರಿ, ವಕೀಲನನ್ನು ನಂಬಿದರೆ ಆರು ಅಡಿ ಮೇಲಕ್ಕೆ ಹೋಗ್ತೀರಿ ಅಂತಾ: ಹಾಗಂದ್ರೆ ನೇಣುಗಂಬ ಮತ್ತು ಹೆಣ ಹೂಳುವ ಸಮಾಧಿ" ಅಂದರು.

–ಆಗಸ್ಟ್ 3, 1994


ಯಡಿಯೂರಿಸಂ ಅಂದ್ರೆ...

ಅವತ್ತು ಸೋಮವಾರ. ಬೆಳಗಿನ ಆರು ಗಂಟೆ ಸಮಯ. ಬೆಂಗಳೂರಿನಿಂದ ಮಂಡ್ಯಕ್ಕೆ ಬರಬೇಕಿತ್ತು. ಸೆಟಲೈಟ್ ಬಸ್‌ಸ್ಟ್ಯಾಂಡಿನಲ್ಲಿ ನಿಂತಿದ್ದೆ. ಬಸ್ಸು ಬಂತು. ಹತ್ತಿದೆ. ಸುತ್ತ ಕಣ್ಣಾಡಿಸಿದೆ. ಬರುವಾಗಲೇ ಹೆಚ್ಚೂ ಕಡಿಮೆ ಭರ್ತಿಯಾಗಿ ಬಂದಿತ್ತು. ಸಿಕ್ಕಿದ ಒಂದು ಸೀಟಿನಲ್ಲಿ ಕುಳಿತೆ. ಬಸ್ಸು ನಿಲ್ಲಿಸಿದ ಕಡೆ ಎಲ್ಲ ಪ್ರಯಾಣಿಕರು ಹತ್ತುತ್ತಲೇ ಇದ್ದರು. ಕೆಂಗೇರಿ ತಲುಪುವ ವೇಳೆಗೆ ಬಸ್ಸು ತುಂಬಿದ ಬಸುರಿಯಾಯಿತು.

ಕೆಂಗೇರಿಯಲ್ಲೂ ಅದೇ ಪುನರಾವರ್ತನೆಯಾಯಿತು. ಒಂದು ಗುಂಪು ಹತ್ತಿತು. ಓರ್ವ ಮಹಿಳೆ ಇದ್ದರು. ಮುವತ್ತು ಮುವತ್ತೈದರ ವಯೋಮಾನದವರಿರಬಹುದು. ಬಿಡದಿ ಬಂದಾಗ ಕೆಲವು ಪ್ರಯಾಣಿಕರು ಇಳಿದರು. ಖಾಲಿಯಾದ ಜಾಗದ ಪಕ್ಕದಲ್ಲೇ ನಿಂತಿದ್ದರಿಂದ ಸೀಟು ಆಕೆಯ ಪಾಲಾಯಿತು.

ಒಂಟಿ ಮಹಿಳೆ. ಸೀಟು ಸಿಕ್ಕಿದ್ದರಿಂದ ನಿರಾಳವಾಗಿ

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಕುಳಿತರು. ಸುತ್ತಲಿನ ಪ್ರಯಾಣಿಕರತ್ತ ಗಮನ ಹರಿಸಿದರು. ಅವರ ಪಕ್ಕದಲ್ಲೇ ನಿಂತಿದ್ದ ವ್ಯಕ್ತಿಯತ್ತ ಅವರ ದೃಷ್ಟಿ ನೆಟ್ಟಿತು. ತುಂಬಿದ ಬಸ್ಸಿನಲ್ಲಿ ಮೂರುನಾಲ್ಕು ವರ್ಷದ ಮಗುವನ್ನು ಎತ್ತಿಕೊಂಡು ಪ್ರಯಾಸದಿಂದ ನಿಂತಿದ್ದರು. ಆ ಪುರುಷ ಗೋಳನ್ನು ಮಹಿಳೆ ಅರ್ಥಮಾಡಿಕೊಂಡಿರಬೇಕು. ತಾಯಿಯಿಲ್ಲದ ಮಗು ಇರಬೇಕು. ನೋಡಲು ಅಷ್ಟು ಅಂದವಾಗಿಯೂ ಇರಲಿಲ್ಲ. ಒಂದು ರೀತೀಲಿ ಕುರೂಪಿ ಎಂದೇ ಹೇಳಬೇಕು. ಮಗುವನ್ನು ತೆಗೆದುಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡರು. ಯಾಕೋ ಆ ಮಗುವಿಗೆ ಅಪರಿಚಿತ ಮಹಿಳೆಯ ಸಾಂಗತ್ಯ ಬೇಡವಾಯಿತು. ರೋಧಿಸಲು ಪ್ರಾರಂಭಿಸಿತು. ತಂದೆಯ ಬಳಿಗೆ ಹೋಗಲು ಬಯಸಿತು. ಅನ್ಯ ಮಾರ್ಗವಿಲ್ಲದೆ ನಿಂತಿದ್ದ ತಂದೆಯೇ ಮಗುವನ್ನು ಎತ್ತಿಕೊಂಡು ಸುಧಾರಿಸಬೇಕಾಯಿತು.

ಇಷ್ಟರಲ್ಲಿ ರಾಮನಗರ ಬಂತು. ಪ್ರಯಾಣಿಕರು ಹತ್ತುವುದು ಇಳಿಯುವುದು ನಡೆದೇ ಇತ್ತು. ಹಿರಿಯ ನಾಗರಿಕರು ಎಂಬ ಹಣೆಪಟ್ಟಿಗೆ ಅರ್ಹರಾಗಿದ್ದ ಗಂಡ-ಹೆಂಡತಿ ಖಾಲಿಯಾದ ಒಂದು ಸೀಟಿನಲ್ಲಿ ಕುಳಿತುಕೊಳ್ಳಲು ಜಗಳ ಆಡುತ್ತಿದ್ದರು. ಗಂಡ ಕುಳಿತುಕೊಳ್ಳಲಿ ಎಂದು ಹೆಂಡತಿ, ಹೆಂಡತಿ ಕುಳಿತುಕೊಳ್ಳಲಿ ಎಂದು ಗಂಡ! ಇಬ್ಬರ ಜಗಳ ಮೂರನೆಯವರಿಗೆ ಲಾಭ ಆಗುವ ಮೊದಲೇ ಎಚ್ಚೆತ್ತುಕೊಂಡರು. ಹೆಂಡತಿ ಸೋತರು. ಕೆಂಗೇರಿ ಮಹಿಳೆ ಇದನ್ನೆಲ್ಲಾ ಗಮನಿಸಿರಬೇಕು. ತನ್ನ ಜಾಗವನ್ನು ಹಿರಿಯರಿಗೆ ತೆರವು ಮಾಡಿಕೊಟ್ಟರು.

ಜಾಗತೀಕರಣದ ಪ್ರಭಾವದಿಂದ ಜನರು ಸ್ವಾರ್ಥಿಗಳಾಗುತ್ತಿದ್ದಾರೆ; ಹೃದಯಹೀನರಾಗುತ್ತಿದ್ದಾರೆ ಎನ್ನುವ ಈ ದಿನಗಳಲ್ಲೂ ಆಕೆಯ ಮಾನವೀಯ ನಡತೆ ಹೃದಯವನ್ನು ತಟ್ಟಿತು. ಇದೇ ಗುಂಗಿನಲ್ಲಿ ಮನೆಗೆ ಬಂದೆ. ಕಾಫಿ ಹೀರುತ್ತಾ ಟಿವಿ ಹಾಕಿದೆ. ಶೋಭಾ ಕರಂದ್ಲಾಜೆ ಕಂಡರು. ಮಾಧ್ಯಮಗಳನ್ನೆಲ್ಲಾ ಹಗರಣಗಳ ಹಾವಳಿಯೇ ಆವರಿಸಿಕೊಂಡಿರುವಾಗ ಈ ಶೋಭಕ್ಕ ಯಾಕೆ ಬಂದಿತ್ತು? ಅದೂ ಕಣ್ಣೀರು ಹಾಕುವಂತಹದ್ದೇನಾಯ್ತು ಎನ್ನುವ ಕುತೂಹಲ ಕಾಡಿತು. ಪಾಪ ಈ ದಿಟ್ಟ ಹೆಣ್ಣುಮಗಳು 'ಜನರ ಸೇವೆ ಮಾಡಲು ರಾಜಕೀಯಕ್ಕೆ ಹೋಗುತ್ತಿದ್ದೇನೆ, ಭ್ರಷ್ಟಾಚಾರ ಮಾಡುವುದಕ್ಕಲ್ಲ' ಎಂಬುದಾಗಿ ಅಪ್ಪ ಅಮ್ಮನಿಗೆ ಭಾಷೆ ಕೊಟ್ಟಿದ್ದರಂತೆ. ಹಾಗೇನೇ ನಡೆದುಕೊಂಡಿದ್ದರಂತೆ. ಇಂತಹ ಪರಿಶುದ್ಧ ವ್ಯಕ್ತಿಯ ಮೇಲೂ ದುರುಳ ಕುಮಾರಸ್ವಾಮಿ ಭ್ರಷ್ಟಾಚಾರದ ಆರೋಪ ಮಾಡಿದ್ದರಂತೆ. ಅದಕ್ಕೆ ಟಿವಿ ಕ್ಯಾಮೆರಾಗಳ ಮುಂದೆ ಅಳುತ್ತಾ ತನ್ನ ನೋವನ್ನು ತೋಡಿಕೊಳ್ಳುತ್ತಾ ಇದ್ದರು. ಅವರ ಮಾತಿನ ಸಾರಾಂಶ ಏನು ಅಂದರೆ...

ರಾಜಕೀಯದಲ್ಲಿ ಹಿನ್ನಡೆ ಮುನ್ನಡೆ ಇದ್ದದ್ದೆ. ಕೆಲವು ವರ್ಷಗಳ ಹಿಂದೆ ಶೋಭಕ್ಕಗೆ ಹಿನ್ನಡೆ ಆಗಿತ್ತಂತೆ. ಪರಿಶುದ್ಧ ರಾಜಕಾರಣಿ ಅಲ್ವಾ... ಹಿನ್ನಡೆಯಿಂದ ಜೀವನ ನಡೆಸೋದೆ ತತ್ವಾರ ಆಯ್ತಂತೆ. ಇದ ನೋಡಿದ ಅವರ ಸ್ನೇಹಿತರು ಬಹಳ ನೊಂದರಂತೆ. ಅನುಕಂಪದ ಸುರಿಮಳೇನೆ ಹರಿಸಿದ್ರಂತೆ. ಈ ಹೊಳೇಲಿ ಅದೆಷ್ಟೋ ಕೋಟಿ ಹರಿದುಬಂತಂತೆ. ರಾಜಕಾರಣಿಗೂ ಜೀವನಕ್ಕೆ ಒಂದು ದಾರಿ ಅಂತ ಬೇಕಲ್ಲ ಅಂತಾವ ಒಂದು ಕಾರ್ಖಾನೆ ಪ್ರಾರಂಭ ಮಾಡಿದ್ರಂತೆ. ಆಮೇಲೆ ಅರರೆ ಇದೊಂದನ್ನೇ ಹೆಂಗೆ ನಂಬೋದು, ನಷ್ಟ ಆದ್ರೂ ಆಗಬಹುದು ಅನ್ನೋದು ಅವರಿಗೆ ಚಿಂತೆ ತಂತಂತೆ. ಆಗ ತನಗೂ ಒಂದು ಸೈಟಿದೆ ಅನ್ನೋದು ನೆನಪಾಯ್ತು. ಬಿಡಿಎ ಕೊಟ್ಟಿದ್ದ ಸೈಟು ಅದು. 40/60 ಅಳತೇದು. ಕೃಷಿಕರ ವಂಶ ನಮ್ದು. ಭೂಮಿತಾಯಿ ಕೈ ಬಿಡಬಾರದು ಅಂತಾವ ಬ್ಯಾಂಕಿಗೆ ಹೋದರಂತೆ. ತಮ್ಮ ಸಂಕಟ ತೋಡಿಕೊಂಡ್ರಂತೆ. ಅವ್ರೂ ಮಾನವೀಯತೆ ಮರೆಯೋರೆ ಅಲ್ವಾ! 'ಎಷ್ಟು ಬೇಕು ಮೇಡಮ್ನೋರೆ' ಎಂದಿರಬೇಕು. ಇವರು ಇಷ್ಟು ಅಂದಿರಬೇಕು. 'ಸೈಟು ಆಧಾರ ಮಾಡಿ, ನಾಲ್ಕು ಕೋಟಿ ಕೊಡ್ತೀವಿ' ಅಂದಿರಬೇಕು. 'ಸೈಟಿನ ಬೆಲೇನೆ ಅಷ್ಟಾಗೋಲ್ಲ ಅದೆಂಗೆ ಕೊಟ್ರು' ಅನ್ನೋ ಕೊಕ್ಕೆ ಮಾಸ್ಟರ್‌ಗಳೂ ಇರ್ತಾರೆ; 'ಹೆಣ್ಣುಮಗಳು ಹೆಂಗೋ ಮರ್ಯಾದೆಯಿಂದ ಜೀವನ ನಡೆಸಲಿ ಅಂತ ಕೊಟ್ಟವ್ರೆ' ಅಂದ್ರೆ 'ಎಲ್ರಿಗೂ ಹಂಗೇ ಕೊಡ್ತಾರೆ' ಅಂತವೆ. 'ಅನುಕಂಪ ಅನ್ನೋದು ಒಂದೇ ತರಹ ಇರಲ್ಲ ಕಣ್ರಿ. ಬದಲಾಯಿಸ್ತಾ ಇರ್ತದೆ' ಅಂದ್ರೂ ಕೇಳಲ್ಲೊ. ಅವರ ಮಾತ ಬಿಸಾಕಿ, ಆ ಹಣ ತಗಂಡು ಶೋಭಕ್ಕ ಮಡಿಕೇರಿ ಹತ್ತಿರ ಕಾಫಿ ತೋಟ ಕೊಂಡುಕೊಂಡವ್ರಂತೆ (ಸಾಲ ಮಾಡಿ 166 ಎಕರೆ ಜಮೀನು ಕೊಂಡವರ ಮೇಲೇ ಭ್ರಷ್ಟಾಚಾರದ ಆರೋಪ ಹೊರಿಸ್ತಿದಾರಲ್ಲಾ ಅವರೆಂತಹ ಹೊಲಸು ಜನ ಅಂತೀನಿ!) ಈ ಆರೋಪಗಳಿಂದ ಜರ್ಝರಿತರಾದ ಶೋಭಕ್ಕ ಈ ಮುಂಡೇ ಮಗನ್ನ ಬಯಲು ಮಾಡಬೇಕು ಅಂತ ಯೋಚಿಸಿದ್ರಂತೆ.... ಮಂಜುನಾಥನೇ ಇದಕ್ಕೆ ಸರಿ ಎಂದು 'ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಿ' ಅಂದ್ರು. ನಿಮ್ಮ ತಾಯೀನೂ ಜೊತೇಗೆ ಬರ್ಲಿ!' ಅಂದ್ರು. ಯಾಕೆಂದ್ರೆ ಈ ಕುಮಾರಸ್ವಾಮಿ ಅನ್ನೋನು ದೇವರ ಸಾನ್ನಿಧ್ಯದಲ್ಲೂ 'ನೀನು ಭ್ರಷ್ಟೆ' ಅಂದ್ರೂ ಅನ್ನೋನೇಯ!

ಯಡಿಯೂರಪ್ಪನವರನ್ನ ನೋಡಿದ್ರೆ 'ಇನ್ನು ಮುಂದೆ ಇಂತಹ ತಪ್ಪು ಮಾಡಲ್ಲ ಅಂತ ನಂಜುಂಡೇಶ್ವರನ ಮೇಲೆ ಆಣೆ ಇಟ್ಟಿದೀನಿ' ಅಂತಾರೆ ಬೇರೆ ರೀತಿಯ ತಪ್ಪುಗಳನ್ನು ಮಾಡಬಹುದೋ ಎನ್ನುವವರಿಗೆ ಉತ್ತರಿಸುವ ಸಮಯ ಇದಲ್ಲ. ಶೋಭಕ್ಕನ್ನ ನೋಡಿದ್ರೆ 'ಧರ್ಮಸ್ಥಳದ ಮಂಜುನಾಥನ ಮೇಲೆ ಆಣೆ ಇಡಿ' ಅಂತ ಕುಂತವ್ರೆ. ಯಾಕೆ ದೇವರುಗಳ ಬಳಿಗೆ ಎಳ್ಕೊಂಡೊಯ್ತಾ ಅವ್ರೆ ಅಂದ್ರೆ ನ್ಯಾಯಾಲಯಗಳೆಲ್ಲ ಕೆಟ್ಟುಕೆರ ಹಿಡಿದು ಕುಂತವೆ, ದೇವ್ರೆ ಸರಿ ಅಂತಾವ!

ಇಂತಹ ದೈವಭಕ್ತರ ಮೇಲೆ ಆರೋಪ ಹೊರಿಸುವುದು ತರವಲ್ಲವೆಂದು ತೆಪ್ಪನಿರಬಾರದಾ. ಉಹುಂ. ಅದ್ಯಾಕಿದ್ದಾವು. ಹೆಣ್ಣುಮಗಳು ಅಂತ ಇಷ್ಟಕ್ಕೆ ಸುಮ್ಮನಿದ್ದೀವಿ. ಬಾಯ್ಮುಚ್ಕೊಂಡುಬಿದ್ದಿರ್ಲಿ. ಇಲ್ದಿದ್ರೆ ಎಲ್ಲ ಬಿಚ್ಚಿ ಒದರ್ತೀವಿ ಅಂತ ಬೆದರಿಕೆ ಹಾಕ್ತವೆ. ಅಷ್ಟಕ್ಕೆ ನಿಲ್ಲಿಸ್ತಾವಾ... ಯಡ್ಯೂರಪ್ಪನೋರ ಕುರ್ಚಿ ಹೋದರೆ ಶೋಭಾ ಅಳ್ತಾರೆ. ಶೋಭಾ ಕುರ್ಚಿ ಹೋದರೆ ಯಡ್ಯೂರಪ್ಪ ಅಳ್ತಾರೆ ಅಂತ ಕುಹಕ ಆಡ್ತವೆ ಹಲ್ಕಾ ಮುಂಡೇವು.

ಇದು ಒತ್ತಟ್ಟಿಗಿರಲಿ. ಶೋಭಕ್ಕನವರ ಮಾತಿಂದ ಹೃದಯವಂತಿಕೆ, ಮಾನವೀಯ ಸೆಲೆ ಇನ್ನೂ ಬತ್ತಿಲ್ಲ ಅನ್ನೋದು ಅರ್ಥ ಆಗುತ್ತೆ. ಇನ್ನೂ ಉದಾಹರಣೆಬೇಕು ಅಂದ್ರೆ ಬಿ.ಆರ್. ಶೆಟ್ಟರ್ ವಿಷಯಾನೇ ನೋಡಣಂತೆ. ದುಬೈನಲ್ಲಿರೋ ಶೆಟ್ಟರಿಗೆ ಬೆಂಗಳೂರಿನ ಬಡವರ ಬಗ್ಗೆ ಕರುಣೆ ಕೋಡಿನೇ ಬಿದ್ದೋಯ್ತು. ಇವರಿಗೆ ಒಂದು ಸುಸಜ್ಜಿತವಾದ ಆಸ್ಪತ್ರೆ ನಿರ್ಮಿಸಬೇಕು, ತಾಯ್ನಾಡಿನ ಮಗನಾಗಿ ಇದು ನಾನು ಸಲ್ಲಿಸುವ ಅಳಿಲುಸೇವೆ ಅಂದುಕೊಂಡರು. ಆಸ್ಪತ್ರೆ ಕಟ್ಟಾನ ಅಂದ್ರೆ ಇದ್ದ ಹನ್ನೊಂದು ಎಕರೆ ಜಮೀನನ್ನು ಬಿಡಿಎ ವಶಪಡಿಸಿಕೊಂಡಿತ್ತು. ಯಡ್ಯೂರಪ್ಪನವರ ಹತ್ತಿರ ತಮ್ಮ ಅಳಲನ್ನು ತೋಡಿಕೊಂಡರು. ಅವರೂ ಶೆಟ್ಟರ್ ತರಹವೇ ಯೋಚಿಸೋರಲ್ವ...! ಆ ಭೂಮಿ ಡೀನೋಟಿಫೈ ಮಾಡ್ತೀನಿ ಕಟ್ಸಿ ಬಡವರ ಹೈಟೆಕ್ ಆಸ್ಪತ್ರೆಯ



ಅಂದಿರಬೇಕು. ಡೀನೋಟಿಫೈ ಏನೋ ಆಯ್ತು. ಆಗ ಶೆಟ್ಟರಿಗೆ ಹನ್ನೊಂದು ಎಕರೇಲಿ ಒಂದೆರಡು ಎಕರೆ ಮಾರಿದರೆ ಬರೋ ದುಡ್ನ ಆಸ್ಪತ್ರೆಗೆ ಬಳಸಬಹುದಲ್ಲಾ ಅನ್ನೋ ವಿಚಾರ ತಲೆಗೆ ಬಂತು. ಮನಸ್ಸಿನಲ್ಲಿರೋದನ್ನೆಲ್ಲಾ ಅದೆಂಗೆ ತಿಳ್ಕೊತ್ತಾವ್ರೊ ಏನೋ ಒಂದೆರಡು ಗಿರಾಕಿಗಳೂ ಬಂದವಂತೆ. ಎರಡೂವರೆ ಎಕರೆ ಜಮೀನನ್ನು ಇವರಿಗೆ ಮಾರಿದರಂತೆ.

ಅಲ್ಲಾ ಕಣ್ರೀ ಇದ್ಕೂ ತರ್ಲೆ ಮಾಡ್ತಾರಲ್ರೀ... ಮೂವತ್ತು ಕೋಟಿ ಜಮೀನ ಮೂರು ಕೋಟಿಗೆ ಹೆಂಗೆ ಮಾರಿದ್ರಿ ಅಂತ ತಕರಾರು ಎತ್ತವೆ. ಅಯ್ಯೋ ರಾಮನೆ ಅದು ಶೆಟ್ಟರ್ ಜಮೀನು. ಅದನ್ನವ್ರು ಬೀದೀಲಿ ಹೋಗೋ ದಾಸಯ್ಯನಿಗೆ ಕೊಡ್ತಾರಪ್ಪ ಆರು ಕಾಸು ಮೂರು ಕಾಸಿಗೆ ಮಾರ್ತಾ... ಇವ್ರಾವು ಕೇಳಕ್ಕೆ ಅಂತಾವ... ಅವರ ಜಮೀನ ಅ... ಮಾರಕ್ಕೆ ಅವರಿಗೆ ಹಕ್ಕಿಲ್ಲವಾ ಅನ್ನೋದು ಶೆಟ್ಟರ... ಪಾಪ ಅವರಿಗೆ ಗಿರಾಕಿ ಯಾರು ಅನ್ನೋ... ಗೊತ್ತಿರಲಿಲ್ಲಂತೆ. ಅವರಿರೋದು ದುಬೈನಲ್ಲಲ್ವಾ. ... ಅವರ ವ್ಯವಹಾರನೆಲ್ಲ ಅವರ ಲಾಯರು ನೋಡಿಕೊಳ್ತಾ... ಅವರೇ ವ್ಯವಹಾರ ಕುದುರಿಸಿದ್ದಂತೆ. ಗಿರಾಕಿಗ... ಮುಖ್ಯಮಂತ್ರಿಗಳ ಸುಪುತ್ರರಾಗಿದ್ದರು ಅನ್ನೋದು ಆಕ... ಅಷ್ಟೆ!

ಇದನ್ನೆಲ್ಲಾ ಮರೆತು ಮಾಧ್ಯಮಗಳು ಅಲ್ಲಿ ಭೂಹ... ಇಲ್ಲಿ ಭೂಹಗರಣ ಅಂತ ಜನರ ತಲೆತಿಂತಾ ಕುಂ... ಯಡ್ಯೂರಪ್ಪನವರ ತಂಗಿಮಗ 'ಇದೇನು ಲ್ಯಾ... ಮಾಫಿಯಾ, ಗಣಿ ಮಾಫಿಯಾ ಇದ್ದಾಂಗೆ ಮಾಧ... ಮಾಫಿಯಾ ಇದ್ದಂಗೆ ಇದೆಯಲ್ಲ' ಅಂತ ಕೇ... ಅಟ್ಟಾಡಿಸಿಕೊಂಡು ಹೊಡಿಯೋಕೆ ಹೋಗ್ತವೆ. ... ರಾಮಯ್ಯನವರಂತೂ ಯಡ್ಯೂರಪ್ಪನವರ ಮೇಲೆ ಕೆ... ಕಾರ್ತಿದಾರೆ. ಅವ್ನು ಮೋಸಗಾರ, ವಚನಭ್ರಷ್ಟ ಅಂತ... ಹೀಯಾಳಿಸುತ್ತಿದ್ದಾರೆ. ಇಂತಹ ಕೃತ್ಯಗಳಿಗೆ 'ಯಡಿಯೂರಿ... ಅನ್ನೋ ಹೊಸ ಪದಾನೆ ಹುಟ್ಟಾಕುವ ಹಾಗೆ ಕಾಣ... ಜನಕ್ಕೆ ಸತ್ಯದ ಅರಿವು ಮಾಡೋದಕ್ಕೆ ಏನು ಮಾಡಬೆ... ಎಂದು ಯಡ್ಯೂರಪ್ಪನವರು ಬಲೇ ತಿಣುಕಾಡಿ ನ್ಯಾಯಾ... ತನಿಖೆಯೇ ಸಮರ್ಪಕ ವಿಧಾನ ಎಂಬ ತೀರ್ಮಾ... ಬಂದಿರುವಂತಿದೆ. ಹತ್ತು ವರ್ಷದ ಭೂಗಳ್ಳತನಾನ ತನಿ... ಒಪ್ಪಿಸ್ತೀನಿ ಅಂತಿದ್ರು. ಆಗ ಹದಿನಾಲ್ಕು ವರ್ಷ... ಮಾಡಿಸಿದರೆ ಒಳ್ಳೆಯದು ಅನ್ನುಸ್ತು. ಹದಿನಾಲ್ಕು ವರ್ಷ... ಮಾಡಿಸ್ತೀನಿ ಅಂತಿದಾರೆ. ಇದು ನ್ಯಾಯನಿಷ್ಠುರತೆ ಅಂದ...

ನನ್ನದೊಂದು ಸಲಹೆ. ಕೇವಲ ಹದಿನಾಲ್ಕು ವರ್ಷ... ಭೂಹಗರಣದ ತನಿಖೆಯಿಂದ ಶ್ರೀಯುತ... ತೃಪ್ತರಾಗಬಾರದು. ಸ್ವಾತಂತ್ರ್ಯ ಬಂದ ದಿವಸದಿ... ಇಲ್ಲಿಯವರೆಗಿನ ಭೂಹಗರಣಗಳನ್ನು ನ್ಯಾಯಾಂಗ ತನಿಖೆ... ವ್ಯಾಪ್ತಿಗೆ ಒಳಪಡಿಸುವುದು ಉತ್ತಮ. ಇ... ಹಲವಾರು ದಶಕಗಳೇ ಹಿಡಿಯಬಹುದ... ಆಗಲಿ. ರಾಜಕೀಯ ಶುದ್ಧಿಗೊಳಿಸಲು ಇ... ಅತ್ಯಗತ್ಯ. ಜನರಿಗೆ ಸ್ವಾತಂತ್ರ್ಯದ ಫಲ... ಅರಿವಾಗುತ್ತದೆ!

ಹಗರಣ ಸಮಾಧಿ

ಕ್ಯಾತ ಬಂದ.

'ನಮ್ ಜಮೀನ್‌ಗೆ ಹೋಗಾನ ಬ... ಸಾ' ಅಂದ.

'ಯಾಕೋ' ಅಂದೆ.

'ಸುಮ್ನೆ ಬನ್ನಿ ಸಾ' ಅಂದ.

ಇಲ್ಲ ಎಂದರೆ ಸುಮ್ಮನಾಗುವ ವ್ಯಕ್ತಿ ಅ... ಹೊರಟೆ.

ಜಮೀನಿನಲ್ಲಿ ಎಂಟುಹತ್ತು ಸಮಾ... ಗಳಿದ್ದವು.

'ಇದ್ಯಾವುದು... ನಿಮ್ ಪೂರ್ವಿಕರದ್ದ?'

'ಅಲ್ಲ ಸಾ ಹಗರಣಗಳದ್ದು' ಅಂದ.

ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದ ಹಗರಣಗಳಿದ್ದ... ಅದು!

'ಇದ್ಯಾವುದೋ ಹೊಸದೊಂದ ಮಾಡೋಕೆ ತಯಾ... ನಡೆಸ್ತಿದಂಗಿದೆ' ಅಂದೆ.

'ಇದಾ... ಭೂಹಗರಣದ್ದು ಸಾ'

'ಅಂದ್ರೆ?'

'ಅದೆ ಸಾ... ಯಡ್ಯೂರಪ್ಪನೋರು ಮಾಡ್ತೀ... ಅಂದವ್ರಲ್ಲಾ.. ಅದ್ರದ್ದು ಸಾ!'

ಯಡ್ಡಿ 'ವಿಜಯ' ಸಾಧಿಸಿದ್ದು ಯಾರ ವಿರುದ್ಧ?

ಬಿಜೆಪಿ ಹೈಕಮಾಂಡ್ ಯಡಿಯೂರಪ್ಪರನ್ನು ಮುಖ್ಯಮಂತ್ರಿಯಾಗಿ ಮುಂದುವರೆಸುವ ನಿರ್ಣಯದ ನಂತರ ಅವರು ಹೋದ ಕಡೆಯಲ್ಲೆಲ್ಲಾ ಸೇರಿದ ಜನರ ಎದುರು ಎರಡು ಬೆರಳೆತ್ತಿ 'ವಿಜಯದ' ಸಂಕೇತ ಸೂಚಿಸುತ್ತಿದ್ದಾರೆ!

ಆದರೆ ಇಲ್ಲಿ ಮೂಲ ಪ್ರಶ್ನೆಯೆಂದರೆ ಯಡಿಯೂರಪ್ಪ ಯಾರ ವಿರುದ್ಧ ವಿಜಯ ಸಾಧಿಸಿ ಬಂದಿರುವುದು? ತನ್ನದೇ ಪಕ್ಷದ ಹೈಕಮಾಂಡನ್ನು ತನ್ನ ಮೊಂಡುತನದಿಂದ ಬಗ್ಗಿಸಿದ್ದು ವಿಜಯವೇ? ಸಂಕುಚಿತ ಜಾತಿ ಲಾಬಿ ಮಾಡಿ ಸಿಎಂ ಹುದ್ದೆ ಉಳಿಸಿಕೊಂಡಿದ್ದು ತನ್ನದೇ ಪಕ್ಷದೊಳಗಿನ ಉಳಿದ ಜಾತಿಯವರ ಮೇಲೆ ಸಾಧಿಸಿದ ವಿಜಯವೇ? ಚುನಾವಣೆಯಲ್ಲಿ ಗೆದ್ದಾಗ, ಆಟ-ಕ್ರೀಡೆಯಲ್ಲಿ ಗೆದ್ದಾಗ, ಕೋರ್ಟ್ ಕೇಸ್‌ನಲ್ಲಿ ಗೆದ್ದಾಗ, ವಿಶ್ವಾಸಮತದಲ್ಲಿ ಗೆದ್ದಾಗ, ಎಲ್ಲರೂ ಎಲ್ಲೆಡೆ ವಿಜಯದ ಸಂಕೇತ ತೋರಿಸುವುದು ಸಾಮಾನ್ಯ, ಆದರೆ ತನ್ನದೇ ಪಕ್ಷದ ವರಿಷ್ಠರೆದುರು ಭ್ರಷ್ಟಾಚಾರಕ್ಕಾಗಿ ಛೀಮಾರಿ ಹಾಕಿಸಿಕೊಂಡು ಅವರು ರಾಜೀನಾಮೆ ಕೇಳಿದರೂ ಕೊಡದೆ ಅವರನ್ನೇ ಬ್ಲ್ಯಾಕ್‌ಮೇಲ್ ಮಾಡಿ ಸಿಎಂ ಆಗಿ ಮುಂದುವರೆದದ್ದು ಯಡಿಯೂರಪ್ಪನವರ ವೈಯಕ್ತಿಕ ವಿಜಯವೇ, ಬ್ಲ್ಯಾಕ್‌ಮೇಲ್‌ರ ಪಾತ್ರದ ವಿಜಯವೇ ಅಥವಾ ನಿರ್ಲಜ್ಜ ಭ್ರಷ್ಟಾಚಾರಿಯ ವಿಜಯವೇ? ಹಿಂದೂಗಳೆಲ್ಲಾ ಒಂದು ಎನ್ನುವ ಸಿದ್ಧಾಂತವುಳ್ಳ ಪಕ್ಷದಲ್ಲಿಯೇ ಇದ್ದುಕೊಂಡು, ಕರ್ನಾಟಕದ ಮಟ್ಟಿಗೆ ಹಿಂದೂಗಳೆಲ್ಲಾ ಒಂದು ಅಲ್ಲ, ಕೇವಲ ಲಿಂಗಾಯತರು ಮಾತ್ರ ಒಂದು ಎಂದು ಸಾಬೀತುಪಡಿಸಿದ್ದು ಒಂದು ವಿಜಯವೇ?

ಜಾತಿವಾದಿ ಮಠಾಧೀಶರಿಂದ ಶಿಫಾರಸ್ಸು ಮಾಡಿಸಿಕೊಂಡು ಸರ್ವಪರಿತ್ಯಾಗಿ ಮಠಾಧೀಶರನ್ನೂ ತನ್ನ ಭ್ರಷ್ಟಾಚಾರದಲ್ಲಿ ಪರೋಕ್ಷ ಭಾಗಿಗಳನ್ನಾಗಿಸಿ ಅಧರ್ಮ ಗೆಲ್ಲುವಂತೆ ಮಾಡಿದ್ದು ಮಾತ್ರ ಯಡಿ ಯೂರಪ್ಪನವರ ವಿಜಯ ಎಂಬುದು ಅತ್ಯಂತ ನಿಜ. ಸೋತದ್ದು ಮಾತ್ರ ಆರು ಕೋಟಿ ಕನ್ನಡಿಗರು.

-ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

ಅಲ್ಲ, 'ಲಂಕೇಶ್' ತಂಡಕ್ಕೆ ಏನಾಗಿದೆ? ನೀವು ಒಂದು ತಿಂಗಳ ಹಿಂದೆಯೇ 'ತೊಲಗುವುದೇ ಶನಿ?' ಎಂದು (ಅಕ್ಟೋಬರ್ 27, 2010 ಸಂಚಿಕೆ) ಪ್ರಕಟಿಸಿದ್ದರೂ ಯಡಿಯೂರಪ್ಪ ಎಂಬ ಶನಿ ಇನ್ನೂ ತೊಲಗಿಲ್ಲ, ಅಷ್ಟೇ ಅಲ್ಲ ಇವತ್ತು ನುರಿತ ಬಿಜೆಪಿ ಮತ್ತು ಕೊಳಕು ಆರೆಸ್ಸೆಸ್ ನಾಯಕರಿಗೂ ಕ್ಯಾರೆ ಅನ್ನದೆ ಮುಖ್ಯಮಂತ್ರಿ ಕುರ್ಚಿಯಲ್ಲಿ ಸುಭದ್ರವಾಗಿ ಕೂತಿದ್ದಾನೆ ಯಡ್ಡಿ.

ಈ ಯಡಿಯೂರಪ್ಪ ತೊಲಗುವ ಮುನ್ನ ಇನ್ನೆಷ್ಟು ರೈತರು ತಮ್ಮ ಮನೆ, ಭೂಮಿ ಮತ್ತು ಪ್ರಾಣವನ್ನೂ ಕಳೆದುಕೊಳ್ಳಬೇಕೋ? 'ಲಂಕೇಶ್' ತಂಡ ಇನ್ನೆಷ್ಟು ಇಂಕ್ ಮತ್ತು ಪೇಪರ್ ಅನ್ನು ವೆಚ್ಚ ಮಾಡಬೇಕೋ?! ಆ ಭುವನೇಶ್ವರಿಗೇ ಗೊತ್ತು!

- ಗಾಯತ್ರಿ ರಾವ್, ಈ ಮೇಲ್ ಮೂಲಕ




ಕಳೆದ ಹಲವಾರು ವಾರಗಳಿಂದ ಸುರಿದ ಧಾರಾಕಾರ ಮಳೆಯಿಂದಾಗಿ ರಾಜ್ಯದ ಬಹಳಷ್ಟು ಭಾಗಗಳಲ್ಲಿ ಮನೆ-ಬೆಳೆ ನಾಶವಾಗಿದೆ. ಇನ್ನು ಉತ್ತರ ಕರ್ನಾಟಕದ ಬಹಳಷ್ಟು ಭಾಗಗಳಲ್ಲಿ ಕಳೆದ ವರ್ಷ ಸುರಿದ ಮಳೆಯಿಂದಾಗಿ ಅಪಾರ ನಷ್ಟವನ್ನು ಅನುಭವಿಸಿದ್ದ ಸಾವಿರಾರು ಜನ ಇವತ್ತಿಗೂ ಅಕ್ಷರಶಃ ನಿರ್ಗತಿಕರಾಗಿಯೇ ದಿನಗಳನ್ನು ದೂಡುತ್ತಿದ್ದಾರೆ. ಲೆಕ್ಕವಿಲ್ಲದಷ್ಟು ಜನ ಹಸಿವು ಮತ್ತು ಅನಾರೋಗ್ಯದಿಂದಾಗಿ ನರಳುತ್ತಿದ್ದಾರೆ. ಆದರೆ ಇದ್ಯಾವುದಕ್ಕೂ ಸ್ಪಂದಿಸದ ಬಿಜೆಪಿ ಸರ್ಕಾರದ ನಾಯಕರು ರಾಜಕೀಯ ದೊಂಬರಾಟದಲ್ಲಿ ಮುಳುಗಿದ್ದಾರೆ.

ಹಸಿದ ಹೊಟ್ಟೆಗಳಿಗೆ ಆಹಾರ ಮತ್ತು ನಿರ್ಗತಿಕರಿಗೆ ವಸತಿಗಳನ್ನು ಕೊಡಬೇಕಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ನೂರಾರು ದೇವಸ್ಥಾನಗಳಿಗೆ ಪ್ರದಕ್ಷಿಣೆ ಹಾಕುತ್ತಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ನಡೆಯಲಿರುವ ಜಿಲ್ಲಾ ಮತ್ತು ಗ್ರಾಮ ಪಂಚಾಯತಿ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದ ವಿವಿಧ ಭಾಗಗಳಿಗೆ ಹೋಗಿ ಬಡ ಮಹಿಳೆಯರಿಗೆ ಅಲ್ಪ ಮೌಲ್ಯದ ಸೀರೆಗಳನ್ನು ಹಂಚಿ "ನನ್ನ ಕೈಬಿಡಬೇಡಿ ಮಾತೆಯರೇ" ಎಂದು ಅಂಗಲಾಚುತ್ತಿದ್ದಾರೆ.

ಕಷ್ಟದಲ್ಲಿರುವ ಜನರ ಕೈಹಿಡಿಯದ ಮುಖ್ಯಮಂತ್ರಿಯ ಕೈಯನ್ನು ಜನ ಯಾಕೆ ಹಿಡಿಯಬೇಕು?

- ವಿಜಯಲಕ್ಷ್ಮಿ ಆರ್. ಬೆಂಗಳೂರು

ಬಾಬು ಲಿಮಿಟ್ಸ್!



ಇತ್ತೀಚೆಗೆ ಮಲೆಯಾಳಿ ನಿರ್ದೇಶಕ ದಿನೇಶ್ ಬಾಬು ...ನ್ನಡ ಚಿತ್ರರಂಗದ ಬಡ ನಿರ್ಮಾಪಕರ ಪಾಲಿಗೆ 'ಆಪ ...ದ್ಭವ' ಎನಿಸಿಕೊಂಡಿದ್ದಾರೆ.

ಹಿಂದೊಮ್ಮೆ ಇದೇ ಬಾಬು ಅವರನ್ನು ಕೇರಳಕ್ಕೆ ...ಸಬೇಕೆಂದು ಇಲ್ಲಿಯ ನಿರ್ಮಾಪಕರು ಕೂಗಾಡಿದ್ದರು. ...ೀಗ ಅದೇ ಜನ ಬಾಬು ಕಾಲ್‌ಶೀಟ್‌ಗಾಗಿ ಅಂಗ ...ಯುತ್ತಿರುವುದು ಪರಿಸ್ಥಿತಿಯ ವ್ಯಂಗ್ಯವೇ ಸರಿ.

...ಹಾಗೆ ನೋಡಿದರೆ, ಬಾಬು ನಿರ್ದೇಶಿಸಿದ ಚಿತ್ರ ...ನೂ ಅವುಗಳ ನಿರ್ಮಾಪಕರಿಗೆ ಕೋಟ್ಯಾಂತರ ...ಪಾಯಿ ಲಾಭ ತಂದುಕೊಟ್ಟಿಲ್ಲ, ಆದರೆ ಇವರ ...ಗಳ ನಿರ್ಮಾಪಕರ್‍ಯಾರೂ ಮನೆ, ಮಠ, ಹೆಂಡತಿಯ ...ಯನ್ನೂ ಕಳೆದುಕೊಂಡಿಲ್ಲ ಎಂಬುದೇ ಅವರ ... ಇರುವ ಪ್ಲಸ್ ಪಾಯಿಂಟ್!

ಕೇವಲ ಎರಡು ವಾರಗಳಲ್ಲಿ ಒಂದು ಸಿನಿಮಾದ ...ೀಕರಣವನ್ನು ಮುಗಿಸುವ ದಿನೇಶ್ ಬಾಬು ಎರಡೇ ...ಗಳೊಳಗೆ ಚಿತ್ರವನ್ನು ಬಿಡುಗಡೆ ಮಾಡುತ್ತಾರೆ. ...ತ್ರವಲ್ಲ, ಅದಾದ ಮೂರನೇ ತಿಂಗಳಿಗೆ ...ರ್ಮಾಪಕನಿಗೆ ಕನಿಷ್ಠ ವೆಂದರೂ 30-40 ಲಕ್ಷ ...ಪಾಯಿ ಲಾಭ ಬಂದೇ ಬರುತ್ತೆ. ಅಕಸ್ಮಾತ್ ...ರ್ಮಾಪಕನ ಅದೃಷ್ಟ ಇನ್ನೂ ಚೆನ್ನಾಗಿದ್ದರೆ ಅದಕ್ಕಿಂತಲೂ ...ಚ್ಚು ಲಾಭ ಗ್ಯಾರಂಟಿ. ಇದು ದಿನೇಶ್‌ಬಾಬು ಅವರ ...ಕ್ಸಸ್'ನ ಸ್ಕ್ರಿಪ್ಟ್! ಈ ಕಾರಣಕ್ಕೆ ಅವರಿಗೆ ಈಗ ...ಮ್ಯಾಂಡೋ ಡಿಮ್ಯಾಂಡು!

... ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ...ರ್ಷಾನುಗಟ್ಟಲೆ ಒಂದು ಚಿತ್ರವನ್ನು ಮಾಡಿ ಅದು ...ೀತರೆ ಕೈಸುಟ್ಟು ಕೊಳ್ಳುವುದು ಒಳ್ಳೆಯದೋ? ...ಥವಾ ಆದಷ್ಟು ಕಡಿಮೆ ಅವಧಿಯಲ್ಲಿ ಒಂದು ...ತ್ರವನ್ನು ತಯಾರಿಸಿ ಸಿಕ್ಕಷ್ಟು ಲಾಭವನ್ನು ...ಡಿಕೊಳ್ಳುವುದು ಒಳ್ಳೆಯದೋ? ದಿನೇಶ್ ಬಾಬು ...ವರ ಫಾರ್ಮುಲಾ ಸರಿನೋ? ಅಥವಾ ಉಳಿದ ...ಬು'ಗಳು ಸರಿನೋ? ಈ ಪ್ರಶ್ನೆಗಳಿಗೆ ಉತ್ತರ ಕೊಡುವುದು ...ಷ್ಟವಾದರೂ ಸದ್ಯಕ್ಕೆ ದಿನೇಶ್ ಬಾಬು ನಿರ್ಮಾಪಕರಿಗೆ ...ಲ್ಲುವ ಕುದುರೆಯಾಗಿ ಕಾಣಿಸುತ್ತಿದ್ದಾರೆ ಎಂಬುದು ಮಾತ್ರ ...ು.

... ಪ್ರೇಮ್, ಸೂರಿ, ಉಪ್ಪಿ ತರಹದ ಖ್ಯಾತ ನಿರ್ದೇಶಕರು ...ೋಟಿಗಟ್ಟಲೇ ಹಣ ಸುರಿದು, ತಿಂಗಳಾನುಗಟ್ಟಲೆ ಚಿತ್ರೀ ...ಣ ನಡೆಸಿ ಚಿತ್ರವೊಂದನ್ನು ಸಂಪೂರ್ಣಗೊಳಿಸಿದರೆ, ...ದೇ ದಿನೇಶ್ ಬಾಬು ಕೇವಲ ೧೪ ದಿನಗಳಲ್ಲಿ ಚಿತ್ರ ...ಂದನ್ನು ಮುಗಿಸುತ್ತಾರಾದ್ದರಿಂದ ಸಹಜವಾಗಿಯೇ ಅವರು ...ರ್ಮಾಪಕರ ಡಾರ್ಲಿಂಗ್ ಎನಿಸಿಕೊಂಡಿದ್ದಾರೆ.

ದಿನೇಶ್ ಬಾಬು ಅವರ ಚಿತ್ರಗಳಲ್ಲಿ ಸಾಮಾನ್ಯವಾಗಿ ದೊಡ್ಡದೊಡ್ಡ ನಟನಟಿಯರು ಇರುವುದಿಲ್ಲ, ಉದಾಹರಣೆಗೆ ಕಳೆದ ವರ್ಷ ಬಿಡುಗಡೆಯಾದ 'ಮೂರು ಗುಟ್ಟು, ಒಂದು ಸುಳ್ಳು, ಒಂದು ನಿಜ', 'ಗಣೇಶ್', 'ಮಿಸ್ಟರ್ ಗರಗಸ', 'ಪೈಂಟರ್ಸ್', 'ಎರಡನೇ ಮದುವೆ', ಇದೀಗ ಮುಕ್ತಾಯ ಗೊಂಡಿರುವ 'ಮತ್ತೊಂದು ಮದುವೆ' ... ಈ ಎಲ್ಲಾ ಚಿತ್ರಗಳಲ್ಲಿ ಸ್ಟಾರ್ ನಟನಟಿಯರಿಲ್ಲ, ಆದರೆ ಬಾಬು ಅವರ ಬಹುತೇಕ ಚಿತ್ರಗಳಲ್ಲಿ ಅವರ ಕೆಲವು ಫೇವರಿಟ್ ನಟನಟಿಯರಾದ ಅನಂತ್‌ನಾಗ್, ಸುಹಾಸಿನಿ, ಶರಣ್, ತಾರಾ, ಚಿತ್ರಶೆಣೈ ಮುಂತಾದವರು ಇದ್ದೇ ಇರುತ್ತಾರೆ. ಹೀಗಾಗಿ ಚಿತ್ರೀಕರಣ ಕೆಲವೇ ದಿನಗಳಲ್ಲಿ ಮುಗಿದರೂ ಚಿತ್ರದ ಗುಣಮಟ್ಟ ಕಡಿಮೆಯಾಗಿರುವುದಿಲ್ಲ. ಜೊತೆಗೆ ಸ್ವತಃ ಬಾಬು ಛಾಯಾಗ್ರಾಹಕರಾಗಿರುವುದರಿಂದ ತಾಂತ್ರಿಕ ವಾಗಿಯೂ ಸಮಸ್ಯೆ ಇರುವುದಿಲ್ಲ.

ದಿನೇಶ್ ಬಾಬು ಅವರ ಕಾರ್ಯಶೈಲಿಯ ವಿಶೇಷತೆ ಯೆಂದರೆ ಇತ್ತೀಚಿನ ದಿನಗಳಲ್ಲಿ ಅವರು ಎರಡೆರಡು ಕ್ಯಾಮರಾಗಳನ್ನು ಬಳಸಿ ಚಿತ್ರೀಕರಣ ಮಾಡುವುದು. ಸಾಧಾರಣವಾಗಿ ನೃತ್ಯ ಮತ್ತು ಫೈಟಿಂಗ್ ದೃಶ್ಯಗಳಿಗೆ ಮಾತ್ರ ನಿರ್ದೇಶಕರು ಎರಡೆರಡು ಕ್ಯಾಮರಾಗಳನ್ನು ಬಳಸುತ್ತಾರೆ. ಆದರೆ ದಿನೇಶ್ ಬಾಬು ಎಲ್ಲ ದೃಶ್ಯಗಳನ್ನು ಎರಡೆರಡು ಕ್ಯಾಮರಾಗಳಲ್ಲಿ ಸೆರೆಹಿಡಿಯುವುದರಿಂದ ಇತರರಿಗಿಂತ ಹೆಚ್ಚು ವೃತ್ತಿಪರತೆ ಮತ್ತು ತಾಂತ್ರಿಕತೆಯ ಮೆರಗನ್ನು ಪ್ರದರ್ಶಿಸುತ್ತಾರೆ.

ಇತ್ತೀಚೆಗೆ ದಿನೇಶ್ ಬಾಬು ಅವರ ಚಿತ್ರ ನಿರ್ದೇಶನದ ಶೈಲಿಯನ್ನು 'ದಿನೇಶ್ ಬಾಬು ಕಂಪನಿ ಲಿಮಿಟೆಡ್' ಎಂದು ಕೆಲವರು ಆಡಿಕೊಳ್ಳಲಾರಂಭಿಸಿದ್ದಾರೆ. ಇದಕ್ಕೆ ಪೂರಕವಾಗಿಯೋ ಎಂಬಂತೆ ಮುಂದಿನ ತಿಂಗಳ 12ರಂದು ದಿನೇಶ್ ಬಾಬು 'ಲಿಮಿಟ್ಸ್' ಎಂಬ ಹೊಸ ಚಿತ್ರವೊಂದನ್ನು ಆರಂಭಿಸುತ್ತಿದ್ದಾರೆ. ಎಂದಿನಂತೆ ಈ ಚಿತ್ರವೂ ಹದಿನಾಲ್ಕೇ ದಿನಗಳಲ್ಲಿ ಮುಗಿಯಲಿದ್ದು ಅನಂತ್-ಸುಹಾಸಿನಿ ಜೋಡಿಯೇ ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿ ದ್ದಾರೆ. ಯಾವುದೇ ವಿಷಯವಿರಲಿ ಅದು ಲಿಮಿಟ್‌ನಲ್ಲಿದ್ದರೆ ಚೆನ್ನಾಗಿರುತ್ತದೆ; ಅತಿಯಾದರೆ ಅಮೃತವೂ ವಿಷವಲ್ಲವೇ? ಎಂಬ ತೆಳುವಾದ ಕಥಾಹಂದರವನ್ನು ಬಾಬು ಈ ಚಿತ್ರದಲ್ಲಿ ಕೈಗೆತ್ತಿಕೊಂಡಿದ್ದಾರಂತೆ.

ಸಾಮಾನ್ಯವಾಗಿ ಬಾಬು ನಿರ್ದೇಶನದ ಚಿತ್ರದ ಬಜೆಟ್ ಒಂದೂಕಾಲು ಕೋಟಿಯ ಸುತ್ತಮುತ್ತವಿರುತ್ತದೆ. ದಿನೇಶ್ ಬಾಬು ಅವರೇ ಛಾಯಾಗ್ರಹಣ-ಕಥೆ-ಚಿತ್ರಕಥೆ-ಸಂಭಾಷಣೆ-ನಿರ್ದೇಶನದ ಜವಾಬ್ದಾರಿಗಳನ್ನು ಹೊರುವುದರಿಂದ ಅವರು ಚಿತ್ರವೊಂದಕ್ಕೆ 20 ಲಕ್ಷ ಸಂಭಾವನೆಯನ್ನು ಪಡೆಯುತ್ತಾರೆ. ಉಳಿದ ಒಂದು ಕೋಟಿಯಲ್ಲಿ ಇಡೀ ಚಿತ್ರವನ್ನು ಮುಗಿಸಿಬಿಡುತ್ತಾರೆ. ಅವರ ಚಿತ್ರದ ಚಿತ್ರೀಕರಣ ಮುಗಿಯುವ ಮೊದಲೇ ಟಿವಿ ಚಾನೆಲ್‌ನವರು ಅದನ್ನು ಸುಮಾರು ೮೫ ಲಕ್ಷಕ್ಕೆ ಖರೀದಿಸುತ್ತಾರೆ. ಅಲ್ಲಿಗೆ 35ರಿಂದ 40 ಲಕ್ಷ ರೂ.ಗಳಷ್ಟು ಬಂಡವಾಳದ ಬಗ್ಗೆ ಮಾತ್ರ ನಿರ್ಮಾಪಕ ತಲೆಕೆಡಿಸಿಕೊಳ್ಳಬೇಕಾ ಗುತ್ತದೆ. ಅಂದಹಾಗೆ, ಇತರೆ ಸಿನಿಮಾಗಳನ್ನು ಟಿವಿಯಲ್ಲಿ ನೋಡಲು ತಿಂಗಳಾನುಗಟ್ಟಲೆ ಕಾಯಬೇಕಿದ್ದರೆ ಈ ಬಾಬು ನಿರ್ದೇಶನದ ಸಿನಿಮಾಗಳು ಬಿಡುಗಡೆಯಾದ ಒಂದೆರೆಡು ತಿಂಗಳಲ್ಲೇ ಟಿವಿಯಲ್ಲಿ ಕಾಣಿಸಿಕೊಳ್ಳುತ್ತವೆ.


ಆದ್ದರಿಂದ. "ದಿನೇಶ್ ಬಾಬು ಪಂಚಕೋಟಿ ಕನ್ನಡಿಗರಿಗೆ ಚಿತ್ರ ಮಾಡುವ ಬದಲು ಒಂದು ಟಿವಿ ಚಾನೆಲ್‌ಗಾಗಿ ಚಿತ್ರ ಮಾಡುವ ನಿರ್ದೇಶಕರಾಗಿದ್ದಾರೆ. ಈಗಾಗಲೇ ಜನರು ಥಿಯೇಟರ್‌ಗಳಿಗೆ ಬರುತ್ತಿಲ್ಲ, ಹೇಗಾದರೂ ಮಾಡಿ ಮನೆಯಲ್ಲಿ ಕುಳಿತಿರುವ ಪ್ರೇಕ್ಷಕರನ್ನು ಥಿಯೇಟರ್ ಕಡೆ ಬರುವಂತೆ ಮಾಡಲು ಇತರೆ ನಿರ್ಮಾಪಕರು ಏನೇನೋ ಸರ್ಕಸ್‌ಗಳನ್ನು ಮಾಡುತ್ತಿದ್ದರೆ ಈ ದಿನೇಶ್ ಬಾಬು ನಿರ್ದೇಶನದ ಚಿತ್ರಗಳು ಎರಡೇ ತಿಂಗಳಲ್ಲಿ ಟಿವಿಯಲ್ಲಿ ಬರುವುದರಿಂದ ಪ್ರೇಕ್ಷಕರು ಖಾಯಮ್ಮಾಗಿ ಮನೆಯಲ್ಲಿ ಉಳಿದುಕೊಳ್ಳಬಹುದು" ಎಂಬುದು ಬಾಬು ವಿರೋಧಿಗಳ ಟೀಕೆ. ಆದರೆ ಇದರ ಬಗ್ಗೆ ಬಾಬು ಆಗಲಿ ಅವರ ಚಿತ್ರಗಳಿಗೆ ಬಂಡವಾಳ ಹೂಡುತ್ತಿರುವ ನಿರ್ಮಾಪಕರಾಗಲಿ ತಲೆಕೆಡಿಸಿಕೊಳ್ಳುತ್ತಿಲ್ಲ.

ಕೇವಲ 48 ಗಂಟೆಗಳಲ್ಲಿ 'ಇದು ಸಾಧ್ಯ' ಎಂಬ ಚಿತ್ರವನ್ನು ನಿರ್ದೇಶಿಸುವ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ದಿನದಿಂದಲ್ಲೇ ಸುದ್ದಿ ಮಾಡಿದವರು ದಿನೇಶ್ ಬಾಬು. ಇಂತಹ ಬಾಬು ಬರುವ ದಿನಗಳಲ್ಲಿ ಹೊಸ ದೊಂದು ಪ್ರಯೋಗ ಮಾಡಲು ಅಣಿಯಾಗುತ್ತಿದ್ದಾರೆ. ಅವರು ಹೇಳಿದ ಪ್ರಕಾರ ಅವರ ಮುಂದಿನ ಚಿತ್ರಗಳಲ್ಲಿ ನಾಯಕ ಅಥವಾ ನಾಯಕಿಯೇ ಇರುವುದಿಲ್ಲವಂತೆ! ಏನಿದ್ದರೂ ಎರಡು ಸಂಸಾರಗಳ ನಡುವೆ ನಡೆಯುವ ಕಥೆಯನ್ನೇ ಚಿತ್ರ ಮಾಡುವ ಹುಮ್ಮಸ್ಸು ಅವರದ್ದು. ಅದಕ್ಕಾಗಿ ಕಥೆ-ಚಿತ್ರಕಥೆಯನ್ನೂ ದಿನೇಶ್ ಬಾಬು ರೆಡಿ ಮಾಡಿಟ್ಟಿದ್ದಾರೆ. ಇದರರ್ಥ: ಮುಂಬರುವ ದಿನಗಳಲ್ಲಿ ಇನ್ನೂ ಕಡಿಮೆ ಅವಧಿಯಲ್ಲಿ, ಇನ್ನೂ ಕಡಿಮೆ ವೆಚ್ಚದಲ್ಲಿ ಚಿತ್ರ ಮಾಡಿ ನಿರ್ಮಾಪಕರ ಹೊರೆಯನ್ನಿಳಿಸುವುದು ಅವರ ಅಭಿಲಾಷೆ.

ಈಗ ಪ್ರಶ್ನೆಯಿಷ್ಟೇ: ಬಾಲಿವುಡ್ ಚಿತ್ರಗಳಿಗೆ ಸ್ಪರ್ಧೆ ನೀಡುವಂತೆ ವಿದೇಶಗಳಲ್ಲಿ ಶೂಟಿಂಗ್ ಮಾಡುವ ಮೂಲಕ ಕನ್ನಡ ಚಿತ್ರಗಳನ್ನು ಶ್ರೀಮಂತವಾಗಿ ನಿರ್ಮಿಸುವುದು ಉದ್ಯಮದ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತಾರ್ಹವೋ? ಅಥವಾ ಹಾಲಿವುಡ್ ಮತ್ತು ಬಾಲಿವುಡ್ ಚಿತ್ರಗಳನ್ನು ಕದ್ದು ಅವುಗಳನ್ನು ಕನ್ನಡಕ್ಕೆ ರೂಪಾಂತರಿಸಿ ಕಡಿಮೆ ಅವಧಿಯಲ್ಲಿ ಸಿನಿಮಾವನ್ನು ಮುಗಿಸುವ ದಿನೇಶ್ ಬಾಬು ತಹರದವರು ನಮ್ಮ ನಿರ್ಮಾಪಕರಿಗೆ ಆಪತ್ಬಾಂಧವರಾಗುವುದು ಸರಿಯೋ? ದಿನೇಶ್ ಬಾಬು ಕನ್ನಡ ಚಿತ್ರರಂಗಕ್ಕೆ ವರವೋ? ಅಥವಾ ಶಾಪವೋ?

• ಸದಾಶಿವ ಶೆಣೈ

ಪಕ್ಕೆ ಮುರಿದರೂ ಪಕ್ಕಾ ಕಮಿಟ್‌ಮೆಂಟ್



... ನಿರ್ದೇಶಕ ಓಂ ಪ್ರಕಾಶ್ ...ವ್ ಮಹಾನ್ ತಿಕ್ಕಲ, ...ಟ, ಸೀರೆ ಶೋಕಿ ...ಬುದೆಲ್ಲಾ ನಿಜ. ಆದರೆ ...ದೆಲ್ಲವುಗಳ ಹೊರತಾಗಿಯೂ ...ವರಲ್ಲಿರುವ ವೃತ್ತಿಪರತೆ ...ತ್ತು ಉತ್ಸಾಹ ಹೊರಬಂದು ...ವರ ಗಮನ ...ದುಬಿಡುತ್ತದೆ.

... ಇತ್ತೀಚೆಗೆ ಕಾರು ...ಪಘಾತದಲ್ಲಿ ಪಕ್ಕೆ ...ರಿದುಕೊಂಡು ಓಂ ...ಕಾಶ್ ರಾವ್ ಅಡ್ಡಡ್ಡ ...ಲಗಿಬಿಟ್ಟಿದ್ದರ ಬಗ್ಗೆ ...ಕೇಶ್' ವರದಿ ಮಾಡಿತ್ತು, ...ವರ ಪಕ್ಕೆ ಸ್ವಲ್ಪ ...ಸ್ಥಿಗಾದರೂ ...ಸರಿಸಿಕೊಳ್ಳಲು ಕಡೇಪಕ್ಷ ...ದು ವರ್ಷವಾದರೂ ...ತು. ಆದರೆ ಈ ಅವಧಿಯಲ್ಲಿ ಓಂ ಪ್ರಕಾಶರನ್ನೇ ನಂಬಿ ಚಿತ್ರಗಳನ್ನು ಪ್ರಾರಂಭಿಸಿ ...ಗಳಿಗಾಗಿ ಕೋಟಿ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರುವ ನಿರ್ಮಾಪಕರು, ...ರೆಲ್ಲರಿಗೆ ಸಾಲ ನೀಡಿರುವ ಫೈನಾನ್ಷಿಯರುಗಳ ಗತಿ ಏನಾಗಿರುತ್ತದೋ? ಎಂಬುದು ...ಯ ಸಾರಾಂಶವಾಗಿತ್ತು.

... ಈ ವರದಿ ಪ್ರಕಟವಾದ ಮೇಲೆ ನಿಜಕ್ಕೂ ಓಂ ಪ್ರಕಾಶ್ ಬಗ್ಗೆ ನಿರ್ಮಾಪಕರು ಆತಂಕಗೊಂಡಿದ್ದರಂತೆ. ...ಸಲ್ಲೂ ವೈದ್ಯರು ಓಂ ಪ್ರಕಾಶ್ ಇನ್ನು ಆರು ತಿಂಗಳು ಕಾಲ ಹಾಸಿಗೆ ಬಿಟ್ಟು ಮೇಲೇಳಬಾರದು ...ದು ತಾಕೀತು ಮಾಡಿದ್ದನ್ನು ಕೇಳಿ ದಂಗಾಗಿದ್ದರು. ಆದರೆ ಓಂ ಪ್ರಕಾಶ್ ಅವರು "ಅನ್ನದಾತ ...ರ್ಮಾಪಕರು ನನ್ನ ಕಾರಣಕ್ಕೆ ನಷ್ಟ ಅನುಭವಿಸಬಾರದು" ಎಂದು ತೀರ್ಮಾನಿಸಿ ಊರುಗೋಲಿನ ...ಯದಿಂದ ಮೇಲೆದ್ದು ತಾವು ಮಾಡಿಕೊಂಡಿದ್ದ ಕಮಿಟ್‌ಮೆಂಟುಗಳನ್ನೂ ಈಗ ಮುಗಿಸಿದ್ದಾರೆ. ...ೂ ಯಾವ ಮಟ್ಟಕ್ಕೆ ಎಂದರೆ, ಅವರು ಮಾಮೂಲಿಯಾಗಿ ಮಾಡುತ್ತಿದ್ದುದಕ್ಕಿಂತ ವೇಗವಾಗಿ ... ಮಾಡಿದ್ದಾರಂತೆ. ಅಷ್ಟೇ ಅಲ್ಲ, ಇದೇ ತಿಂಗಳು ಇನ್ನೊಂದು ಹೊಸ ಸಿನಿಮಾವನ್ನು ...ಭಿಸಲು ಅವರು ಸಿದ್ಧತೆಯನ್ನೂ ಮಾಡಿಕೊಂಡಿದ್ದಾರಂತೆ.


... ಒಂದೇ ಒಂದು ಅಪಘಾತ ಓಂ ಪ್ರಕಾಶ್‌ರ ಜೀವನ ಶೈಲಿಯನ್ನೇ ಬದಲಿಸಿದೆ. ಅವರು ಮತ್ತೆ ... ರೇಜಿಗಳನ್ನು ಮಾಡಿಕೊಳ್ಳದೇ ತಮ್ಮ ಕ್ರಿಯಾಶೀಲತೆಯನ್ನು, ಲವಲವಿಕೆಯನ್ನು ಉಳಿಸಿಕೊಂಡು ...ಲಿ...

ಕಾಸಿಗಾಗಿ ಕಾಲ್‌ಶೀಟ್

ಟಿ.ಪಿ. ಸಿದ್ದರಾಜು ಮಹತ್ವಾಕಾಂಕ್ಷೆಯಿಂದ ನಿರ್ಮಿಸಿದ್ದ 'ಯಕ್ಷ' ಎಕ್ಕುಟ್ಟಿ ಹೋದ ಮೇಲೆ ಆ ನಷ್ಟದ ಜವಾಬ್ದಾರಿಯನ್ನು ಹೊಸ ನಿರ್ಮಾಪಕರ ಮೇಲೆ ಹೊರಿಸಲು ಮುಂದಾಗಿರುವಂತಿದೆ.

ಸುಮಾರು ನಾಲ್ಕು ಕೋಟಿ ಖರ್ಚು ಮಾಡಿ ಸಿದ್ದರಾಜು 'ಯಕ್ಷ' ಚಿತ್ರವನ್ನು ನಿರ್ಮಿಸಿದ್ದರು. ಜೊತೆಗೆ ತಮ್ಮ ಮನೆಮಂದಿಗೆಲ್ಲಾ ಆ ಚಿತ್ರದಲ್ಲಿ ಒಂದೊಂದು ಛಾನ್ಸು ಕೊಟ್ಟು, ತಾವೂ ಒಂದು ಪಾರ್ಟು ಮಾಡಿದ್ದರು. ಆದರೆ ಸಿದ್ದರಾಜು ಆಂಡ್ ಫ್ಯಾಮಿಲಿಯ ದುರಾದೃಷ್ಟವೋ ಏನೋ 'ಯಕ್ಷ' ಒಂದೇ ವಾರಕ್ಕೇ ಥಿಯೇಟರ್‌ಗಳಿಂದ ಎತ್ತಂಗಡಿಯಾಗಿದ್ದ

ತಮ್ಮ ಮಗ ಲೂಸ್‌ಮಾದ ಯಾನೆ ಯೋಗೇಶ್‌ನನ್ನು ಹಾಕಿಕೊಂಡು ನಿರ್ಮಿಸಿದ್ದ 'ಯಕ್ಷ'ದಿಂದ ಕಳಕೊಂಡಿದ್ದನ್ನು ಮಗನಿಂದಲೇ ಮರಳಿ ಪಡೆಯಬೇಕು ಎಂದು ಸಿದ್ದರಾಜು ತೀರ್ಮಾನಿಸಿರುವಂತಿದೆ. ಅವರು ಇತ್ತೀಚೆಗೆ "ಸಿನಿಮಾ ಸೂಪರ್ ಹಿಟ್ ಆಗುತ್ತೆ ಅಂತ ಕಣ್ಣು ಮುಚ್ಚಿಕೊಂಡು ಹಣ ಖರ್ಚು ಮಾಡಿದೆ. ಆದರೆ ಹಾಕಿದ ಬಂಡವಾಳದಲ್ಲಿ ನಯಾಪೈಸೆ ವಾಪಾಸ್ ಬರಲಿಲ್ಲ, ಹೇಗಾದರೂ ಮಾಡಿ ಆ ದುಡ್ಡನ್ನು ವಾಪಾಸ್ ತಗೀಬೇಕು" ಅಂತಾ ಲೊಚಗುಟ್ಟುತ್ತಲೇ ಇದ್ದರು.



ಆ ನಿಟ್ಟಿನಲ್ಲಿ ಈಗ ಇದ್ದಕ್ಕಿದ್ದ ಹಾಗೆ ಲೂಸ್ ಮಾದನ ಸಂಭಾವನೆಯನ್ನು ಮೂವತ್ತು ಲಕ್ಷದಿಂದ ನಲವತ್ತೈದು ಲಕ್ಷಕ್ಕೆ ಏರಿಸಿಬಿಟ್ಟಿದ್ದಾರೆ ಸಿದ್ದರಾಜು. "ಸಿನಿಮಾದಲ್ಲಿ ಕಥೆ ಇದ್ರೂ ಸರಿ, ಇಲ್ದೇ ಇದ್ರೂ ಸರಿ. ನಲವತ್ತೈದು ಲಕ್ಷ ಕೊಟ್ರೆ ಮಗನ ಕಾಲ್‌ಶೀಟ್ ಕೊಡ್ತೀನಿ" ಎಂದು ಸಿದ್ದರಾಜು ಡಿಸೈಡು ಮಾಡಿದ್ದಾರೆ. ಆದ್ದರಿಂದ ಈಗ ಮಾಲೂರು ಚಂದ್ರು ಎಂಬ ಹೊಸ ನಿರ್ದೇಶಕನ ಸಿನಿಮಾಗೆ ಯಲ್ಲಪ್ಪ ಎಂಬ ಹೊಸ ನಿರ್ಮಾಪಕ ಲೂಸ್ ಮುಖಕ್ಕೆ ನಲವತ್ತೈದು ಲಕ್ಷ ಕೊಡಲು ಒಪ್ಪಿ ಟೋಕನ್ ಅಡ್ವಾನ್ಸನ್ನೂ ಕೊಟ್ಟಿದ್ದಾರೆ. ದಿಗಂತ್ ಜೊತೆ ಯೋಗೇಶ್ ನಟಿಸಲಿರುವ ಮತ್ತೊಂದು ಚಿತ್ರಕ್ಕೂ ಆಗಲೇ ಲೂಸು ಸೈನ್ ಮಾಡಿದ್ದಾನೆ.

ಹಣದ ಬೆನ್ನೇರಿ ಹೋಗಿ ಮಣ್ಣುಮುಕ್ಕಿದ ಗೋಲ್ಡ್ ಛಾಲೆಂಜ್ ತರಹದ ನಟರ ಉದಾಹರಣೆಗಳು ಕಣ್ಣಮುಂದೆ ಇರುವಾಗಲೇ ಈ ಲೂಸ್ ಮಾದ ಮತ್ತು ಆತನ ಅಪ್ಪ ಸಿಕ್ಕ ಸಿಕ್ಕ ಸಿನಿಮಾಗಳಿಗೆ ಕಲ್‌ಶೀಟ್ ನೀಡಿ ಕಾಸು ಕೆರೆಯಲು ಹೊರಟಿದ್ದಾರೆ. ಈಗಲೇ ಅದ್ವಾನವೆದ್ದಿರುವ ಲೂಸ್ ಮಾದನ ಭವಿಷ್ಯ ಗೋವಿಂದಾ, ಗೋವಿಂದಾ...... ಆಗುದುದ್ದರೆ ಹೆಚ್ಚು!

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 8-12-2010 RNI No. KARKAN20

ಮಣಿ ಮಣಿ ಪ್ರಿಯಾಮಣಿ

"ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸುವುದಕ್ಕಿಂತ ಕಲಾತ್ಮಕ ಚಿತ್ರಗಳಲ್ಲಿ ತೊಡಗುವುದರಲ್ಲೇ ನನಗೆ ಹೆಚ್ಚು ಒಲವು...." ಹೀಗೆ ಹೇಳುವ ನಾಯಕಿಯೇನು ಆರ್ಟ್ ಫಿಲಂಗಳನ್ನೇ ನೆಚ್ಚಿಕೊಂಡವಳಲ್ಲ, ಒಂದು ಕಡೆ ಗೌರಮ್ಮನಂತೆ ಕಲಾತ್ಮಕ ಚಿತ್ರಗಳಲ್ಲಿ ನಟಿಸುತ್ತಲೇ ಇನ್ನೊಂದು ಕಡೆ ಕಮರ್ಷಿಯಲ್ ಚಿತ್ರಗಳಲ್ಲೂ ಮಾಡ್ ಡ್ರೆಸ್ ತೊಟ್ಟು ಬಿಂದಾಸ್ ಆಗಿ ಮೆರೆಯುತ್ತಿರುವವಳು.

ಆಕೆ ಪ್ರಿಯಾಮಣಿ!

ದಕ್ಷಿಣ ಭಾರತದ ಚಿತ್ರರಸಿಕರು ಪ್ರಿಯಾಮಣಿ ಎಂಬ ಈ ಮಿಂಚುಳ್ಳಿಯ ಹೆಸರು ಕೇಳದೇ ಇರಲು ಸಾಧ್ಯವಿಲ್ಲ. ಸದ್ಯಕ್ಕೆ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಚಿತ್ರರಂಗದಲ್ಲಿ ಬಹುಬೇಡಿಕೆಯ ನಟಿಯಾಗಿರುವ ಪ್ರಿಯಾಮಣಿ ಚಿತ್ರರಂಗಕ್ಕೆ ಅಡಿಯಿಟ್ಟಿದ್ದು 2003ರಲ್ಲಿ. ಇವತ್ತು ಹಲವಾರು ಚಿತ್ರರಂಗಗಳಲ್ಲಿ 'ಓಡುವ ಕುದುರೆ' ಎನಿಸಿಕೊಂಡಿರುವ ಪ್ರಿಯಾಮಣಿ ಆರಂಭದ ದಿನಗಳಲ್ಲಿ ಸೋಲನ್ನೇ ಹೆಚ್ಚಾಗಿ ಕಂಡಾಕೆ.

ಈಕೆ ಮೊದಲು ನಟಿಸಿದ್ದು 'ಕಣ್ಗಳಿಲ್ ಕಾದಲ್ ಸೆಯ್' ಎಂಬ ತಮಿಳು ಚಿತ್ರದಲ್ಲಿ. ತಮಿಳು ಚಿತ್ರರಂಗದಲ್ಲಿ ರಜನಿಕಾಂತ್, ಕಮಲ್ ಹಾಸನ್ ಸೇರಿದಂತೆ ಖ್ಯಾತ ನಟರುಗಳ ಭವಿಷ್ಯ ರೂಪಿಸಿದ್ದ ನಿರ್ದೇಶಕ ಭಾರತಿರಾಜಾ ನಿರ್ದೇಶನದ ಚಿತ್ರವದು. ಇಂಥ ಅನುಭವೀ ನಿರ್ದೇಶಕನ ಚಿತ್ರದಲ್ಲಿ ಮೊದಲ ಬಾರಿಗೆ ಅವಕಾಶ ಗಿಟ್ಟಿಸುವುದು ಎಂದರೆ ಸುಮ್ಮನೆ ಮಾತೇ? ಆದರೆ ಪ್ರಿಯಾಮಣಿಯ ದುರಾದೃಷ್ಟವೋ ಏನೋ ಭಾರತೀರಾಜಾ ನಿರ್ದೇಶನದ ಚಿತ್ರವಾದರೂ 'ಕಣ್ಗಳಿಲ್ ಕಾದಲ್ ಸೆಯ್' ಬಾಕ್ಸಾಫೀಸಿನಲ್ಲಿ ಹೀನಾಯವಾಗಿ ಸೋತಿತ್ತು.

ಪ್ರಿಯಾಮಣಿಗೆ ಸಿಕ್ಕ ಎರಡನೇ ಅವಕಾಶವೂ ಭರ್ಜರಿಯಾಗೇ ಇತ್ತು. ಅದು ತಮಿಳಿನ ಮತ್ತೊಬ್ಬ ಸ್ಟಾರ್ ನಿರ್ದೇಶಕ ಬಾಲು ಮಹೇಂದ್ರ ನಿರ್ದೇಶನದ 'ಅದು ಒರು ಕನಾ ಕಾಲಂ'. ಆದರೆ ಪ್ರಿಯಾಮಣಿಯ ಅದೃಷ್ಟ ಎರಡನೆ ಬಾರಿಯೂ ಕೈಕೊಟ್ಟದ್ದರಿಂದ ಆ ಚಿತ್ರವೂ ಸೋತಿತು.

ತಾನು ನಟಿಸಿದ ಎರಡೂ ತಮಿಳು ಚಿತ್ರಗಳು ಸೋತಿದ್ದರಿಂದ ಕಂಗೆಟ್ಟು ಮುಂದಿನ ದಾರಿಯ ಬಗ್ಗೆ ಪ್ರಿಯಾಮಣಿ ಯೋಚಿಸುತ್ತಿರುವಾಗಲೇ ಆಕೆಗೆ ಸಿಕ್ಕಿದ್ದು ತೆಲುಗು ಚಿತ್ರರಂಗದಲ್ಲಿ ಅವಕಾಶ. ಜಗಪತಿಬಾಬು ಜೊತೆಗೆ ಪ್ರಿಯಾಮಣಿ ನಟಿಸಿದ 'ಪೆಳ್ಳೈನ ಕಥಾಲೊ' ಎಂಬ ತೆಲುಗು ಚಿತ್ರ ಸೂಪರ್ ಹಿಟ್ ಆಯಿತು. ಅದೇ ಹೊತ್ತಿಗೆ ತಮಿಳಿನ ಖ್ಯಾತ ನಟ ಶಿವಕುಮಾರ್ ಅವರ ಪುತ್ರ ಹಾಗೂ ಸ್ಟಾರ್ ನಾಯಕ ನಟ ಸೂರ್ಯನ ಸಹೋದರ ಕಾರ್ತಿಕ್ ಜೊತೆ ಪ್ರಿಯಾಮಣಿ ನಟಿಸಿದ್ದ 'ಪರುತ್ತಿವೀರನ್' ಕೂಡ ಯಶಸ್ಸು ಕಂಡಿತು. ಅಷ್ಟೇ ಅಲ್ಲ, ಆ ಚಿತ್ರದಲ್ಲಿನ ನಟನೆಗೆ ಪ್ರಿಯಾಮಣಿಗೆ 'ಶ್ರೇಷ್ಠ ನಟಿ' ಎಂಬ ರಾಷ್ಟ್ರ ಪ್ರಶಸ್ತಿ ಮತ್ತು ತಮಿಳುನಾಡಿನ ರಾಜ್ಯ ಪ್ರಶಸ್ತಿಯೂ ದೊರಕಿತು. ಮೊದಲ ಬಾರಿಗೆ ಪ್ರಿಯಾಮಣಿಗೆ ಅದೃಷ್ಟ ಒಲಿಯಿತು.

ಇದಾದನಂತರ ಪ್ರಿಯಾಮಣಿ ನಟಿಸಿದ ತೆಲುಗು ಚಿತ್ರಗಳಾದ 'ಯಮದೊಂಗ', 'ನವ ವಸಂತಂ', 'ಟಾಸ್', ತಮಿಳಿನ 'ಮಲೈಕೋಟ್ಟೈ' ಚಿತ್ರಗಳೂ ಒಂದರ ಹಿಂದೆ ಒಂದು ಹಿಟ್ ಆದವು. ಇದರೊಂದಿಗೆ ಪ್ರಿಯಾಮಣಿಗೆ ಮಲೆಯಾಳಂನಲ್ಲೂ ಅವಕಾಶಗಳು ದೊರಕಿದವು. ಮಲೆಯಾಳಂನಲ್ಲಿ ಈಕೆ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದ್ದು 'ತಿರೈಕಥಾ' ಚಿತ್ರದ ಮೂಲಕ. 'ತಿರೈಕಥಾ' ಎಂದರೆ ಚಿತ್ರಕತೆ ಎಂದರ್ಥ. ಖ್ಯಾತನಟ ಕಮಲ್ ಹಾಸನ್ ಮತ್ತು ಇತ್ತೀಚೆಗಷ್ಟೇ ನಿಧನರಾದ ನಟಿ ಶ್ರೀವಿದ್ಯಾ ನಡುವೆ ೮೦ರ ದಶಕದಲ್ಲಿ ಸಂಭವಿಸಿದ ಪ್ರೇಮ ಪ್ರಕರಣವನ್ನೇ ಆಧಾರವಾಗಿಟ್ಟುಕೊಂಡು 'ತಿರೈಕಥಾ' ಚಿತ್ರವನ್ನು ನಿರ್ಮಿಸಲಾಗಿತ್ತು.

ಹೀಗೆ ಇಡೀ ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ತನ್ನದೇ ಆದ ಸ್ಥಾನವನ್ನು ಗಿಟ್ಟಿಸಿಕೊಂಡಿರುವ ಪ್ರಿಯಾಮಣಿ ಮೂಲತಃ ಬೆಂಗಳೂರು ಹುಡುಗಿ ಎನ್ನುವುದು ಗಮನಾರ್ಹ.

ಈಕೆ ಹುಟ್ಟಿದ್ದು ಕೇರಳದ ಪಾಲಕ್ಕಾಡ್‌ನಲ್ಲಾದರೂ ಓದಿ ಬೆಳೆದದ್ದೆಲ್ಲಾ ಬೆಂಗಳೂರಿನಲ್ಲೇ. ಪ್ರತಿಷ್ಠಿತ ಮೌಂಟ್ ಕಾರ್ಮಲ್ ಕಾಲೇಜಿನಲ್ಲಿ ಓದುತ್ತಿರುವಾಗಲೇ ಪ್ರಿಯಾಮಣಿ ಹಲವಾರು ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದಳು. ಈ ಸಂದರ್ಭದಲ್ಲೇ ಆಕೆ ತಮಿಳು ನಿರ್ದೇಶಕ ಭಾರತೀರಾಜಾರ ಕಣ್ಣಿಗೆ ಬಿದ್ದು ಆಕೆಗೆ ಚಿತ್ರರಂಗದಲ್ಲಿ ಅವಕಾಶ ಸಿಕ್ಕಿದ್ದು.

ಕನ್ನಡದ ಕೆಲವು ನಟೀಮಣಿಯರು ಒಂದೆರಡು ಚಿತ್ರಗಳಲ್ಲಿ ನಟಿಸಿದಾಕ್ಷಣ ಕನ್ನಡವನ್ನೇ ಮರೆತವರಂತೆ ನಟಿಸುತ್ತಾರೆ. ಆದರೆ ರಾಷ್ಟ್ರಮಟ್ಟದಲ್ಲಿ ಇಷ್ಟೆಲ್ಲಾ ಹೆಸರು ಮಾಡಿರುವ ಪ್ರಿಯಾಮಣಿ ಯಾವುದೇ ಅಳುಕು, ಅಂಜಿಕೆ ತೋರದೆ, ನಿರರ್ಗಳವಾಗಿ ಕನ್ನಡದಲ್ಲೇ ಮಾತಾಡುತ್ತಾಳೆ. ಅದು ಕನ್ನಡ ಭಾಷೆಯ ಮೇಲೆ ಆಕೆಗಿರುವ ಅಭಿಮಾನವನ್ನು ತೋರಿಸುತ್ತದೆ.

"ನನಗೆ ಭಾರತದ ಹಲವಾರು ಭಾಷೆಗಳು ಗೊತ್ತಿದೆ. ಹೀಗಾಗಿ ನಾನು ಯಾವುದೇ ಒಂದು ಭಾಷೆಗೆ ಸೀಮಿತವಾದ ನಟಿಯಲ್ಲ" ಎನ್ನುವ ಪ್ರಿಯಾಮಣಿ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸುತ್ತಲೇ ಕಲಾತ್ಮಕ ಚಿತ್ರಗಳತ್ತಲೂ ಒಲವು ತೋರಿಸುತ್ತಿರುವ ಪ್ರತಿಭಾವಂತ ನಟಿ. ತಾನೊಬ್ಬ ಪರಿಪೂರ್ಣ ನಟಿಯಾಗಬೇಕು ಎಂಬ ಬಯಕೆಯಿಂದ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ಈ ಕನ್ನಡದ ಹುಡುಗಿ ಇಲ್ಲದ ಅಫೇರುಗಳು, ಬೇಡದ ಗಾಸಿಪ್ಪುಗಳಿಗೆ ಬಲಿಯಾಗದಿದ್ದರೆ, ಮುಂದೆ ಇನ್ನೂ ಎತ್ತರಕ್ಕೆ ಏರುವುದಂತೂ ನಿಜ.

"ಪ್ರಿಯಾಮಣಿ ಸಿಕ್ಕಾಪಟ್ಟೆ ಸಂಭಾವನೆ ಕೇಳುತ್ತಾಳೆ. ಕನ್ನಡ ಚಿತ್ರಗಳಲ್ಲಿ ನಟಿಸಲು ಆಕೆ ನಖರಾ ಮಾಡ್ತಾಳೆ..." ಎಂಬಿತ್ಯಾದಿ ಆರೋಪಗಳು ಪ್ರಿಯಾಮಣಿಯ ವಿರುದ್ಧ ಕೇಳಿಬಂದಿದ್ದರು. ಆದರೆ ಅಂತಹ ಆರೋಪಗಳನ್ನು ಸಾರಾಸಗಟಾಗಿ ತಳ್ಳಿಹಾಕುವ ಪ್ರಿಯಾಮಣಿ "ಕನ್ನಡ ಚಿತ್ರರಂಗದಿಂದ ಹಲವಾರು ಆಫರ್‌ಗಳು ನನಗೆ ಬಂದಿರುವುದು ನಿಜ. ಆದರೆ ಯಾವ ಚಿತ್ರದ ಕತೆಯೂ ನನಗೆ ಸರಿ ಅನ್ನಿಸಿರಲಿಲ್ಲ. ಒಂದು ಚಿತ್ರದ ಕಥೆ ನನಗೇ ಇಷ್ಟವಾಗದ ಮೇಲೆ ನೋಡುಗರಿಗೆ ಅದು ಇಷ್ಟವಾಗಲು ಹೇಗೆ ಸಾಧ್ಯ?" ಎಂದು ನೇರವಾಗಿ ಪ್ರಶ್ನಿಸುತ್ತಾಳೆ.

ಈಗಾಗಲೇ ಪುನೀತ್ ರಾಜ್‌ಕುಮಾರ್ ಜೊತೆ 'ರಾಮ್' ಚಿತ್ರದಲ್ಲಿ ನಟಿಸಿರುವ ಪ್ರಿಯಾಮಣಿ ಈಗ ಬಿಡುಗಡೆ ಆಗಿರುವ ಗೋಲ್ಡನ್ ಸ್ಟಾರ್ ಗಣೇಶನ 'ಏನೋ ಒಂಥರಾ' ಚಿತ್ರದಲ್ಲೂ ನಟಿಸಿದ್ದಾಳೆ. ಮಾತ್ರವಲ್ಲ ಕುಳ್ಳ ದ್ವಾರಕೀಶ್ ನಿರ್ಮಿಸುತ್ತಿರುವ 'ವಿಷ್ಣುವರ್ಧನ!' ಚಿತ್ರದಲ್ಲೂ ಈಕೆಯೇ ಹೀರೋಯಿನ್. ಇವೆಲ್ಲದರ ಜೊತೆಗೆ ರಾಘವಲೋಕಿ ನಿರ್ದೇಶನದ, ಶಿವಣ್ಣನ 101ನೇ ಚಿತ್ರಕ್ಕೂ ಪ್ರಿಯಾಮಣಿಯೇ ಆಯ್ಕೆಯಾಗಿದ್ದಾಳೆ.

ಇದನ್ನೆಲ್ಲ ಗಮನಿಸಿದರೆ, ಪ್ರಿಯಾಮಣಿ ಬೇರೆ ಭಾಷೆಗಳಿಗಿಂತ ಕನ್ನಡಕ್ಕೇ ಆದ್ಯತೆ ಕೊಟ್ಟಂತೆ ಕಾಣಿಸುತ್ತಿದೆ ಮಾತ್ರವಲ್ಲ 2011ರಲ್ಲಿ ಈಕೆ ಕನ್ನಡದ ನಂ.1 ನಟಿ ಸ್ಥಾನ ಪಡೆಯುವುದರಲ್ಲಿ ಡೌಟಿಲ್ಲ.





ಮತ್ತೊಂದು ಲವ್!

ಶಿವರಾಜ್ ಕುಮಾರ್ ಅವರ 101ನೇ ಚಿತ್ರ ಬರುವ ಡಿಸೆಂಬರ್ 10ಕ್ಕೆ ಆರಂಭಗೊಳ್ಳುತ್ತಿದೆ.

ಈ ಹಿಂದೆ 'ಸತ್ಯ ಇನ್ ಲವ್' ಸಿನಿಮಾವನ್ನು ನಿರ್ದೇಶಿಸಿದ್ದ ರಾಘವ್ ಲೋಕಿ ಈ ಚಿತ್ರವನ್ನೂ ನಿರ್ದೇಶಿಸುತ್ತಿದ್ದಾರೆ. ಎಲ್ಲ ಅಂದುಕೊಂಡಂತೇ ಆಗಿದ್ದಿದ್ದರೆ ಈ ಹೊತ್ತಿಗೆ ರಾಘವ್ ಲೋಕಿ ನಿರ್ದೇಶನದಲ್ಲಿ 'ನಾನು ರಾಜಕುಮಾರ' ಎಂಬ ಐತಿಹಾಸಿಕ ಚಿತ್ರದಲ್ಲಿ ಶಿವಣ್ಣ ನಟಿಸಬೇಕಿತ್ತು. ಆದರೆ ಬಜೆಟ್ ಕಾರಣಕ್ಕೆ ಆ ಸಿನಿಮಾ ಸದ್ಯಕ್ಕೆ ಡ್ರಾಪ್ ಆಗಿದೆ.

ಹೀಗಾಗಿ ಈಗ ಇನ್ನೂ ಹೆಸರಿಡದ ಈ ಸಿನಿಮಾವನ್ನು ಆರಂಭಿಸುತ್ತಿದ್ದಾರೆ. ಈಗಾಗಲೇ ಪುನೀತ್ ಮತ್ತು ಗಣೇಶ್ ಜೊತೆ ನಾಯಕಿಯಾಗಿ ನಟಿಸಿರುವ ರಾಷ್ಟ್ರಪ್ರಶಸ್ತಿ ವಿಜೇತ ನಟಿ ಪ್ರಿಯಾಮಣಿ ಈ ಚಿತ್ರದ ನಾಯಕಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...